

ಸಾಹಿತ್ಯ ದಾಸೋಹ – ೧೨೨

ಸಮನ್ವಯ ಸಮಿತಿ ಕನ್ನಡವೇ ಸತ್ಯ

ಪ್ರಸ್ತುತಿ – ನೋಡಿಯೋ ಅಂತರ್ಜಾಲ ಸಾಹಿತ್ಯ ವೇದಿಕೆ





ನಿತ್ಯೋತ್ಸವ ಕವಿನಮನ

(ಶನಿವಾರ, ೯ನೇ ಮೇ ೨೦೨೦)

ನಾಡೋಜ ಶ್ರೀ ನಿಸಾರ್ ಅಹಮದ್ ಅವರ ಸವಿಸ್ಮರಣೆಗೆ ಅರ್ಪಣೆ

ದಾಸೋಹದಲ್ಲಿ ಸದಸ್ಯರು ವಾಚಿಸಿದ ನಿಸಾರ್ ಅವರ ಕವನಗಳು

ಮತ್ತು

ಅವರ ಅಭಿಪ್ರಾಯಗಳ ಸಂಗ್ರಹ

ಪ್ರಸ್ತಾವನೆ

ನೋಡಿಯೋ ಸಾಹಿತ್ಯ ವೇದಿಕೆಯ ಮೂಲಕ ಏಪ್ರಿಲ್ 11ರಂದು ನಡೆದ 176ನೇ ಸಾಹಿತ್ಯ ದಾಸೋಹದ ಯಶಸ್ವಿ ಪ್ರಯೋಗದ ನಂತರ 177ನೇ ದಾಸೋಹವನ್ನೂ ಇದೇ ವೇದಿಕೆಯಲ್ಲಿ ಮೇ 9ರಂದು ನಡೆಸಲು ಸಾಹಿತ್ಯ ದಾಸೋಹ ವೇದಿಕೆಯ ಸಂಚಾಲಕರು ತೀರ್ಮಾನಿಸಿದರು. ಈ ಮಧ್ಯೆ ಮೇ 3ರಂದು ನಾಡೋಜ ನಿಸಾರ್ ಅಹಮದ್ ಅವರು ದೈವಾಧೀನರಾಗಿದ್ದರಿಂದ ಅವರಿಗೆ ವೇದಿಕೆಯ ಮೂಲಕ ಶ್ರದ್ಧಾಂಜಲಿಯನ್ನು ಅರ್ಪಿಸುವ ಉದ್ದೇಶದಿಂದ "ನಿಸಾರ್ ನಮನ" ಕಾರ್ಯಕ್ರಮವನ್ನು ಮೇ 9ರಂದೇ ನಡೆಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ 50 ಸದಸ್ಯರು ಭಾಗವಹಿಸಿ 22 ಸದಸ್ಯರು ನಿಸಾರ್ ಅಹಮದ್ ಅವರ ಕವನಗಳನ್ನು ಪ್ರಸ್ತುತಪಡಿಸಿದರು. 2 ಘಂಟೆಗಳ ಕಾಲ ನಡೆದ ಕಾರ್ಯಕ್ರಮವು ಅತ್ಯಂತ ಯಶಸ್ಸನ್ನು ಕಂಡು ಎಲ್ಲ ಸದಸ್ಯರಿಗೂ ಸಂತೋಷವಾಯಿತು. ಈ ಕಾರ್ಯಕ್ರಮದ ಕಲಾಪಗಳನ್ನು ಹೆಚ್ಚುಕಾಲ ನೆನಪಿನಲ್ಲಿಟ್ಟುಕೊಳ್ಳುವ ನಿಟ್ಟಿನಲ್ಲಿ ಸದಸ್ಯರು ಮಂಡಿಸಿದ ಕವನಗಳು ಹಾಗೂ ಅವುಗಳ ವಿಮರ್ಶೆಗಳನ್ನು ಒಂದೆಡೆ ಶೇಖರಿಸಿ ಪಿಡಿಎಫ್ ರೂಪದಲ್ಲಿ ಪ್ರಕಟಿಸಲು ತೀರ್ಮಾನಿಸಲಾಯಿತು. ಅದರಂತೆ

Bengaluru
31-5-2020

ಸಂಚಾಲಕರು
ಸಾಹಿತ್ಯದಾಸೋಹ ಸಮಿತಿ

ಪರಿವಿಡಿ

1.	ಎಲ್ಲಿದ್ದೀಯ ನನ್ನ ಕವಿತ	- ಶ್ರೀಲಕ್ಷ್ಮೀ ಶ್ರೀನಿವಾಸನ್	4
2.	ಬಂಡೆ ಮತ್ತು ಕಲ್ಲಿನ ಚೂರುಗಳು	- ಗುರುಪ್ರಸಾದ್ ಹಾಲ್ಕುರಿಕೆ	6
3.	ರಂಗೋಲಿ ಮತ್ತು ಮಗ	- ಸರಸ್ವತಿ ನಟರಾಜ್	9
4.	ಎಲ್ಲ ಮರೆತಿರುವಾಗ	- ಮಂಗಳಾ ನಾಡಿಗ್	12
5.	ಕನ್ನಡವೆಂದರೆ ಬರಿ ನುಡಿಯಲ್ಲ	- ಗೋನ್ವರ್ ಕಿಶನ್ ರಾವ್	13
6.	ನಿಸಾರರ ನಲ್ನುಡಿಗಳು	- ಎಮ್.ಎಸ್.ನರಸಿಂಹ ಮೂರ್ತಿ	15
7.	ದೀಪಾರತಿ ಕವನ	- ಶಂಕರ ರಾವ್	18
8.	ಒಥೆಲೋ ನಾಟಕ ವಾಚನ	- ಧೀರೇಂದ್ರ ಸೀತಾರಾಮ್	19
9.	ಅಮ್ಮ, ಆಚಾರ, ನಾನು	- ಬಿ.ಎಸ್.ರವೀಂದ್ರ	20
10.	ಮೈಮುರಿದೆದ್ದಿರೆ	- ಸುಮಾ ಪ್ರಸಾದ್	24
11.	ಮಾಸ್ತಿ	- ಶ್ರವಣಕುಮಾರಿ	25
12.	ಸ್ವಾರಸ್ಯಕರ ಪ್ರಸಂಗ	- ಬಾಲು ಚೆಟ್ಲುರ್	29
13.	ನಮ್ಮ ಬಡಾವಣೆಯ ಕಥೆ	- ಶ್ರೀಪ್ರಕಾಶ್ ಹೆಚ್.ವಿ	30
14.	ಕವಿಯಿಲ್ಲದಿದ್ದರೆ	- ಡಾ.ಗೋವಿಂದ ಹೆಗ್ಡೆ	32
15.	ರಾಮನ್ ಸತ್ತ ಸುದ್ದಿ	- ಮಹಾಬಲ ಕೆ.ಎನ್	37
16.	ನಿನ್ನ ನೆರವಿಲ್ಲದೆಯೆ ತೊಳಲಲಿರುವೆ	- ಅನ್ನಪೂರ್ಣ ಸೀತಾರಾಮ್	40
17.	ತುಂಬಿದ ತಪ್ಪಲೆ ತುಂಟ ಪೋರರು	- ಶುಭಾ ವಾಸುಕಿ	41
18.	ಹಕ್ಕು	- ಡಾ.ಜಯಂತಿ ಮನೋಹರ	44
19.	ನಾಡದೇವಿಯೇ ಕಂಡೆ ನಿನ್ನ ಮಡಿಲಲ್ಲಿ	- ವೆಂಕಟಸುಬ್ಬಯ್ಯ	46
20.	ದ್ವಂದ್ವ	- ಚೈತ್ರಾ ಶಿವಯೋಗಿ ಮಠ	48
21.	ನಿಮ್ಮೊಡನಿದ್ದೂ ನಿಮ್ಮಂತಾಗದೆ	- ಶುಭಶ್ರೀ ಪ್ರಸಾದ್	51
22.	ಅಧ್ಯಕ್ಷ ಭಾಷಣ	- ಸೀತಾರಾಮ್	53
23.	ಶ್ರೀ ನಿಸಾರ ಅಹಮದ್ - ಸಂಕ್ಷಿಪ್ತ ಪರಿಚಯ	- ಗುರುಪ್ರಸಾದ್ ಹಾಲ್ಕುರಿಕೆ	56
24.	ಕವಿಮಿತ್ರರ ಅಚ್ಚುಮೆಚ್ಚಿನ ಕಾವ್ಯ	- ಪ್ರೊ.ಎಚ್ ಎಸ್ ಕೃಷ್ಣಸ್ವಾಮಿ ಅಯ್ಯಂಗಾರ	58
25.	ನಿಸಾರ ನಿಮಗಿದೋ ನಮನ		
	- ಅಭಿನಂದನಾ ಗ್ರಂಥದ ಪರಿಚಯ	- ಗುರುಪ್ರಸಾದ್ ಹಾಲ್ಕುರಿಕೆ	62

ಎಲ್ಲಿದ್ದೀಯ ನನ್ನ ಕವಿತೆ?

ಸಂದಿಗೊಂದಿಯನೊಂದೂ ಬಿಡದೆ ಬೆದಕಿದರು
ಮೊಹಲ್ಲವನಿಡೀ ಝಡತಿಸಿ ಕೆದಕಿದರು
ಸಿಕ್ಕದೇ ಸತಾಯಿಸಿದೆ
ವ್ಯಥೆಯಲ್ಲಿ ಬೇಯಿಸಿದೆ
- ಸಾಕು ನಾಯಿಯ ಹಾಗೆ
ಕಳೆದು ಪೋಗಿರುವ ನನ್ನ ಮುದ್ದು ಕವಿತೆ

ಹೆಸರು ಕರೆದಾಕ್ಷಣ ದೌಡೋಡಿ ಬರುತಿತ್ತು
ಮುಂಗಾಲುಗಳನೆತ್ತಿ ಎದೆಯುದ್ದ ನಿಲುತಿತ್ತು
ಸಿಳ್ಳು ಹಾಕಿದ ಒಡನೆ ಬಾಲವಾಡಿಸುತಿತ್ತು
- ಮಿಗಿಲಾಗಿ ಸಾಕಿ ಸಲಹಿದ ನನ್ನ ಚೆನ್ನ ಕವಿತೆ
ಈಗೆಲ್ಲಿ ಕಣ್ಮರೆಯಾಯ್ತೊ ಜೀವದೊರತೆ ?

ಮನದ ಕಾಂಪೌಂಡನ್ನು ಬಿಟ್ಟು ಕದಲದೆ
ಸತತ ಚೆನ್ನಾಟ ಆಡುತಿತ್ತು:
ಅನ್ಯ ವಿಷಯದ ಯಾರೆ ಆಗಂತುಕರು ಗೇಟ ಬಳಿ
ಸುಳಿದಾಡಿದರೆ ಸಾಕು ಬೊಗಳಿ ಕಾಡುತ್ತಿತ್ತು

ಭಾವಕ್ಕೆ ಬಿಗಿದಿದ್ದ ಸರಪಳಿಯ ಕಿತ್ತು
ಪೋಯಿತಾದರೂ ಎಲ್ಲಿ ಹುಚ್ಚು ಖೋಡಿ?
ಬೆಚ್ಚನೆಯ ಮನೆ ತ್ಯಜಿಸಿ, ಮೆಚ್ಚಿನಕ್ಕರೆ ತೊರೆದು
ಹುಚ್ಚಡರಿ ಪೊಕ್ಕಿರುವುದಾವ ಗಲ್ಲಿ?
ಸೂರೆಗೊಂಡಿತು ಅದನು ಯಾರ ಮೋಡಿ?
ಯಾವ ಹೊರಗಿನ ವಿಷಯದಾಮಿಷದ ವಾಸನೆಗೆ
ಮಾರು ಪೋಯಿತೋ ಕವಿತೆ?
ಯಾವುದು ವಿಯೋಗಿಸಿತು ನನ್ನಿಂದ ಅದನಿಂತು,
ಪ್ರೀತಿ ಆರೈಕೆಗಳ ಯಾವ ಕೊರತೆ?

ಹೊಸದಾಗಿ ನಾ ತಂದು ಹೆಚ್ಚಿನಾಸ್ಥೆಯ ವಹಿಸಿ
ದಿನವಹಿ ಪೋಷಣೆಯ ತಪ್ಪದೆಯೆ ನಿರ್ವಹಿಸಿ
ಸಾಕಿರುವ ಗದ್ಯದತಿ ಚೆಂದನೆಯ ಬೆಕ್ಕು
ಕಿತ್ತುಕೊಂಡಂತೆನಿಸಿ ಒಡೆಯನೊಲವಿನ ಹಕ್ಕು.
ಮನ ನೊಂದು, ಒಳಗೊಳಗೆ ಭಾರಿ ನೋವನು ತಿಂದು
ನನ್ನ ತೊರೆಯಿತೆ ಕವಿತೆ?
ಸವತಿ ಮತ್ಸರ ರಹಿತೆ? (1)

ನನ್ನ ಮೊದಲನೆ ಒಲವು ಹೇಗೋ ಹಾಗೇ
ನನ್ನ ಕೊನೆಯುಸಿರು ಸಹ ನೀನೆ -
ನೀ ಬಳಿಯೊಳಿಲ್ಲದಿರೆ ನೆಮ್ಮದಿಯ ನಾ ಕಾಣೆ.
ನನ್ನ ಬಾಳ್ವೆಯ ಸಾರ್ಥಕತೆಯನನುದಿನ ಹೊತ್ತು
ಜಗದಲ್ಲಿ ಮೆರೆಸುವ ವೈಭವದ ಮೇನೆ -
ಓ! ನನ್ನ ಕವಿತೆ
ಮತಿರಹಿತೆ! (2)

ವಿಮರ್ಶೆ

ಕೂತಲ್ಲಿ ನಿಂತಲ್ಲಿ ಕಂಡ ನೋಟಗಳು, ದರ್ಶನಗಳೆಲ್ಲವೂ ಸಮರ್ಪಕ ಪದಗಳ ಮೂಲವಾಗಿ ಕವನವಾಗಿ ಹೊಮ್ಮಿದಾಗ ಮೂಡುವ ನಿರುಮ್ಮಳ ಭಾವಕ್ಕೆ ಕವಿ ಪಕ್ಕಾಗಿದ್ದಾರೆ. ಸ್ಫೂರ್ತಿ ಕಾಣೆಯಾದಾಗ ಏನೋ ಕಳೆದು ಕೊಂಡ ಭಾವ. ಮುದ್ದು ನಾಯಿಮರಿಯಂತೆ ಪಕ್ಕದಲ್ಲೆ ಇದ್ದು ಸದಾ ಸ್ನೇಹವನ್ನು ಸೂಸುತ್ತಿದ್ದ ಕವಿತೆ ಇಂದು ಬಾರದಾಗಿದೆ. ಕವಿತೆ ಕವಿಯನ್ನು ಆವರಿಸಿಕೊಂಡಿದ್ದ ರೀತಿ ಬಹಳ ಸುಂದರವಾಗಿ ನಿರೂಪಿತವಾಗಿದೆ. ಮನದೊಳಗೆ ಬೇರಾವ ವಿಷಯವೂ ಬಾರದಂತೆ ಕಾವಲು ಕಾಯುವುದು, ಜೀವದೊರತೆ ಎನ್ನುವುದು. ಕವನ ಮೇಲಿನ ಕವಿಯ ಅಕ್ಕರೆ ಸ್ಪಷ್ಟವಾಗಿದೆ. ಹುಚ್ಚುಖೋಡಿ ಎಲ್ಲಿ ಹೊಯಿತೊ? ನನ್ನ ಯಾವ ತಪ್ಪು ಅದನ್ನು ನನ್ನಿಂದ ದೂರ ಮಾಡಿತೊ? ಆರೈಕೆ ಸಾಲದಾಯಿತೊ? ಗದ್ಯದ ಕಡೆ ಮನಸ್ಸು ಮಾಡಿದೆನೆಂದು ನೊಂದುಕೊಂಡಿತೊ ಎಂದು ಪೇಚಾಡುತ್ತಾರೆ ಕವಿ. ಮತ್ತೆ ಕವನ ಮಾನುಷ ರೂಪವೊ ಎನ್ನುವಂತೆ ನೀನೆ ನನ್ನ ಮೊದಲ ಹಾಗು ಕಡೆಯ ಪ್ರೀತಿ, ಬೇರಾವುದೊ ಆಮೀಷಕ್ಕೆ ಸಿಕ್ಕ ಬೇಡ ಬೇಲಿಯೊಳಗಿರುವುದು ಶ್ರೇಯಸ್ಸು ಎಂದು ಬುದ್ಧಿಮಾತು ಹೇಳಿ ಅನುನಯಿಸಿ ಕರೆಯುತ್ತಾರೆ.
ಇಡಿ ಪದ್ಯದಲ್ಲಿ ಕವನ ಕವಿಯ ಮಾತನ್ನು ಯಾವಾಗಲೂ ಕೇಳುವ, ಕವಿಯ ಅಧೀನದಲ್ಲಿರುವ ಆದರೆ ತಕ್ಕ ಆರೈಕೆ ಸಿಗದಿದ್ದರೆ ಮರೆಯಾಗುವ ವಸ್ತುವಾಗಿರುವುದು ಕಾಣಿಸುತ್ತದೆ.
ಗದ್ಯದ ಧಾಟಿಯಾದರೂ, ನಾಯಿಗೆ ಹೊಲಿಕೆ, ಕೊಂಚ ಪ್ರಾಸ, ಅನಿಯಮಿತ ಸಾಲುಗಳಿದ್ದರೂ ಕಾಣಿಸುವ ಲಯ ಪದ್ಯದೆಡೆಗೆ ಹೊರಳಿಸುತ್ತದೆ. ಕವನದ ವಸ್ತು ಸರಿಸುಮಾರು ಪ್ರತಿಯೊಬ್ಬ ಕವಿಯೂ ಆಗಾಗ ಅನುಭವಿಸುವ ಭಾವವೇ ಆಗಿರುವುದರಿಂದ ಸರ್ವಕಾಲಿಕ ಪ್ರಸ್ತುತತೆಯನ್ನು ಪಡೆಯುತ್ತದೆ. ಆದ್ದರಿಂದಲೆ ಕವಿ ಅನುಭವಿಸುವ ಭಾವಪಲ್ಲಟಗಳನ್ನು ಅವರಷ್ಟೆ ನಾವೂ ಅನುಭವಿಸಿದೆವೆನೊ ಎನಿಸಿ ಕವಿತೆ ಮನದಲ್ಲಿ ಗಟ್ಟಿಯಾಗಿ ಕೂರುತ್ತದೆ.

ಪ್ರಸ್ತುತಿ - ಡಾ. ಶ್ರೀಲಕ್ಷ್ಮಿ ಶ್ರೀನಿವಾಸನ್

ಕವನ - ಬಂಡೆ ಮತ್ತು ಕಲ್ಲಿನ ಚೂರುಗಳು

(ಕವನ ಸಂಕಲನ - "ಅರವತ್ತೈದರ ಸಿರಿ")

ದೈತ್ಯ ಹೆಬ್ಬಂಡೆ ಗರ್ವದಲಿ ನಿಮಿರಿ ಮಂಡೆ,
ತಾನೊಬ್ಬನೇ ಪರಿಸರದ ಭೀಮ,
ಅನಭಿಷಿಕ್ತ ಸಾರ್ವಭೌಮ
ಎನುತ ಠೇಂಕರಿಸಿತ್ತು ಸುತ್ತ ಮುತ್ತ
ತನ್ನ ದರ್ಪಿಷ್ಟ ಮಸ್ತಿಯ ಗತ್ತ.
ಅದರ ಅಡಿಯ ಬಳಿ ಬಾಯ್ತೆರೆದು ಕೊರಕಲಿನಲಿ
ಅಳಲಿವೆ ದೈನ್ಯದಲಿ ಅನುದಿನ ಅಸಂಖ್ಯ ಕಲ್ಲು ಚೂರುಗಳು;
ಬಂಡೆ ಕಿವಿಗೇರದನಾಥ ಆರ್ತ ದೂರುಗಳು.

ಕಿಚಾಯಿಸುತ್ತದೆ ಕುಚೋದ್ಯದಲಿ ಹೆಬ್ಬಂಡೆ
ಠೀವಿಯಲಿ ಭಾಷಿಸಿ, ಶಿಲೆ ತುಣುಕುಗಳನುದ್ದೇಶಿಸಿ:
'ತೊತ್ತುಗಳಿರಾ, ನಿರ್ಲಕ್ಷ್ಯ ದ ನಿತ್ಯ ತುತ್ತುಗಳಿರಾ,
ಬಿದ್ದಲ್ಲೆ ಬಿದ್ದು ನೀವು ಒದ್ದಾಡುತ್ತೀರಿ;
ಮುಳ್ಳು, ಕುರುಚಲು, ಕಳೆ, ಹಲ್ಲಿ,
ಹುಳು ಹುಪ್ಪಟೆಗಳ ಅಹೋರಾತ್ರಿ ಮುದ್ದಾಡುತ್ತೀರಿ.
ನನ್ನಂತೆ ಹಾದಿಗರ ನಿಬ್ಬೆರಗ ನೋಟಕ್ಕೆ
ಮುಗಿಲ ಜೂಟಾಟಕ್ಕೆ
ಮೈ ಸೆಟೆಸುವವಕಾಶ ನಿಮಗೆಲ್ಲಿ?
ಹರಭಾಗ್ಯ ಹುಟ್ಟುಗಳು,
ಸೃಷ್ಟಿಯ ತ್ಯಾಜ್ಯ ಗಷ್ಟುಗಳು. (1)

ಮರು ನುಡಿದವು ವಿನಮ್ರತೆಯಲಿ
ಸ್ವಗೋತ್ರೀಯ ಚೂರುಗಳು,
ಪ್ರಕೃತಿಯ ಸದವಕಾಶವಂಚಿತ ಲಾಚಾರುಗಳು:
'ಅಯ್ಯಾ! ಸ್ವಘೋಷಿತ ಮಹನ್ಮಹನೀಯ
ಪರಿಸರ ಕೃಪಾಪೋಷಿತ ಶಿಖರ ಸ್ಥಾನೀಯ,
ಆಗಿದ್ದೆವೊಮ್ಮೆ ನಾವೂ ನಿನ್ನಂತೆ
ಬಂಡೆಯ ಅಖಂಡ ಅವಯವ,
ವಿಜೃಂಭಿಸಿದ್ದೆವು ಮೆಲ್ಮೆ ಎತ್ತರದಲಿ ನಿರಾತಂಕ, ನಿರ್ಭಯ.
ಹಂಗಿಸಿದ್ದೆವು ನಿನ್ನಂತೆ ಹಳ್ಳದಾಳಕ್ಕೆ ಬಿದ್ದವರ,
ಅನವರತ ಅಪಮಾನ, ನೋವು ಮೆದ್ದವರ.
ನಮ್ಮ ಸ್ವಯಮಾರೋಪಿತ ಘನತೆ, ಬಲ, ಸುಸ್ಥಿರತೆಯೆದುರು
ಯಾವುದಿದೆ ಸಾಟಿ ಎನುವಹಂಕಾರದಮಲಿನ ನೆದರು
ಜಾರಿಸಿತು ನಮ್ಮ ನೀ ಅಧಮತಮ ಗತಿಗೆ
ತಾತ್ಸಾರ, ಯಃಕಶ್ಚಿತತೆಯ ಅಧೋಸ್ಥಿತಿಗೆ.

ನಮಗಿಂತ ಬಲು ಘಟ್ಟಿಗ ಕಾಲದ ಆ ಕಲ್ಲು ಕುಟ್ಟಿಗ:
ಮಳೆ ಬಿಸಿಲು ಹಿಮ ಗಾಳಿಗಳ ಉಳಿ, ಹತ್ಯಾರುಗಳ
ಸುದೀರ್ಘಾವಧಿಯ ಎಡೆಬಿಡದ ಪೆಟ್ಟುಗಳಿಂದ
ನಮ್ಮ ನೀ ನಗೆಪಾಟಲಿನ ನಾಯಿ ಪಾಡಿಗೆ ತಂದ:
ಇವನ ಜೊತೆ ನರ ಕೂಡ ಪಣ ಹೂಡಿ
ಪುದಿಗೈದ ನಮ್ಮನ್ನು ಸಿಡಿ ಮದ್ದ ಜೊತೆಗೂಡಿ.
ಉಬ್ಬದಿರು ಅಣ್ಣಯ್ಯ,
ನಾಳೆ ಕಾದಿದೆ ನಿನಗೂ ಮಾರಿ ಹಬ್ಬ,
ಸಮಯ ಸಂದಂತೆ ಕಂದರಕ್ಕಿಳಿಯುವುದು
ನಿನ್ನಹಂಕೃತಿಯ ದಿಬ್ಬ.
ಆಲಿಕಲ್ಲುಗಳ ಕರಗಿನ ಕೊರಗನು ನೋಡಿ
ಮಂಜುಗಡ್ಡೆಯಂತೆ ನಗಬೇಡ ಖಿಕ್ಕೆಂದು.
ಮರೆತು ನೀನು ಸಹ ಮುಂದೊಮ್ಮೆ ಸ ಖೋಡಿ
ಕಾಲ ಬಕಾಸುರನ ಒಕ್ಕುಡಿತೆ, ಮುಕ್ಕೆಂದು. (2)

ಇಂತೊರೆದ ಶಿಲಾ ವಾಮನರನೇಕರ ನೊಂದ ದನಿ ಕೇಳಿ,
ಪೊದೆಯ ಮೇಲಿನ ಅನಾಮಕ ಕಿರು ಹಕ್ಕಿ ಅನುಕಂಪ ತಾಳಿ
ಬಳಿ ಬಂದು ನಿಂತು ಸಾಂತ್ವನಿಸಿತಿಂತು:
' ಕಲ್ಲಿನ ಕಂಗಾಲ ತುಣುಕುಗಳೆ,
ಹೆಬ್ಬಂಡೆಯಣಕುಗಳೆ,
ಅರ್ಥವಾಗುತ್ತದೆ ನನಗೆ
ನಿಮ್ಮ ಮನಸಿನಾಳದ ಅಳಲು,
ಅಸ್ತಿತ್ವವನು ಕವಿದಿರುವ ಕಡು ವಿಷಾದದ ನೆಳಲು.
ಕುಸಿಯಬೇಕಿಲ್ಲ ನೀವು ಕೀಳರಿಮೆ ಕೂಪದ ತಳಕ್ಕೆ,
ಉಣಿಸಾಗಬೇಕಿಲ್ಲ ನಿತ್ಯ ಅವಹೇಳನದ ಹುಳಕ್ಕೆ.
ನಿಮ್ಮ ಇರುವಿಕೆ ಹೆಬ್ಬಂಡೆಗಿಂತಲೂ ಧನ್ಯ,
ಸರ್ವಂಸಹೆ ಪ್ರಕೃತಿಯ ದೃಷ್ಟಿಯಲಿ
ನೀವು ಸಹ ನಿರತಿಶಯ ಸನ್ಮಾನ್ಯ.

ನಿಮ್ಮಂಥ ಹುಲು ಕಲ್ಲು ಚೂರುಗಳು
ಚೆನ್ನ ತೆಗೆದಿರುವ ಸುಳಿವು ನೀಡುವ ಹಾಗೆ,
ಅದರ ನಿಚ್ಚಳ ನಿಕ್ಷೇಪದಕ್ಷಯ ಹೆಚ್ಚಳವನು
ಆಸುಪಾಸಿಗೆಲ್ಲ ಕೂಗಿ ಸಾರುವ ಹಾಗೆ,
ಬಂಜೆ ಹೆಬ್ಬಂಡೆ ಸೂಚಿಸುವುದಿಲ್ಲ:
ಗಡಾರಿ, ಡೈನಮೈಟಿಗೆ ಹುಡಿಯಾಗಿ ನಿಮ್ಮಂತ
ಅದರಿರವು ಕೃತಾರ್ಥವಾಗುವುದಿಲ್ಲ. (3)

ವಿಮರ್ಶೆ

ಬಂಡೆ ಮತ್ತು ಕಲ್ಲು ಚೂರುಗಳು "ಅರವತ್ತೈದರ ಸಿರಿ" ಕವನ ಸಂಕಲನದಲ್ಲಿನ ಒಂದು ಅತ್ಯುತ್ತಮ ಕವನ. ಕವಿಯು ಮನುಷ್ಯನ ಜೀವನದ ವಾಸ್ತವ ಗ್ರಹಿಕೆಯನ್ನೇ ಹಿನ್ನೆಲೆಯಾಗಿಟ್ಟುಕೊಂಡು ರಚಿಸಿರಬಹುದು ಎನಿಸುತ್ತದೆ.

ದೊಡ್ಡ ಬಂಡೆಯೊಂದು ತಾನೇ ಚಕ್ರಾಧಿಪತಿ ಎಂದು ಗರ್ವದಿಂದ ಬೀಗುತ್ತಾ ತನ್ನ ಸುತ್ತಲಿನ ಕಲ್ಲು ಚೂರುಗಳನ್ನು ಹೀನಾಯವಾಗಿ ಕಾಣುತ್ತಾ ಅವುಗಳನ್ನು ಅವಮಾನಿಸುವುದರೊಂದಿಗೆ ಕವನವು ಪ್ರಾರಂಭವಾಗುವುದನ್ನು ನಾವು ಗಮನಿಸಬಹುದು. ಆದರೆ ಇಲ್ಲಿ ಬಂಡೆ ಹಾಗೂ ಕಲ್ಲು ಚೂರುಗಳು ಸಾಂಕೇತಿಕ. ಒಂದು ಅಧಿಕಾರಿಶಾಹಿಯ, ಶ್ರೀಮಂತಿಕೆಯ, ಬಲಶಾಲಿಗಳನ್ನು ಪ್ರತಿನಿಧಿಸಿದರೆ, ಮತ್ತೊಂದು ಶೋಷಿತರ, ಅಧಿಕಾರರಹಿತರ, ದುಃಖಿತರನ್ನು ಪ್ರತಿನಿಧಿಸುತ್ತದೆ.
ಭವಿಷ್ಯದಲ್ಲಿ ಅಸಹಾಯಕರ, ಶೋಷಿತರ ಸಾಧ್ಯತೆಯ ಬಗ್ಗೆ ಹಾಗೂ ಭೂತಕಾಲದ ವೈಭವ ಮತ್ತು ವಾಸ್ತವದ ದಾರುಣ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.

ಈಗಿನ ಅಸಹಾಯಕ ಸ್ಥಿತಿಯಲ್ಲಿರುವ ವ್ಯಕ್ತಿತ್ವವೂ ಕೂಡಾ ಒಂದು ಕಾಲದಲ್ಲಿ ಅಧಿಕಾರವನ್ನು ಅನುಭವಿಸುತ್ತಿತ್ತು. ಆಗ ಅಧಿಕಾರದ ಮದದಲ್ಲಿ ಅಬಲರನ್ನು ಶೋಷಿಸಿತ್ತಿತ್ತು ಹಾಗೂ ಹಂಗಿಸುತ್ತಿತ್ತು. ಸಾಮಾನ್ಯವಾಗಿ ಎಲ್ಲರಲ್ಲಿನ ಅಂತರಂಗದಲ್ಲಿ ಹುದುಗಿರಬಹುದಾದ ಸರ್ವಾಧಿಕಾರದ ಗುಣವು ಕಾಲಕ್ರಮದಲ್ಲಿ ವ್ಯಕ್ತಿಯ ವಯಸ್ಸು ಹೆಚ್ಚುತ್ತಿದ್ದಂತೆ ಕ್ಷೀಣಿಸುವುದು. ಅಂತಹ ಸಂದರ್ಭದಲ್ಲಿ ಅಧಿಕಾರವನ್ನು ಆಕ್ರಮಿಸಿಕೊಂಡ ಯುವಜನಾಂಗವು ಅಧಿಕಾರದ ಅಮಲಿನಲ್ಲಿ ಕೆಳಗಿರುವವರನ್ನು ಹೇಯವಾಗಿ ಕಂಡು ಮರುಗುವುದು ಸಹಜವೇ. ಹಾಗಾಗಿ ಈ ಕವನವು ಶೋಷಿತರ ಧ್ವನಿಯನ್ನು ಪ್ರತಿನಿಧಿಸುತ್ತದೆ.

ಇಲ್ಲಿ ಬದುಕನ್ನು ಯಾವುದೇ ಸಂದರ್ಭದಲ್ಲೂ ಸಹಿಸಿಕೊಳ್ಳಬೇಕೆಂಬ ಛಲವಿದೆ.

ಕಾಲನನ್ನು ಕಲ್ಲು ಕುಟ್ಟುವವನಿಗೆ ಹೋಲಿಸಿರುವುದು ಅತ್ಯಂತ ಸಹಜವಾಗಿದೆ. ಇದರ ಅರ್ಥವೆಂದರೆ ಕಾಲನ ಪ್ರಭಾವದಲ್ಲಿ ಒಂದಲ್ಲ ಒಂದು ದಿನ ಎಲ್ಲವೂ ಸಿಕ್ಕಿ ಅಳಿಯಲೇ ಬೇಕು. ಇದು ಸಾರ್ವಕಾಲಿಕ ಸತ್ಯ. ಆದರೂ ಎಲ್ಲರೂ ಇದನ್ನು ಮರೆಯುವರು.

ಕಲ್ಲಿನ ಚೂರುಗಳು ಬಂಡೆಗೆ ಉತ್ತರಿಸುತ್ತಿರುವುದು ನಮ್ರತೆಯಿಂದ ಕೂಡಿದ್ದರೂ ಅದರಲ್ಲಿ ಪ್ರತಿಭಟನೆಯ ಸುಳಿವನ್ನು ಕಾಣಬಹುದು. ಇದು ಅಧಿಕಾರಿಶಾಹಿಯ ವಿರುದ್ಧದ ಶಾಂತಿಯುತ ಪ್ರತಿಭಟನೆ ಎನ್ನಬಹುದು.

ಕವನದ ಮೂರನೇ ಭಾಗದಲ್ಲಿ ಮೂರನೇ ಜೀವವೊಂದು ಅನಾಮಿಕ ಪುಟ್ಟ ಹಕ್ಕಿಯಾಗಿ ಪ್ರವೇಶಿಸಿ ತನ್ನ ಲೋಕಾನುಭವ, ಜೀವಿಯ ಬಗೆಗಿನ ಪ್ರೀತಿ ಹಾಗೂ ಸಹಾನುಭೂತಿಗಳಿಂದ ಶೋಷಿತಕ್ಕೆ ಒಳಗಾದ ವ್ಯಕ್ತಿಗೆ ತನ್ನ ಅನುಕಂಪದ ನುಡಿಗಳಿಂದ ಸಾಂತ್ವನವನ್ನು ನೀಡುತ್ತದೆ. ಈ ರೀತಿಯ ಸಾಂತ್ವನದ ನುಡಿಗಳು ತುಳಿತಕ್ಕೆ ಒಳಗಾದ ಜೀವಿಗೆ ತಂಪನ್ನುಂಟುಮಾಡುತ್ತದೆ.

ಚಿನ್ನದ ನಿಕ್ಷೇಪವನ್ನು ಕಲ್ಲು ಚೂರುಗಳು ತಿಳಿಸುವುದೇ ಹೊರತು ಬಂಡೆ ಅಲ್ಲ. ಈ ಸತ್ಯವನ್ನು ಪುಟ್ಟ ಹಕ್ಕಿಯು ಕಲ್ಲು ಚೂರುಗಳಿಗೆ ನೆನಪು ಮಾಡಿಕೊಡುವುದರೊಂದಿಗೆ ಕವನವು ಮುಗಿಯುತ್ತದೆ.

ಪ್ರಸ್ತುತಿ - ಗುರುಪ್ರಸಾದ್ ಹಾಲ್ಕುರಿಕೆ

ರಂಗೋಲಿ ಮತ್ತು ಮಗ
(ಕವನ ಸಂಕಲನ - ಅನಾಮಿಕ ಆಂಗ್ಲರು)

ನಮ್ಮದೊಂದು ಮನೆ ವಿನಾ
ಮಿಕ್ಕೆಲ್ಲ ಮನೆಯೆದುರು ಪರಿಶುಭ್ರ ಹಲ್ಲಂತೆ
ಮುಂಜಾನೆ ರಂಗವಲ್ಲಿ:
ಕಿಲಿಕಿಲಿಸಿದಂತೆ ಇಡಿ ಗಲ್ಲಿ.
ಹಾಲಿಗೆ ಹೊರಟಾಗ ಹೊತ್ತಾರೆ
ಚಿತ್ತಾಪಹಾರಿ ಚಿತ್ತಾರ
ಖಾಲಿ ಮನಸಿನ ಖೋಲಿ ಖೋಲಿಗಳ ಬೀಗ
ತೆರೆದು, ತುಂಬುವುದೆಂಥ ಭಾವಾವೇಗ!

ಈ ಡಿಸ್ಸೈನಿಗೆ ಹಾಗೆ ಅದಿಲ್ಲ,
ಅದರಂತೆ ಇದಿಲ್ಲ;
ಜ್ಯಾಮಿತಿಯ ಗಡಸು, ಜಟಿಲ ಸೂತ್ರಗಳಿಗೆಲ್ಲ
ದಕ್ಕಿರುವುದಿಲ್ಲಿ ಮಿಗಿಲರ್ಥ;
ಮೃದು ಬೆರಳ ಪರಿಹಾರ.
ಕಾಲೇಜು ಕಲಿಯದ ಸುಮಂಗಲೆ
ರಂಗೋಲಿ ನೆವದಿಂದ ನೀಡಿದ್ದಾಳೆ
ಪ್ರತಿದಿನವೂ ಸೂತ್ರಗಳಿಗಾಕಾರ.

ಕೋನ ರೇಖೆಗಳೇನು? ಚೌಕ ವೃತ್ತಗಳೇನು!
ಸ್ವಸ್ತಿಕ, ಮಂಡಲ, ಚುಕ್ಕೆ;
ಯಾವುದೋ ಆರ್ಷ ಮಂತ್ರಕ್ಕೆ
ಒಡಮೂಡಿದೆ ಕಲೆಗಾರಿಕೆಯ ರೆಕ್ಕೆ. (1)

ರಂಗವಲ್ಲಿ
ನನ್ನೆದೆಯ ಕದ್ದದ್ದು ಚಿಕ್ಕಂದಿನಲ್ಲಿ.
ಇದರ ಶುರು ಮತ್ತು ಕೊನೆಯಲ್ಲಿ ಎಂದು
ಗೊತ್ತಾಗದೆ ನೊಂದು
ತಲೆಕೆಡಿಸಿಕೊಂಡಿದ್ದೇನೆ ಸಲಸಲಕ್ಕೂ;
ಈ ಬೆಳ್ಳನೆಯ ಕಗ್ಗಾಡ ಕಣ್ಣಿಂದ ಹೊಕ್ಕು.
ನೆರೆಯಾಕೆ ಬಾಗಿ
ಚಣದಲ್ಲಿ ಬಿಡಿಸಿದ ವಿಚಿತ್ರಕ್ಕೆ ಬೆರಗಾಗಿ
ಚಾಕ್ ಪೀಸು ಪುಡಿಯಿಂದ ನಮ್ಮ ಪಡಸಾಲೆಯಲಿ
ನಕಲಿಸಲು ಹೋಗಿ ಸಲಸಲವೂ ಸೋತಿದ್ದೆ;
ಕಾಫರನ ಬಿರುದು ಹೆತ್ತವಳಿಂದ ಹೊತ್ತಿದ್ದೆ.

ಪಕ್ಕದ ಮನೆಯ ಅಯ್ಯಂಗಾರರ ವೇದವಲ್ಲಿ
ಬಿಡಿಸಿದ್ದರೊಮ್ಮೆ ತೊಡಕಾದ ರಂಗವಲ್ಲಿ.
ನೆಟ್ಟಕಣ್ಣಿನ ನನ್ನ ಕೌತುಕಕ್ಕೆ
ಮೆರೆಸಿ ತಮ್ಮೆಲ್ಲ ಹಲ್ಲ -
'ಸಾಬರು ಯಾಕೋ ರಂಗೋಲಿ ಇಡೊಲ್ಲ?'
ದೇವರೇ, ಜವಾಬು ಗೊತ್ತಿದ್ದರೆ!
ನಾಚಿ ನೀರಾಗಿದ್ದೆ.

ನಮ್ಮ ಔಟ್ ಹೌಸಿನ ಜನ
ಹೊಸ್ತಿಲ ಬಳಿ ರಂಗೋಲಿ ಬಿಡಿಸಿದ ಹೊತ್ತು
ಅಜ್ಜಿ ತೋರಿರಲು ಬಿರುನುಡಿಯ ದೌಲತ್ತು
ಅಬ್ಬ! ನನಗೆಂತ ನೋವಾಗಿತ್ತು.
ಒಮ್ಮೆ ಯಾವುದು ಚಿಂತೆಯಲ್ಲಿ ಬಗೆ ನೆಟ್ಟು,
ಮನೆಯೊಂದರ ರಂಗೋಲಿ ಮೇಲೆ ಅಡಿಯಿಟ್ಟು
ಸರಕ್ಕನೆಳೆದುಕೊಂಡಿದ್ದೆ, ಕೆಂಡತುಳಿದವನಂತೆ;
ಜೊತೆಗೆ ಆ ಮನೆಯವರು ಕಂಡರೋ ಎಂಬ ಚಿಂತೆ. (2)

ಆರು ವರ್ಷದ ಹಿರಿಯ ಮಗ ಮೊನ್ನೆ
ಹಾಲು ತರಲು ಹೊರಟ ನನ್ನೊಡನೆ.
ರಂಗೋಲಿ ನೋಡುತ್ತಾ ನಡೆದಿದ್ದೆ;
ಗಮನಿಸಿದ ಅವನೆಂದ:
ಯಾಕೆ ಬಿಡಿಸುತ್ತಾರೆ ಇವರು ಹೀಗೆ ದಿನಾ ಚಕ್ರಬಂಧ?
ವಿವರಣೆಯ ಗೆಣ್ಣು ಗಂಟುಗಳನೆಲ್ಲ
ಹೆರೆದು ಸಾಫುಗೊಳಿಸಿದ್ದೆ ಉತ್ತರದ ಗೆಲ್ಲ:

'ನಮ್ಮ ಪದ್ಧತಿಗೆ ಅದು ಸಲ್ಲ.'
ಮನದ ಗೊಂದಲ ತಿಳಿ ಮೊಗಕ್ಕೆ ಮುಸುಕಿ
ಯಾಕೆಂಬ ಮರುಪ್ರಶ್ನೆ ಮಿಂಚಿಸಿರಲು-
ತೆಪ್ಪಗಿರಿಸಲು ಮಗನ, ಪಲುಕಿದೆ ಹಳೆಯ ರಾಗ:
'ಖುರಾನ್, ಧರ್ಮಗ್ರಂಥಗಳಲ್ಲಿ ಹೇಳಿಲ್ಲ.'
ತೊರೆದು ಅರಗಳಿಗೆ ಮೌನದ ಹಕ್ಕೆ

ಹವ್ವನೆರಗಿತು ಮತ್ತೆ ಪ್ರಶ್ನೆ ಗರುಡನ ರೆಕ್ಕೆ:
ಅಲ್ಲಿ ಹೇಳಿದ ಹಾಗೆ ಆಚರಿಸಬೇಕೆ? -
ಹೌದೆಂದೆ, ಪ್ರಶ್ನೆ ಸೋನೆಯ ಬೇಸರಕ್ಕೆ.
ಮನೆ ಕಟ್ಟಿದ ಇಸ್ವಿ,
ನಿನ್ನ ಹೆಸರು ಮನೆಯೆದುರಲ್ಲಿ
ಬರೆಸಿರುವೆಯಲ್ಲ, ಹೇಳಿದೆಯೆ ಖುರಾನಿನಲ್ಲಿ?

ಆತ್ಮಸಾಕ್ಷಿಯ ಕತ್ತು ಹಿಸುಕ ಬಂದವನನ್ನ,
ಮಗುವೆನ್ನಬಹುದೆ ಇವನನ್ನ?
ಬೋಳೆ ಪ್ರಶ್ನೆ ಎಲ್ಲೆಲ್ಲಿಗೋ ಕೈ ಚಾಚಿ
ಪೇಚಿಗೆಡಿಸಿತು ನನ್ನ
ಆಚರಣೆ, ನಂಬಿಕೆಗಳ ಮಡಿಕೆ ಮಡಿಕೆಯ ರಾಚಿ,

'ಕ್ಯೂ ಬೆಳೆಯುತ್ತೆ, ಹೆಜ್ಜೆ ಹಾಕೋ ಬೇಗ'
ಎಂದೆ ಎಚ್ಚೆತ್ತು.
ರಂಗೋಲಿ ಹಾಯಾಗಿತ್ತು ಯಾವತ್ತಿನಂತೆ:
ಬೆರಗು ಪ್ರಶ್ನೆಗಳವಳಿ ರೆಕ್ಕೆ
ಹರಡಿದ ಪುಟ್ಟ ಹಕ್ಕಿಯಂತೆ;
ಮನದ ತುಂಬಾ ನೆರೆಸಿ ಚಿಂತನೆಯ ಸಂತೆ. (3)

ವಿಮರ್ಶೆ

ಮಿಶ್ರ ಸಂಸ್ಕೃತಿಗಳ ತಾಕಲಾಟ ಎಲ್ಲಾ ಸಮಾಜದಲ್ಲೂ ಇರುವುದೇ. ಪರ ಸಂಸ್ಕೃತಿಯನ್ನು ಒಳಗೊಳ್ಳದೆಯೂ ಅದರ ನಡುವೆಯೇ ಇರಬೇಕಾದ ವೈರುಧ್ಯತೆ, ಅದರ ಕುರಿತಾಗಿ ಕುತೂಹಲ ಒಳಗೊಂಡಿರುವ ಮನಸ್ಸು, ಧಾರ್ಮಿಕ ಕಟ್ಟುಪಾಡುಗಳು ಕಟ್ಟುಪಾಡುಗಳು ನಮ್ಮನ್ನು ಆಳುತ್ತಿವೆಯೇ? ನಾವು ಅದರ ದಾಸರಾಗಿದ್ದೇವೆ ಯೇ ? ಈ ಎಲ್ಲ ಪ್ರಶ್ನೆಗಳು ಸಂವೇದನಾಶೀಲ ಕವಿಯನ್ನು ಆವರಿಸಿರುವುದು ಸ್ಪಷ್ಟವಾಗಿದೆ. ಅನೇಕ ಕವನಗಳಲ್ಲಿ ಸಂಸ್ಕೃತಿಯ ಕಾಲು ತೊಡಕಿನ ಛಾಯೆ ಒಂದಿಷ್ಟು ಕಂಡೆ ಕಾಣಿಸುವುದು, ನಿಮ್ಮೊಳಗಿದ್ದೂ ನಿಮ್ಮಂತಾಗದೆ, ರಂಗೋಲಿ ಮತ್ತು ಮಗ ಮುಂತಾದ ಕವನಗಳಲ್ಲಿ. ಸಂಸ್ಕೃತಿಗಳ ಸಹಜ ಬೆಳೆಯುವಿಕೆಗೆ ಅಡ್ಡಿಯಾಗುವ ಕಟ್ಟುಪಾಡುಗಳ ಬೇಲಿಯಾಚೆ ಓಡುವ ಮನಸ್ಸಿನ ಚೋಟ ಅದಕ್ಕೆ ಮನಸ್ಸಾಕ್ಷಿಯನ್ನು ಪ್ರಶ್ನಿಸುವ ಮಗುವಿನ ಪ್ರಶ್ನೆಯ ಹಿಂದಿರುವ ಜಾತಿ ಧರ್ಮಗಳೆಂಬ ಮುಸುಕು ಮುಸುಕಿದ ಮುಗ್ಧತೆಯ ಮನಸ್ಸು ಅದಕ್ಕೆ ಉತ್ತರಿಸಲಾಗದ ನಿರೂಪಕನ ದ್ವಂದ್ವ ಇವೆಲ್ಲ ರಂಗೋಲಿ ಮತ್ತು ಮಗ ಕವನದಲ್ಲಿ ಹಾಸುಹೊಕ್ಕಾಗಿದೆ. ಪರ ಸಂಸ್ಕೃತಿಯ ಬಗೆಗಿನ ಕುತೂಹಲ ಅದಕ್ಕೆ ಅಡ್ಡಿ ಬರುವ ಅಜ್ಜಿ ತಾಯಿಯರು ಅವರು ಹೊರೆಸುವ ಕಾಫರ್ ಎಂಬ ಬಿರು ಬಿರುದು, ಇವೆಲ್ಲಾ ನೋವುಗಳ ಮಧ್ಯೆಯೇ, ರಂಗೋಲಿ ಇಲ್ಲಿ ಬೆರಗಿನ ದ್ಯೋತಕವಾಗಿ ಇರುವಂತೆಯೇ ಖಾಲಿ ಮನಸಿನ ಖೋಲಿ ತೆರೆಯುವ ಭಾವನೆಗಳನ್ನು ತುಂಬುವ ಬೀಗದ ಕೀಲಿ ಯಾಗಿಯೂ ಇದೆ. ತೆರೆದುಕೊಳ್ಳುವ ಮನಸ್ಸಿನ ಪ್ರಕ್ರಿಯೆಗೆ ಒಂದು ಸಾಧನವಾಗುತ್ತದೆ.

ಪ್ರಸ್ತುತಿ - ಸರಸ್ವತಿ ನಟರಾಜ್

ಎಲ್ಲ ಮರೆತಿರುವಾಗ
(ಕವನ ಸಂಕಲನ - ಸಮಗ್ರ ಭಾವಗೀತೆಗಳು)

ಎಲ್ಲ ಮರೆತಿರುವಾಗ ಇಲ್ಲ ಸಲ್ಲದ ನೆವವ
ಹೂಡಿ ಬರದಿರು ಮತ್ತೆ ಹಳೆಯ ನೆನಪೇ
ಕಲ್ಲಿನಂದದಿ ಇದ್ದು ತಿಳಿಯಾದ ಎದೆಗೊಳವ
ರಾಡಿಗೊಳಿಸುವೆ ಏಕೆ ಮಧುರ ನೆನಪೇ. (1)

ಕಪ್ಪುಕಣ್ಣಿನ ನೆಟ್ಟ ನೋಟದರೆ ಚಣನನ್ನೇ,
ತೊಟ್ಟ ಬಾಣದಹಾಗೆ ಬಾರದಿರು ನೆನಪೆ.
ಬಿರಿದ ತುಟಿಗಳ ತುಂಬು ನಗೆಯ ಕಾರಣವನ್ನೆ
ಹಿರಿದು ಕೊಲ್ಲಲು ಬಳಿಗೆ ಸಾರದಿರು ನೆನಪೇ (2)

ಸತ್ತ ಭೂತವನೆತ್ತಿ ಹದ್ದಿನಂದದಿ ತಂದು
ಎನ್ನ ಮನದಂಗಳಕೆ ಹಾಕದಿರು ನೆನಪೆ;
ಭವ್ಯ ಭವಿತವ್ಯಕ್ಕೆ ಮೊಗಮಾಡಿ ನಿಂತಿರುವೆ
ಬೆನ್ನಲ್ಲೆ ಇರಿಯದಿರು ಓ! ಚೆನ್ನ ನೆನಪೇ (3)

ವಿಮರ್ಶೆ :

ಕವಿಯ ಭಾಷೆಯಲ್ಲಿ ಹೇಳುವುದಾದರೆ "ಎಲ್ಲ ಮರೆತಿರುವಾಗ" ಹಳೆಯ ನೆನಪುಗಳು ಯಾರನ್ನೂ ಕಾಡದೇ ಬಿಡುವುದಿಲ್ಲ. ಸ್ವಪ್ನ ಸದೃಶವಾದದ್ದು ಪ್ರೇಮಾನುಭವವನ್ನು ಉಳಿಸುವುದು ನೆನಪುಗಳು. ಅದು ಮಧುರವಾದದ್ದು ಸಹ. ಹಾಗೆಯೇ ಆ ನೆನಪುಗಳು ಮನದಲ್ಲಿ ಕಾಡುವುದು ಅಷ್ಟೇ ಸತ್ಯ ಅಲ್ಲವೇ? ಹಳೆಯ ದೆವ್ವವನ್ನು ಮರೆತು ಮುಂದೆ ಸಾಗುತ್ತಿರುವಾಗ ಒಮ್ಮೊಮ್ಮೆ ಅಡ್ಡ ಗಾಲು ಹಾಕಿ ಕಾಡುವುದೂ ಈ ನೆನಪುಗಳೇ ಅಲ್ಲವೇ? ನೆನಪುಗಳು ಕಾಡುವುದೂ ಸಾಕು ಎಂಬ ಭಾವವೂ ಈ ಕವನದಲ್ಲಿ ಕಾಣುವುದು ಅಲ್ಲವೇ?

'ಓ! ಚೆನ್ನಾಗಿ ನೆನಪೇ' ಎಂದು ನೆನಪನ್ನೇ ಚೆನ್ನ ಎಂದು ಸಂಬೋಧಿಸುವ ಕವಿಯ ಜಾಣ್ಮೆ ಹೇಳತೀರದು. ಒಳ್ಳೆಯ ಮಾತಿನಿಂದ ದೂರಸರಿಸಬೇಕೆಂಬ ಪ್ರಯತ್ನ ಇಲ್ಲಿದೆ.

ಕವಿ ನಿಸಾರರ ಭಾವಗೀತೆಗಳಲ್ಲಿ ಹೆಣ್ಣಿನ ಅಬಲತೆ, ಪ್ರೇಮ ಮೀಮಾಂಸೆ, ಕಾಲ ಮರ್ಮ, ಆತ್ಮಸ್ಥೈರ್ಯದ ನಿವೇದನೆ, ಪ್ರಕೃತಿಯ ಸೊಬಗಿನ ವರ್ಣನೆ, ಸ್ವಾತಂತ್ರ್ಯದ ಮಹತ್ತರತೆ, ಆತ್ಮಪ್ರೇರಣೆ, ಭಾರತೀಯ ಅತಿ ಸನಾತನ ಸಂಸ್ಕೃತಿ ಇತ್ಯಾದಿ ಸಂಗತಿಗಳನ್ನು ಕೆಲವೇ ಸಾಲುಗಳಲ್ಲಿ ಮೂಡಿಸುವಂತಹ ಕವಿಯ ಕೌಶಲವನ್ನು ಮೆಚ್ಚಬೇಕು. ಭಾವಾರ್ಥಗರ್ಭಿತವಾದ ವಸ್ತುವನ್ನು ಕನ್ನಡ ಭಾಷೆಯ ಸುಲಲಿತ ಮತ್ತು ಸುಭಗ ನುಡಿಗಟ್ಟಿನಿಂದ, ಮೋಡಿಗತ್ತಿನಿಂದ ನಿಸಾರರು ವ್ಯಕ್ತಗೊಳಿಸುವಲ್ಲಿ ಪಡೆದಿರುವ ಸಾಫಲ್ಯ, ಯಶಸ್ಸು, ಸಂತಸದ ಜೊತೆಗೆ ವಿಸ್ಮಯವನ್ನುಂಟು ಮಾಡುತ್ತದೆ.

ಪ್ರಸ್ತುತಿ - ಮಂಗಳ ನಾಡಿಗ್

ಕನ್ನಡವೆಂದರೆ ಬರಿ ನುಡಿಯಲ್ಲ

(ಕವನ ಸಂಕಲನ -)

ಕನ್ನಡವೆಂದರೆ ಬರಿ ನುಡಿಯಲ್ಲ ....

ಕನ್ನಡವೆಂದರೆ ಬರಿ ನುಡಿಯಲ್ಲ
ಹಿರಿದಿದೆ ಅದರರ್ಥ
ಜಲವೆಂದರೆ ಕೇವಲ ನೀರಲ್ಲ
ಅದು ಪಾವನ ತೀರ್ಥ.

ಕನ್ನಡವೆಂದರೆ ಬರಿ ನಾಡಲ್ಲ
ಭೂಪಟ, ಗೆರೆ, ಚುಕ್ಕೆ
ಮರವೆಂದರೆ ಬರಿ ಕಟ್ಟಿಗೆಯೆ?
ಶ್ರೀಗಂಧದ ಚಕ್ಕೆ.

ಕನ್ನಡ ಬರಿ ಕರ್ನಾಟಕವಲ್ಲ
ಅಸೀಮ, ಅದು ಅದಿಗಂತ
ದೇವರು ಕೇವಲ ವಿಗ್ರಹವಲ್ಲ
ಅಂತರ್ಭಾವ ಅನಂತ.

ಕನ್ನಡವೆಂದರೆ ಜನಜಂಗುಳಿಯಲ್ಲ
ಜೀವನ ಶೈಲಿ, ವಿಧಾನ
ವಾಯುವೆಂದರೆ ಬರಿ ಹವೆಯೇ ಅಲ್ಲ
ಉಸಿರದು, ಪಂಚಪ್ರಾಣ.

ಕನ್ನಡವಲ್ಲ ತಿಂಗಳು ನಡೆಸುವ
ಗುಲ್ಲಿನ ಕಾಮನಬಿಲ್ಲು
ರವಿ ಶಶಿ ತಾರೆಯ ನಿತ್ಯೋತ್ಸವವದು
ಸರಸತಿ ವೀಣೆಯ ಸೊಲ್ಲು.

ವಿಮರ್ಶೆ :

ನಾಡು ನುಡಿ ಎನ್ನುವ ಪದವೇ ನಮಗಿರುವ ವ್ಯಾಮೋಹಗಳಲ್ಲಿ ಅತೀ ಹೆಚ್ಚಿನ ವ್ಯಾಮೋಹ ಎನ್ನುವುದರಲ್ಲಿ ಎರಡು ಮಾತಿಲ್ಲ. ಪಂಪನ ಆರಂಕುಸ ಮಿಟ್ಟೊಡಂ ಮೊದಲ್ಗೊಂಡು ಹೆಚ್ಚು ಕಮ್ಮಿ ನಾಡಿನ ಎಲ್ಲಾ ಕವಿಗಳು ಕನ್ನಡ ನುಡಿಯ ಬಗ್ಗೆ ಕವಿತೆಗಳನ್ನು ಬರೆದಿರುವುದನ್ನು ನಾವು ಕಾಣುತ್ತೇವೆ. ಶ್ರೀ ಯವರ ಆಳ ಕನ್ನಡ ತಾಯೆ, ಬಾಳ ಕನ್ನಡ ತಾಯೆ, ರಾಜರತ್ನಂ ಅವರ ಹೆಂಡ್ಗುಡ್ಕನಪದಗಳು, ಕುವೆಂಪು ಅವರ ಬಾರಿಸು ಕನ್ನಡ ಡಿಂಡಿಮವ, ಬೇಂದ್ರೆ ಯವರ, ಇದನೊಪ್ಪದ(ಕನ್ನಡವ) ಹೆರವರು ಇದ್ದರು ಒಂದೇ ಇರದಿದ್ದರೂ ಒಂದೇ. ಹೀಗೆ ನಾನು ಪಟ್ಟಿ ಬೆಳಸುತ್ತ ಹೋಗಬಹುದು.

ಚಲನಚಿತ್ರ ರಂಗದಲ್ಲಿಯೂ ಕನ್ನಡ ಭಾಷೆಯ ಕುರಿತಂತೆ ಅನೇಕ ಹಾಡುಗಳು ಜನಪ್ರಿಯವಾಗಿವೆ. ಹುಟ್ಟಿದರೆ ಕನ್ನಡ ನಾಡಲಿ ಹುಟ್ಟಬೇಕು, ನಾವಾಡುವನುಡಿಯೇ ಕನ್ನಡ ನುಡಿ, ಕನ್ನಡತಿ ನಮ್ಮೊಡತಿ...ಹೀಗೆ ಎಲ್ಲರ ಬಾಯಲ್ಲಿ ಗುನುಗುನಿತವಾಗುತ್ತಲೇ ಇವೆ.

ಈ ಹಿನ್ನೆಲೆಯಲ್ಲಿ ಕವಿ ನಿಸಾರ ಅಹಮದ್ ಅವರ ಕನ್ನಡ ನಾಡು ನುಡಿಯ ಪ್ರೇಮವನ್ನು ಒರೆಗೆ ಹಚ್ಚಿ ನೋಡಬಹುದು. ಅವರದು ಶುದ್ಧಾಂತಃಕರಣದ ಕನ್ನಡ ಪ್ರೇಮ. ಇಂಗ್ಲಿಷ್ ಮಾಧ್ಯಮದ ಭರಾಟೆಯಲ್ಲಿ ಅವರು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಹೊಂದಿದ್ದು ಅವರ ವಿಶೇಷತೆ. ಅವರ ತಂದೆಯವರ ದೂರದೃಷ್ಟಿಯಿಂದಾಗಿ ಇದು ಸಾಧ್ಯವಾಯಿತು. ನಿತ್ಯೋತ್ಸವ ಕವಿ ಕನ್ನಡ ಭಾಷೆಗೆ ಲಭ್ಯವಾದರು.

ಅವರ ಇಡೀ ಕವನಗಳಲ್ಲಿ ಟಾಪ್ 5 ಎಂದು ಪರಗಣಿತವಾದ ಕವನಗಳಲ್ಲಿ ನಾನು ಉಲ್ಲೇಖಿಸಿ ವಾಚಿಸಿದ " ಕನ್ನಡವೆಂದರೆ ಬರಿ ನುಡಿಯಲ್ಲ.........." ಕವನವೂ ಒಂದು. ಇಡೀ ಕನ್ನಡ ನಾಡನ್ನು ಪ್ರಕೃತಿ, ಪಂಚಭೂತಗಳು, ಅಂತರ್ಭಾವ, ಪಂಚಪ್ರಾಣಗಳೆಂದು ಕರೆದಿರುವ ಕವಿವಾಣಿ ಅನನ್ಯ. ಕನ್ನಡ ಎನ್ನುವುದು ಬರೀ ನುಡಿಯಲ್ಲ ಅದರ ಅರ್ಥ ವಾಪ್ತಿ ಬಹು ಹಿರಿದು ಎನ್ನತ್ತಾರೆ ನಿಸಾರ್ ಅವರು. ಇಡೀ ಕವಿತೆಯನ್ನು ಒಟ್ಟಾರೆಯಾಗಲಿ, ಬಿಡಿಬಿಡಿಯಾಗಿ ನೋಡುವಾಗ, ಪಾವನ ತೀರ್ಥ, ಶ್ರೀಗಂಧದ ಚಕ್ಕೆ, ಬರೀ ಹವೆಯಲ್ಲ ಪಂಚಪ್ರಾಣ ಎಂದು ಹೇಳುವ ಸಾಲುಗಳು ಕನ್ನಡದ ಬಗೆಗೆ ಅವರು ಹೊಂದಿರುವ ಭಾವನೆಗಳು ನಮ್ಮನ್ನು ಜಾಗೃತಗೊಳಿಸುವ ರೀತಿ, ಜುಮ್ಮು ದಟ್ಟಿಸುವ ರೀತಿ ಅನುರಣನಗೊಳ್ಳುತ್ತವೆ. ದೇವರು ಕೇವಲ ವಿಗ್ರಹವಲ್ಲ ಅದೊಂದು ಅಂತರ್ಭಾವ, ಅನಂತ ಹೇಗೋ ಹಾಗೆ ಕನ್ನಡತನ, ಕನ್ನಡಿಗರ ಬದುಕಿನಲ್ಲಿ ಹಾಸು ಹೊಕ್ಕಾಗಿರುವ ಚೇತನ ಎನ್ನುವ ಭಾವ ಅದು.
ರಾಜ್ಯೋತ್ಸವ ಸಹ 'ಗುಲ್ಲಿನ ಕಾಮನ ಬಿಲ್ಲು' ಎನ್ನುವಲ್ಲಿ 'ಗುಲ್ಲು' ಪದ ಪ್ರಯೋಗ ಗಮನಿಸಿ, ಅದ ಬರೀ ತೋರಿಕೆಯ ಜನಸಂದಣಿಯಲ್ಲ ಅದು ವರ್ಣರಂಜಿತ ಹಬ್ಬ ಎನ್ನುವ ಕವಿ, ಕಾಮನಬಿಲ್ಲಿಗೆ ಹೋಲಿಸಿರುವುದು ನಾಡನ್ನು, ಪ್ರಕೃತಿಯೊಂದಿಗೆ ಸಮ್ಮಿಳನಗೊಳಿಸುವ ಕ್ರಿಯೆ, ಮನಮುದಗೊಳಿಸುತ್ತದೆ. ಗುಲ್ಲು ಪದ ನನ್ನನ್ನು, ನನ್ನ ಸ್ಮೃತಿ ಪಟಲವನ್ನು ಉದ್ದೀಪನಗೊಳಿಸಿದ್ದನ್ನು ಇಲ್ಲಿ ಹೇಳಲೇಬೇಕು. ಬಾಲ್ಯದ ದಿನಗಳಲ್ಲಿ ನಮ್ಮ ಊರು ಗೋನವಾರದಲ್ಲಿ ಇರುವಾಗ ಹಳ್ಳಿಯ ಶ್ರೇಷ್ಠ ಹಬ್ಬಗಳಲ್ಲಿ ಒಂದಾದ ಕಾರ ಹುಣ್ಣಿಮೆ ದಿನದಂದು ಎತ್ತುಗಳನ್ನು ಅಲಂಕರಿಸುವಾಗ ಅವುಗಳ ಮೈ ತುಂಬಾ ಬಣ್ಣ ಬಣ್ಣದ ಗುಲ್ಲು ಇಡುತ್ತಿದ್ದರು. ಅದೊಂದು ಬಗೆಯ ವಿನ್ಯಾಸ. ಆಗ ಈ ಗುಲ್ಲು ಇಡಲು ಕಟ್ಟಿಗೆಯ ಅಚ್ಚುಗಳೂ ಸಹ ಮಾರಾಟಕ್ಕೆ ದೊರಕುತ್ತಿದ್ದವು. ಪಾತ್ರೆಯಲ್ಲಿ ವಿವಿಧ ಬಣ್ಣಗಳ ನೀರಿನ ದ್ರಾವಣ ತಯಾರಿಸಿ ಈ ಅಚ್ಚುಗಳನ್ನು ಅದರಲ್ಲಿ ಅದ್ದಿ, ಎತ್ತಗಳ ಮೈ ಮೇಲೆ ಗುಲ್ಲು ಇಡುವ ಕ್ರಿಯೆಯನ್ನು ನಾನು ಬಹಳವಾಗಿ ಆನಂದಿಸಿದ್ದದು ಇದೆ. ಈಗ ಅದೆಲ್ಲ ನೋಡಲು ಸಿಗಲಾರದು. ಆದರೆ ಕವಿ ನನ್ನನ್ನು ಭಾವುಕನನ್ನಾಗಿಸಿದ್ದು ನಿಜ.
ಈಗ ನನಗೆ ಮತ್ತು ನನ್ನಂತಹ ಅನೇಕರಿಗೆ ಕನ್ನಡ ನುಡಿಯ ಬಗೆಗೆ ಅಭಿಮಾನ ಹೆಚ್ಚಿಸುವ ಕವಿತೆ ಕವಿಯ ಕಾಲದಲ್ಲಿ ಮತ್ತು ನಂತರವೂ ಮನಮನಗಳಲ್ಲಿ ಶಾಶ್ವತ ಸ್ಥಾನ ಕಲ್ಪಿಸಿದ ಕವಿಗೆ ನಮನಗಳನ್ನು ಸಲ್ಲಿಸುತ್ತ, ನನಗಿಷ್ಟವಾದ ಕವಿಗಳಲ್ಲಿ ಒಬ್ಬರಾದ ಕವಿ ತಿರುಮಲೇಶರ ಕವಿತೆಯ ನಾಲ್ಕು ಸಾಲುಗಳನ್ನು ಹೇಳುತ್ತ ನಿಸಾರರಿಗೆ ಸುಮಾಂಜಲಿಗಳನ್ನು
ಅರ್ಪಿಸುತ್ತೇನೆ.

ಸುಖ ಕನ್ನಡ,ಶುಭ ಕನ್ನಡ
ಕ್ರಾಂತಿ ಕನ್ನಡ ಶಾಂತಿ ಕನ್ನಡ
ಆಡು ಕನ್ನಡ ಹಾಡು ಕನ್ನಡ
ಮಾತಾಡು ಕನ್ನಡವೇ.

ಪ್ರಸ್ತುತಿ - ಗೋನವಾರ ಕಿಶನ್ ರಾವ್, ಹೈದರಾಬಾದ.

ಕೆ.ಎಸ್. ನಿಸಾರ್ ಅಹಮದ್ ಅವರ ನಲ್ನುಡಿಗಳು

ಕವಿ ನಿಸಾರ ಅಹಮದ್ ಅವರು ಪದಗಳನ್ನ ಬಳಸುವ ರೀತಿಯಲ್ಲಿ ವೈಶಿಷ್ಟ್ಯವಿದೆ. ಕನ್ನಡ ಪದಗಳಿಗೆ ಹೊಸ ಭಾವಾರ್ಥ ತುಂಬುತ್ತಾರೆ. ಅರ್ಥವನ್ನು ಬಿಲ್ಲಿನಂತೆ ಬಗ್ಗಿಸ್ತಾರೆ, ಮೇಣದಂತೆ ರೂಪಿಸ್ತಾರೆ. ಹೊಸ ಪದಗಳನ್ನು ಟಂಕಿಸುತ್ತಾರೆ. ಅರ್ಥಸಿಕ್ಕಂತೆ ಆಗುತ್ತೆ . ಆದರೆ ಸಿಗದೆ ನುಣುಚಿಕೊಳ್ಳುತ್ತೆ.

ಅವರ ಕಾಲೇಜಿನ ರಾಜ್ಯೋತ್ಸವಕ್ಕೆ ಅತಿಥಿಯಾಗಿ ನನ್ನನ್ನು ಕರೆದಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ಅವರೇ ವಹಿಸಿದ್ದರು. ರಾಜ್ಯೋತ್ಸವದ ಬಗ್ಗೆ ನಾನು ಮಾತಾಡ್ತಾ ಹೇಳ್ದೆ.

"ಪರರಿಗೆ ಪಲ್ಲಂಗ ನೀಡಿ ಪಡಸಾಲೆಯಲ್ಲಿ ಪವಡಿಸುವ ಪರೋಪಕಾರಿ ಕನ್ನಡಿಗರು."
ನಿಸಾರ್ ಚಪ್ಪಾಳೆ ತಟ್ಟಿ "ತುಂಬಾ ಚೆನ್ನಾಗಿದೆ, ಯಾರ್ದು ಎಂದರು? "
"ನಿಮ್ದೇ ಸಾರ್, ಅದು. ನೀವೇ ಬರೆದಿದ್ದು ಎಂದೆ."
ವಿದ್ಯಾರ್ಥಿಗಳು ಜೋರಾಗಿ ನಕ್ಕರು.

ಇನ್ನು ಸರ್ಕಾರದ ರಾಜ್ಯೋತ್ಸವ ಪ್ರೇಮದ ಬಗ್ಗೆ ನಿಸಾರ್ ನುಡಿ:

ವರ್ಷವಿಡೀ ಚಾಟಿಯ ಏಟಿನ ದುಡಿತದ ಎತ್ತಿಗೆ
ಸಂಕ್ರಾಂತಿಯ ದಿನ ಆಹಾ ಎಂತಹ ಸಿಂಗಾರ
ಜ್ಞಾಪಿಸುವುದು ನನಗೀ ದೃಶ್ಯ ನವೆಂಬರ್ 1ರ
ಸರಕಾರದ ಸಿರಿಕನ್ನಡದುದ್ಧಾರ

ಕನ್ನಡ ಅಂದರೆ ಬರಿ ಭಾಷೆ ಅಲ್ಲ ಅಂತಾರೆ ನಿಸಾರ್.

ಕನ್ನಡವೆಂದರೆ ಜನಜಂಗುಳಿಯಲ್ಲ
ಜೀವನಶೈಲಿ, ವಿಧಾನ !
ವಾಯುವೆಂದರೆ ಬರಿ ಹವೆಯೇ ಅಲ್ಲ !
ಉಸಿರದು, ಪಂಚಪ್ರಾಣ

ಲಾಲ್ಬಾಗ್ ಬಗ್ಗೆ ಅವರು ಹೇಳಿರುವ ಮಾತು "ನೇಚರ್ ಇನ್ ಮಿನಿಯೇಚರ್" ಅಂತ.

ಕೆಲವು ವಸ್ತುಗಳು ಸೆಕೆಂಡ್ ಹ್ಯಾಂಡ್ ಆಗೋದೇ ಇಲ್ಲ. ಎಷ್ಟೇ ಹಳೇದಾಗ್ಲಿ ಡಿಪ್ರಿಸಿಯೇಷನ್ಗೆ ಒಳಗಾಗೊಲ್ಲ. ಅದೇ ಬೆಲೆಗೆ ತೊಗೊತಾರೆ. ಅದ್ಯಾವುದಪ್ಪಾ ಅಂತ ನಿಸಾರ್ ಹೇಳ್ತಾರೆ.

"ಹತ್ತು ಕೈ ಬದಲಿಸಿದರೂ, ಮಾಸಿದರೂ
ಅಷ್ಟಿಷ್ಟು ಹರಿದರೂ ಅದೇ ಬೆಲೆ !
ಕರೆನ್ಸಿ ನೋಟು ಕಲೆ"

ಚಿಕ್ಕ ವಸ್ತು ನಮ್ಮನ್ನು ಹೇಗೆ ನಿಯಂತ್ರಿಸುತ್ತೆ ಅಂದರೆ :
"ಹಂಡೆ ಹಾಲಿಗೆ ತೊಟ್ಟು ಹುಳಿ ಬಂಡೆಗೆ ಉಳಿ
ಬಂಗಲೆಗೆ ಹಿಡಿಯಷ್ಟು ಬೀಗ
ಅಂಕುಶದೆದುರು ಜೀತದಾಳು ಸಲಗ"

ಚುಟುಕಕ್ಕೂ ಮತ್ತು ಕವನಕ್ಕೂ ಇರುವ ವ್ಯತ್ಯಾಸ :

"ಚುಟುಕ ಚಿಲ್ಲರೆ; ಕವನ ನೋಟು
ಕವನ ನೌಕೆ, ಚುಟುಕ ಬೋಟು
ಕಚ್ಚೋದು ಕವನ, ಕುಟುಕೋದು ಚುಟುಕ
ಒಂದು ಎತ್ತಿನ ಬಂಡಿ ಪಯಣ, ಇನ್ನೊಂದು ಕುದುರೆ ಜಟಕ"

ರಾಜಕೀಯದಲ್ಲಿರೋ ಪುಡಾರಿಗಳಿಗೆ ಯಾವತ್ತು ಪ್ರಶಸ್ತಿ ಕೊಡಬಹುದು?

"ಬೆಣ್ಣೆ ಆದಾಗ ಸುಣ್ಣ, ಆನೆಗೆ ತೊಡಿಸಿದಾಗ ಚಣ್ಣ
ಪುಡಾರಿಗೆ ಹಣ ಅಧಿಕಾರಿಗಳ ಮಸ್ತಿ ಇಳಿದಾಗ
ದಯಪಾಲಿಸಬಹುದು ಹರಿಶ್ಚಂದ್ರ ಪ್ರಶಸ್ತಿ

ಗಾಳಿ ನೆರವಿರುವತನಕ ಪಟದ ಹಾರಾಟ
ಗದ್ದುಗೆ ಗಟ್ಟಿ ಇರುವ ತನಕ ಪುಡಾರಿ ಎಗರಾಟ;
ಎಷ್ಟು ಚಕ್ರ ಭಾರತಾಂಬೆ ನಿನ್ನ ಹಿರಿಯ ತೇರಿಗೆ
ಪಾವಿನಷ್ಟು ಗಟ್ಟಿ ಹಾಲು ಎರಡು ಸೇರು ನೀರಿಗೆ"

ದಿಢೀರ್ ಅಂತ ಸ್ಫೋಟಗೊಳ್ಳೋ ಗಲಾಟೆಗಳು ಮುಖ್ಯವಾಗಿ ಮೂರು ಕಾರಣಕ್ಕಾಗಿ. ರಾಷ್ಟ್ರದ ತ್ರಿಶೂಲ ಪ್ರಾಯ ಸಮಸ್ಯೆಗಳವು. ಯಾವುದು ಅಂದ್ರೆ ಗಡಿ, ನುಡಿ, ಗುಡಿ.

ಉದಾ: ಗಡಿ - ಕಾಶ್ಮೀರ samasye, ನುಡಿ - ಕನ್ನಡ ಸಮಸ್ಯೆ, ಗುಡಿ - ಮಂದಿರ ಮಸೀದಿಗಳ ಸಮಸ್ಯೆ. ಇವು ಬಹಳ ಸೂಕ್ಷ್ಮ ಅಂತ ಹೇಳ್ತಾರೆ.

ಶಿಕ್ಷಣ ಕ್ಷೇತ್ರ ಏನಾಗಿದೆ ಇವತ್ತು?

"ವಿದ್ಯಾರ್ಜನೆಗಿಂತ ಮದ್ಯಾರ್ಜನೆ ಅಧಿಕ ಯಶಸ್ವಿ ಈಗ.
ಕ್ಲಾಸ್ ಮೇಟ್ಸ್ ಗಿಂತ ಗ್ಲಾಸ್ ಮೇಟ್ಸ್ ಗಳ ಸ್ನೇಹ ಈಗ ವರ್ಧಿಸುತ್ತಿದೆ."

ನಮ್ಮ ನೇಷನ್ ಗೆ ಹತ್ತಿರುವ ಮಹಾಪಿಡುಗು ಅಂದರೆ ಡೊನೇಷನ್.
ವಿಮರ್ಶಕ ಅಂದ್ರೆ ಯಾರು?
ದೋಸೆಯನ್ನು ಸವಿಯುವ ಬದಲು ತೂತುಗಳನ್ನು ಎಣಿಸುತ್ತಾ ಕೂರುವವ.

ರಸ್ತೆಯಲ್ಲಿ ನಡೆಯುವಾಗ

ಮುಂದೆ ನೋಡಿಕೊಂಡು ಹೋಗು ಎನ್ನುತ್ತಾರೆ ತಿಳಿದವರು
ಕೆಳಗೂ ಕಣ್ಣು ಹಾಯಿಸಬೇಡವೇ?
ಅಲ್ಲಿ ಬಿದ್ದಿರಬಹುದಲ್ಲ ಲೈವ್ ವೈರು

ಮೂಲ ಸ್ವಭಾವವನ್ನು ಬದಲಿಸಲು ಸಾಧ್ಯವಿಲ್ಲ :
ಊದುಗೊಳವೆಗೆ ರಂಧ್ರವನ್ನು ಕೊರೆದರೆ ಅದು ಕೊಳಲಾಗಿ ಬಿಡುವುದೇ?

ಕಟ್ಟಡದ ಭದ್ರತೆ ಇರುವುದು ಕಣ್ಮರೆಯ ಅಡಿಪಾಯದಲ್ಲಿ
ಮೆರೆದು ಕಂಗೊಳಿಸುವ ಗೋಪುರದಲ್ಲಿ ಅಲ್ಲ.

ಬಾಳನ್ನು ಹಸನಾಗಿಸಿಕೊಳ್ಳಬೇಕು. ಪ್ರಹಸನವಾಗಿಸಿಕೊಳ್ಳಬಾರದು

ಹಂದಿಗೇನು ಗೊತ್ತು ಮೆಹಂದಿ ಮಹಿಮೆ?
ಮನಸ್ಸು ಗೂಟಕ್ಕೆ ಬಿಗಿದ ಆಕಳಲ್ಲ
ಕೊಂಬೆ ರೆಂಬೆಯ ಅಳಿಲು

ಎರಡೂ ಬಲೆಯೇ, ಆದರೆ ಮಾಡುವ ಕೆಲಸದಲ್ಲಿ ಭಿನ್ನತೆ ಇದೆ.
ಜೇಡನ ಬಲೆಯಿಂದ ಮೀನು ಹಿಡಿಯಲಾಗದು
ಮೀನಿನ ಬಲೆಯಿಂದ ನೊಣ ಹಿಡಿಯಲಾಗದು

ಯಾವ ಕಡಲ ಆಣಿಮುತ್ತು
ಯಾರ ಕೊರಳ ಶೋಭಿತ ?
ಯಾರ ಹೊಲದ ಪೈರ ಸೊತ್ತು
ಯಾರ ತುತ್ತಿಗರ್ಪಿತ ?

ನರನ ಬದುಕು ಸಂತೆ ಸರಕು,
ಹಬ್ಬ ದಿನದ ತೋರಣ.
ದೀಪವಾರಲೆನಿತು ಸಮಯ,
ತೀರೆ ತೈಲ ಹೂರಣ.

ಸಾವಿನ ಬಗ್ಗೆ ಹೇಳಿರುವ ಸತ್ಯ ಇಲ್ಲ ಕಾಲಕ್ಕೂ ಸಲ್ಲತಕ್ಕ ಮಾತು.

ಮೊನ್ನೆ ಇದ್ದವ ನೆನ್ನೆಯಿಲ್ಲ, ನೆನ್ನೆಯವನು ಇವತ್ತು.
ಹೇಳಿ ಕೇಳಿ ಬರುವುದಿಲ್ಲ ಹೊತ್ತು !
ತೀರಲು ಎಣ್ಣೆ, ಕಣ್ಣೋ ಎರಡು ಸೊನ್ನೆ !
ಜೀವನ ತಿಂದು ಬಿಸಾಡಿದ ದೊನ್ನೆ
ನಿಸಾರ್ ಅವರ ನೂರಾರು ನಲ್ನುಡಿಗಳಲ್ಲಿ ಇವು ಕೆಲವು ಮಾತ್ರ. ಅಂಥ ಶ್ರೇಷ್ಠ ಕವಿಗೆ ಇದು ನುಡಿನಮನ.

ಪ್ರಸ್ತುತಿ - ಎಮ್.ಎಸ್.ನರಸಿಂಹ ಮೂರ್ತಿ

ದೀಪಾರತಿ

(ಕವನ ಸಂಕಲನ- ನಿತ್ಯೋತ್ಸವ)

ನೀನುರಿಸಿದ ಹೊಂಬೆಳಕಿನ ಕಿಡಿ ಅರಳಿದೆ ಇಲ್ಲಿ,
ಕುಡಿ ಚಾಚಿದೆ ಇಲ್ಲಿ.
ನೀ ಸುರಿಸಿದ ರಸ ತೈಲದ ಗುಡಿ ಹಾರಿದೆ ಇಲ್ಲಿ;
ಗುಡಿ ಮೀರಿದೆ ಇಲ್ಲಿ.

ನೀ ಬಿತ್ತಿದ ದಯೆ ಹಬ್ಬಿದೆ ಮನು ಸಂತತಿಯಲ್ಲಿ,
ಜನ ಸಮ್ಮತಿಯಲ್ಲಿ;

ನೀನೆತ್ತಿದ ತನು ಸಾಗಿದೆ ಭಾವೋನ್ನತಿಯಲ್ಲಿ,
ನವ ಸದ್ಗತಿಯಲ್ಲಿ.

ನಿನ್ನದೆ ನೆಲೆ, ನಿನ್ನದೆ ಮನೆ; ನಿನ್ನೆದೆಯೊ ಉದಾರ;
ನಾನೂಳಿಗಕಿರುವಲ್ಪನು- ನೀ ವಾರಸುದಾರ.

ಬೆಳೆಬೆಳೆಯಲಿ ನಿನ್ನದೆ ಘನ ಮಹಿಮಾಂಕುರ ಒಳಗೆ;
ಬೆಳಬೆಳಗಲಿ ಬಿರುದಾವಳಿ, ನಾಮಾಂಕಿತ ಹಲಗೆ.

ವಿವರಣೆ:

ದೀಪಾರತಿ ಗೀತೆಯನ್ನು ನಾನು ದಾಸೋಹದಲ್ಲಿ ವಾಚನ ಮಾಡಿದೆ.
ಪ್ರೊಫೆಸರ್ ನಿಸಾರ್ ಅಹಮದ್ ಅವರು ನಮಗೆ
1967 ರಲ್ಲಿ ಪಿಯುಸಿ ಓದುತ್ತಿದ್ದಾಗ , ಭೋಧಕರಾಗಿದ್ದರು. ಅವರು ಎನ್.ಸಿ.ಸಿ ಅಧಿಕಾರಿ ಸಹ ಆಗಿದ್ದರು.

ಈ ಹಾಡು ಭಗವಂತನಲ್ಲಿ ಸಮರ್ಪಣಾ ಭಾವದ ಸುಂದರ ಗೀತೆ. ನೀನು ನೀಡುತ್ತಿರುವ ಬೆಳಕು, ನೀ ಬಿತ್ತಿದ ದಯೆ,
ಮನು ಸಂತತಿಯಲ್ಲಿ ಹಬ್ಬಿದೆ.
ನೀನಿತ್ತ ಈ ತನು ಸಾಗಿದೆ ಸದ್ಗತಿಯಲ್ಲಿ.
ಇಲ್ಲಿನ ನೆಲ ಜಲ ಮನೆ ಎಲ್ಲವೂ ನಿನ್ನ ಕಟಾಕ್ಷ. ನಾನು ಇಲ್ಲಿ ಅಲ್ಪ ಮತ್ತು ನೆಪಮಾತ್ರ. ನೀನೇ ವಾರುಸುದಾರ,
ಮಹಿಮಾಂಕುರ, ಎಂದು ಭಗವಂತನ ಕೃಪಾ ಕಟಾಕ್ಷ ದ ಭಾವನಾತ್ಮಕ ಚಿಂತನೆ ಈ ಕವನದಲ್ಲಿ ನಿಸಾರ್ ಅವರಿಂದ.
ಎಲ್ಲವೂ ನಿನ್ನದೇ, ನಾನು ಅಲ್ಪ ಎಂಬ ಅಭಿಪ್ರಾಯ.
ತನುವು ನಿನ್ನದು ಮನವು ನಿನ್ನದು..
ಅಥವಾ ದೀಪವು ನಿನ್ನದೆ ಗಾಳಿಯು ನಿನ್ನದೆ..
ಈ ಗೀತೆಗಳ ನೆನಪಿಸುವ ಗೀತೆ.
ಪ್ರಸ್ತುತಿ - ಎನ್.ಶಂಕರ ರಾವ್.

ಕವಿ ನಿಸಾರ್ ಅಹಮದ್ ಅವರ ಒಥೆಲೊ ನಾಟಕ.

ಒಥೆಲೊ 1973ರಲ್ಲಿ ನಟರಂಗದಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದ ನಾಟಕ. ಕವಿ ನಿಸಾರರು ನಟರಂಗಕ್ಕಾಗಿಯೇ ಬರೆದು ಕೊಟ್ಟ ನಾಟಕ. 1972ರಲ್ಲಿ ಕಾಕನಕೋಟೆ, ತುಘಲಕ್ ನಾಟಕಗಳ ಯಶಸ್ಸಿನಲ್ಲಿ ತೇಲುತ್ತಿದ್ದ ನಾವು ಮುಂದಿನ ಹೊಸ ನಾಟಕಕ್ಕೆ ಹುಡುಕಾಡುತ್ತಿದ್ದಾಗ ನಮ್ಮ ಗಮನ ಹರಿದಿದ್ದು ಶೇಕ್ಸಪಿಯರನ ಡ್ರೀಂ ಮತ್ತು ಒಥೆಲೊ ಬಗ್ಗೆ. ಕನ್ನಡದಲ್ಲಿ ಈ ನಾಟಕಗಳ ಅನುವಾದ ಇರಲಿಲ್ಲ. ಕವಿಮಿತ್ರ ನಿಸಾರರನ್ನೇ ಯಾಕೆ ಕೇಳಬಾರದು ಎಂದು ಆಲೋಚಿಸಿ ಸಿ ಆರ್ ಸಿಂಹ, ಲೋಕೇಶ್, ಚಿಂತಾಮಣಿ ಮತ್ತು ಕಪ್ಪಣ್ಣ ನಿಸಾರರನ್ನು ಈ ಎರಡೂ ನಾಟಕಗಳನ್ನು ಕನ್ನಡದಲ್ಲಿ ಅನುವಾದ ಮಾಡಿ ಕೊಡುವಂತೆ ದುಂಬಾಲು ಬಿದ್ದರು. ನಿಸಾರರು ಇದು ಬಹಳ ಕಷ್ಟದ ಕೆಲಸ, ಸಾಧ್ಯವಿಲ್ಲ ಎಂದರು. ಮತ್ತೆ ನಿರಂತರವಾಗಿ ಪುಸಲಾಯಿಸಿ, ಪ್ರೀತಿಪೂರ್ವಕ ಒತ್ತಾಯವನ್ನು ಹೇರಿದಾಗ ಒಪ್ಪಿ ಕೆಲಸ ಆರಂಭಿಸಿದರು. ಮೊದಲು "ಮಿಡ್ ಸಮ್ಮರ್ ನೈಟ್ಸ್ ಡ್ರೀಮ್" ನಾಟಕ ಸಿದ್ಧವಾಯಿತು. ನಾಟಕ ಅಭೂತಪೂರ್ವ ಯಶಸ್ಸನ್ನು ಕಂಡಿತು! ಅನೇಕ ಮರುಪ್ರದರ್ಶನಗಳನ್ನೂ ಕಂಡಿತು!
ಈ ಯಶಸ್ಸಿನಿಂದ ಉತ್ತೇಜಿತರಾಗಿ ಮತ್ತಷ್ಟು ಹುಮ್ಮಸ್ಸಿನಿಂದ ಒಥೆಲೊ ಅನುವಾದ ಆರಂಭಿಸಿದರು.
ಡ್ರೀಮ್ ನಾಟಕದಂತೆಯೇ ಒಥೆಲೋದ ಒಂದೊಂದು ಅಂಕದ ಹಸ್ತ ಪ್ರತಿ ಸಿದ್ಧವಾದೊಡನೆಯೇ ನಾವು ರಂಗತಾಲೀಮನ್ನು ಆರಂಭಿಸಿದೆವು. ಈ ಎರಡೂ ನಾಟಕಗಳಲ್ಲಿ ಪಾತ್ರವನ್ನು ವಹಿಸಿದ್ದು ನನ್ನ ಸೌಭಾಗ್ಯ!
ಒಥೆಲೊ ನಾಟಕದಲ್ಲಿ ಒಂದು ವಿಶೇಷತೆ ಇತ್ತು.
ಒಥೆಲೊ ಪಾತ್ರವನ್ನು ಸಿ ಆರ್ ಸಿಂಹ ಹಾಗೂ ಲೋಕೇಶ್ ಇಬ್ಬರೂ ಮಾಡಿದ್ದರು. ಹಾಗೆಯೇ ಇನ್ನೊಂದು ಮುಖ್ಯ ಪಾತ್ರ- ಇಯಾಗೋ ಪಾತ್ರವನ್ನು ಎಂ ಪಿ ವೆಂಕಟರಾವ್, ಸಿ ಆರ್ ಸಿಂಹ ಹಾಗೂ ಲೋಕೇಶ್ ಮೂವರೂ ಮಾಡಿದ್ದರು. ಒಂದು ಪ್ರದರ್ಶನದಲ್ಲಿ ಒಬ್ಬರು ಮಾಡಿದರೆಮತ್ತೊಂದು ಪ್ರದರ್ಶನದಲ್ಲಿ ಇನ್ನೊಬ್ಬರು. ಕೊನೆಯ ಅಂಕದ ಅನುವಾದ ಸಿದ್ಧವಾಗುವ ಹೊತ್ತಿಗೆ ರಂಗತಾಲೀಮು ಪೂರ್ಣ ಗೊಂಡಿದ್ದು ಪ್ರದರ್ಶನಕ್ಕೆ ಸಿದ್ಧವಾದೆವು! ಈ ಎರಡೂ ನಾಟಕಗಳ ರಂಗತಾಲೀಮಿಗೆ ನಿಸಾರರು ಪ್ರತಿದಿನ ತಪ್ಪದೇ ಭೇಟಿ ಕೊಡುತ್ತಿದ್ದರು. ತಾಲೀಮನ್ನು ನೋಡುವಾಗ ಸಂಭಾಷಣೆ ಕಠಿಣ ಎನಿಸಿದ್ದರೆ ಮರುದಿನ ಅವುಗಳನ್ನು ತಿದ್ದಿ, ಸರಳಗೊಳಿಸಿ ತರುತ್ತಿದ್ದರು!
ಈ ತೆರದಲ್ಲಿ ಅವರ ಒಡನಾಟ 3 ತಿಂಗಳುಗಳಿಗೂ ಹೆಚ್ಚು ಕಾಲ ನಮಗೆ ದೊರೆಯಿತು! ಇದೂ ನಮ್ಮ ಸೌಭಾಗ್ಯ!
ಆಧುನಿಕ ಕನ್ನಡದಲ್ಲಿ ಶೇಕ್ಸಪಿಯರನನ್ನು ಇಷ್ಟು ಪರಿಣಾಮಕಾರಿಯಾಗಿ ನಿಸಾರರನ್ನು ಬಿಟ್ಟು ಮತ್ತಾರೂ ತಂದಿಲ್ಲ!
ನಾಟಕದ ಸಂಭಾಷಣೆಗಳಲ್ಲಿ ಅವರ ಕಾವ್ಯ ಹಾಸುಹೊಕ್ಕಾಗಿದೆ. ಅದೆಷ್ಟು ಸೊಗಸಾಗಿದೆ ಎಂದು ಪರಿಚಯಿಸಲು ಒಥೆಲೊ ನಾಟಕದಲ್ಲಿನ ಇಯಾಗೋ - ಒಥೆಲೊ ರ ಸಂಭಾಷಣೆ ಯ ದೃಶ್ಯವನ್ನು ಆಯ್ದುಕೊಂಡೆ.
ಸಿಂಹ, ಲೋಕೇಶ್, ವೆಂಕಟರಾವ್ ಅವರ ಅಪ್ರತಿಮ ಅಭಿನಯ ಕೌಶಲ್ಯಕ್ಕೆ ನಾನು ಸಾಟಿಯಾಗಲಾರೆ.
ಕೇವಲ ಸಾಧ್ಯವಾದಷ್ಟು ಅನುಕರಿಸಲು ಪ್ರಯತ್ನಿಸಿದ್ದೇನೆ.
ನಿಸಾರರ ಕಾವ್ಯ ಪ್ರೌಢಿಮೆಯನ್ನು ಪರಿಚಯಿಸಿ ನಾಟಕದಲ್ಲಿನ ರಸಾಸ್ವಾದನೆಗೆ ಅನುವು ಮಾಡಿ ಕೊಡುವುದು, ಈ ಮೂಲಕ ನಿಸಾರರಿಗೆ ನುಡಿ ನಮನವನ್ನು ಸಲ್ಲಿಸುವುದು ನನ್ನ ಉದ್ದೇಶ.
ನಾನು ವಾಚಿಸಿದ ಭಾಗದಲ್ಲಿ ಒಥೆಲೊ ಈಗಾಗಲೇ ಡೆಸ್ಡೆಮೋನಾಳ ಶೀಲದ ಬಗ್ಗೆ ಸಂದೇಹಪೀಡಿತನಾಗಿದ್ದಾನೆ. ಅವನಲ್ಲಿ ಈ ಸಂದೇಹದ ಬೀಜವನ್ನು ಬಿತ್ತಿದ ಇಯಾಗೋ ಮತ್ತಷ್ಟು ತುಪ್ಪ ಸುರಿಯುತ್ತಾನೆ. ಈ ಸನ್ನಿವೇಶದ ಅವರ ಸಂಭಾಷಣೆಯನ್ನೇ ನಾನು ಪ್ರಸ್ತುತ ಪಡಿಸಿದ್ದು.
ಒಥೆಲೊ ನಾಟಕದಲ್ಲಿ ನಾನು ಲಾಡವಿಕೊ ಪಾತ್ರ ವಹಿಸಿದ್ದೆ.

ಪ್ರಸ್ತುತಿ - ಧೀರೇಂದ್ರ ಸೀತಾರಾಮ್

ಅಮ್ಮ, ಆಚಾರ, ನಾನು

(ಕವನ ಸಂಕಲನ 'ಸಂಜೆ ಐದರ ಮಳೆ')

ನನ್ನ ಮದುವೆಗೆ ಮುಂಚೆ
ಹತ್ತಾರು ಹೆಣ್ಣುಗಳ ನೋಡಿ ನಮ್ಮಮ್ಮ
ಒಬ್ಬೊಬ್ಬರನೂ ತನ್ನ ಒಪ್ಪಿಗೆಯ ಒರೆಯಲ್ಲಿ ಅರೆದು
ಅವಳು ಹಾಗೆ ಇವಳು ಹೀಗೆ
ಆಕೆಗಿಂತ ವಾಸಿ ಕಾಗೆ
ಈಕೆ ಎಲ್ಲ ಸರಿ, ಆದರೆ ಉದ್ದ ನಾಲಗೆ
ಒಬ್ಬಾಕೆ ಲಂಕಿಣಿ
ಇನ್ನೊಬ್ಬಾಕೆ ಜಿರಾಫಿಣಿ
ಒಬ್ಬಳು ನಿಂತರೆ ಬೆದರು ಬೊಂಬೆಯ ತರಹ
ಇನ್ನೊಬ್ಬಳ ಹಲ್ಲು ಮಕ್ಕಳ ಬರಹ
ಎಂದೆಲ್ಲರಿಗೂ ಹಚ್ಚಿ ಬಿರುದು -
ಬಹಳ ದಿನ ಅವಿವಾಹಿತನಾಗಿಯೇ ಉಳಿದೆ;
ಅಮ್ಮ ನನ್ನ ಮನಸಾರೆ ಹಳಿದೆ.

'ಅಮ್ಮ ಕಟ್ಟಾ ಸಂಪ್ರದಾಯಸ್ಥೆ
ಖುರಾನು, ನಮಾಜು, ರಂಜಾನಿನುಪವಾಸ,
ಧಾರ್ಮಿಕಾಚಾರಗಳಲ್ಲಿ ಹೇಳತಿರದ ಆಸ್ಥೆ;
ಬುರ್ಖಾ ತೊಡದೆ ಬೀದಿಯಲಿ ಹಾದುಹೋಗುವ ನಮ್ಮವರ
ಹೆಣ್ಣುಗಳ ಕಂಡು ಕಿಡಿಕಿಡಿಯಾಗಿ-
ದೇವರು ಧರ್ಮಗಳ ಭಯವಿರದೆ ಎಳ್ಳಷ್ಟು
ಗಂಡಸರೆದುರು ಮೈ ಪ್ರದರ್ಶಿಸುವ ಗಂಡು
ಬೀರಿಗಳು ಗಂಡಂದಿರ ಜೊತೆ ಬಾಳಿಯಾರೆ?
ಇಂಥವರನ್ನ ನನ್ನ ಮಗನಿಗೆಂದೂ ತಾರೆ
ನೆಂದು ಪ್ರತಿಜ್ಞಿಸಿ -

ಸದಾ ಬುರ್ಖಾ ತೊಡುವ ಕರಡಿಯನ್ನು
ಆಧುನಿಕ ವಿದ್ಯಮಾನಗಳ ಕಂಡರಿಯದ ಕುರುಡಿಯನ್ನು
ಹಳ್ಳಿ ಮೊದ್ದನ್ನ ಮೆಚ್ಚಿ
ನನ್ನ ಕೇಳಿದಾಗ, ನಾನೋ ಬೆಚ್ಚಿ
ಖುದ್ದಾಗಿ ನೋಡಿ ಒಪ್ಪಿದ ವಿದ್ಯಾವಂತೆಯ
ಕೈಹಿಡಿವೆನೆಂದಾಗ -
'ಓದಿದವರು ಹಾಳಾಗ
ನಾನೇನು ಓದಿದ್ದೇನೋ ಪೆದ್ದ?
ಮದುವೆಗೆ ಮುಂಚೆ ಹುಡುಗ

ಹೆಣ್ಣು ನೋಡುವುದು ಧರ್ಮ ನಿಷಿದ್ಧ,
ನಾವೆಲ್ಲ ಕಣ್ಣು ಮುಚ್ಚಿ ಹೆಣ್ಣ ಮೆಚ್ಚಿ ಗಂಟು ಹಾಕುವೆವೆ?'
ಎಂದು ಬಾಯಿ ಮುಚ್ಚಿಸಿದಳು.

ಅಪ್ಪ ಉದಾರಿ:
'ಮಗ ತಾನೇ ಆರಿಸಿಕೊಳ್ಳಲಿ ಭವಿಷ್ಯದ ದಾರಿ
ಹೆತ್ತವರು ನಾವೇಕೆ ಆಗುವುದು ತಡೆ?
ಆ ಯೋಚನೆಯ ಬಿಟ್ಟುಬಿಡೆ'
ಎಂದು ಎಚ್ಚರಿಸಿದಾಗ -
ಅಮ್ಮ ಅನ್ನ ನೀರು ಬಿಟ್ಟು ಗಳಗಳ ಅತ್ತು
ಉರಲು ಬಾವಿ ಬೆಂಕಿಗಳ ಉಚ್ಚರಿಸಿದಾಗ
ತೆಪ್ಪಗಾದೆ.

ಅಪ್ಪ ಲೋಕ ಕಂಡವರು - ಹಾಗೇ ಅಮ್ಮನ
ಕೋಪ ಹಟ ಕಂಡವರು.
ವಿಪರೀತಕ್ಕೆ ಬಂತು ತಗಾದೆ
ಎನಿಸಿ, ಮುಂದೇನೂ ತೋಚದೆ 'ನಿನ್ನಿಷ್ಟ'ವೆಂದರು;
ರಾತ್ರೆಯೆಲ್ಲ ಕೋಣೆಯ ದೀಪವುರಿಸಿ ಸಿಗರೇಟು ಹಚ್ಚಿ
ಶತಪಥಿಸಿ ಒಳಗೊಳಗೇ ನೊಂದರು.

ಒಂದು ದಿನ ಅಮ್ಮನಿಗೆ ಜ್ಞಾನೋದಯ
ವಾಯಿತೆಂದೆನಿಸಿತು; ಊಟಕ್ಕೆ ಕುಳಿತಿದ್ದಾಗ
'ನಿನ್ನಿಷ್ಟದಂತೆ ಓದಿದವಳನೇ ಮದುವೆಯಾಗಪ್ಪ' -
ಎಂದಾಗ ಅಪನಂಬಿಕೆಯೊಂದಿಗೆ ಅಚ್ಚರಿ
ಯೊಂದಿಗೆ ಖುಷಿಯೊಂದಿಗೆ ಭಯ
ಬೆಳೆದು ಕೈತೊಳೆದು ಎದ್ದೆ ಬೇಗ.

ಆ ಡಬಲ್ ಪದವೀಧರೆಯ ಭಾವಚಿತ್ರವನ್ನ
ಇಡೀ ದಿನ ನೆಟ್ಟು ಕಣ್ಣ
ತೂಗಿ ಅಳೆದು
ವಿಳಾಸ ತಿಳಿದು ಹತ್ತಿರದಲ್ಲೇ ಕಂಡು ಮೆಚ್ಚಿ
ನಿಶ್ಚಿತಾರ್ಥ ಶಾಸ್ತ್ರ ಮದುವೆ ಎಲ್ಲ ಮುಗಿಯಿತು;
ಮನಸ್ಸು ಅಮ್ಮನಿಗೆ ಮೌನದಲ್ಲೇ ಕೈ ಮುಗಿಯಿತು.

ಮೊದಲ ಸಲ ತಿರುಗಾಡಲು ಹೊರಟಾಗ
ನನ್ನಾಕೆ ತೋಳಿಲ್ಲದ ರವಿಕೆಯುಟ್ಟು,
ಭಾರಿ ಸೀರೆಯನ್ನು ಸೊಂಟದ ಕೆಳಗೆ ನಾಜೂಕಾಗಿ ಕಟ್ಟಿ
ಕಾಲಿಗೆ ಹೈಹೀಲ್ಡು ಕೆರ
ಕೊರಳಿಗೆ ಚಿನ್ನದ ಸರ

ಕಿವಿಗೆ ಬೆರಳಿಗೆ ಉಂಗುರ ತೊಟ್ಟು
ಲಿಪ್‌ಸ್ಟಿಕ್ಕು ಪೌಡರು ರೂಜು ಬಳಿದು ದೃಷ್ಟಿ ಬೊಟ್ಟಿಟ್ಟು
ಹೆರಳ ಗೋಪುರದಲ್ಲಿ ಕೂದಲ ಬಿಗಿದು
ಎಡ ಬೈತಲೆ ತೆಗೆದು
ಇವೆಲ್ಲವನ್ನೂ ಮೀರಿಸುವ ಮುಗುಳ್ನಗೆ ತೀಡಿ
ಹೊಸಿಲ ಇನ್ನೇನು ದಾಟಬೇಕು - ಆಗ
'ಬಂದೆ ತಡೆಯಿರಿ' ಎಂದು ಒಳಗೋಡಿ
ಬಂದು 'ನಡೆಯಿರಿ' ಎಂದಾಗ
ತಲೆ ಸುತ್ತಿ ನಾಲಗೆ ಬತ್ತಿ ನಾನಾದೆ ಮೂಕ;
ನೋಡಿದರೆ
ಉಟ್ಟಿದ್ದಳು ನಮ್ಮಮ್ಮನ ಬುರ್ಖಾ

ವಿಮರ್ಶೆ

ನಾಡೋಜ ಕವಿ ನಿಸಾರ್ ಅಹಮದ್ ಅವರ ಗೌರವಾರ್ಥ ನಡೆದ ಸಾಹಿತ್ಯ ದಾಸೋಹ-೧೭೭ ರಲ್ಲಿ ಓದಲು ನಾನು ಆರಿಸಿಕೊಂಡ ಕವನ, "ಅಮ್ಮ ಆಚಾರ ಮತ್ತು ನಾನು". ಗದ್ಯಲಯದ ಕಥನ ಕವನವೆಂದು ಗುರುತಿಸಬಹುದಾದ ಈ ಕವನದಲ್ಲಿ ತೆಳುವಾದ ಹಾಸ್ಯ, ವಿಡಂಬನೆ, ಪ್ರತಿಭಟನೆ, ಆಧುನೀಕತೆ ಮತ್ತು ಸಂಪ್ರದಾಯಕ್ಕೂ ಯುವ ಮನೋಭಾವಕ್ಕೂ ನಡೆವ ಸಂಘರ್ಷ ನಾಟಕೀಯವಾಗಿ ತೆರೆದುಕೊಳ್ಳುತ್ತದೆ.

ಮುಸ್ಲಿಂ ಕುಟುಂಬದ ಯುವಕ ತಾನೇ 'ಖುದ್ದಾಗಿ ನೋಡಿ ಒಪ್ಪಿದ ವಿದ್ಯಾವಂತೆಯ ಕೈ ಹಿಡಿಯುವೆನೆಂದಾಗ', ಸಂಪ್ರದಾಯ ಶರಣೆ, ಹಟವಾದಿ ಅಮ್ಮ ವಿರೋಧಿಸುತ್ತಾಳೆ. 'ಅಪ್ಪ ಉದಾರಿ', ಆದರೆ ಹೆಂಡತಿಯ 'ಕೋಪ ಹಟ ಕಂಡವರು' ವಿಪರೀತಕ್ಕೆ ಬಂತು ತಗಾದೆ ಎನಿಸಿ ನಿನ್ನಿಷ್ಟ' ಅಂದುಬಿಡುತ್ತಾರೆ. ಕೊನೆಗೊಂದು ದಿನ, 'ಅಮ್ಮನಿಗೆ ಜ್ಞಾನೋದಯ' ವಾಗಿ 'ನಿನ್ನಿಷ್ಟದಂತೆ' ಆಗಲಿ ಎಂದು, 'ಆ ಡಬಲ್ ಪದವೀಧರೆಯ', 'ಇಡೀ ದಿನ ನೆಟ್ಟು ಕಣ್ಣು ತೂಗಿ ಅಳೆದು' ಮದುವೆಯನ್ನು ಶಾಸ್ತ್ರ ಸಂಪ್ರದಾಯದ ಪ್ರಕಾರ ಮಾಡುತ್ತಾರೆ. 'ಮೊದಲ ಸಲ ತಿರುಗಾಡಲು ಹೊರಟಾಗ', ಆಧುನಿಕ ವೇಷ ಭೂಷಣ ಧರಿಸಿ ಹೊಸಿಲ ತನಕ ಬಂದು, 'ಬಂದೆ ತಡೆಯಿರಿ' ಅಂದು, ಒಳಗೆ ಹೋಗಿ ಬಂದು 'ನಡೆಯಿರಿ' ಅಂದಾಗ, ಕವಿ ಆಗುತ್ತಾನೆ, 'ಮೂಕ', ಯಾಕೆಂದರೆ ಹೊಸ ಹುಡುಗಿ ' ಉಟ್ಟಿದ್ದಳು' ಅವನ ಅಮ್ಮನ 'ಬುರ್ಖಾ'.

ಸರಾಗವಾಗಿ ಓದಿಸಿ ಕೊಳ್ಳುವ ಈ ಕವನ, ನಿಸಾರರ, 'ಸಂಜೆ ಐದರ ಮಳೆ' [1977] ರಲ್ಲಿದೆ. ಒಂದು ಕಥೆಯಂತೆ ನಿರೂಪಿಸಿ, ಅಸಕ್ತಿಯನ್ನು ಕಾಯ್ದುಕೊಳ್ಳುತ್ತದೆ. ಸಂಪ್ರದಾಯಸ್ಥ ಸಮಾಜವೊಂದು ಬದಲಾವಣೆಗೆ ತೆರೆದು ಕೊಳ್ಳಲು ಯತ್ನಿಸುವ ಸಂಧಿ ಸಮಯದ ತಣ್ಣನೆಯ ಸಂಘರ್ಷವನ್ನು ತೋರಿಸುತ್ತದೆ. ಕಟ್ಟಾ ಸಂಪ್ರದಾಯಸ್ಥೆ ಅಮ್ಮ, ಮಗನ ಮೇಲಿನ ಪ್ರೀತಿಗಾಗಿ ಆಧುನಿಕ ತರುಣಿಯನ್ನು ಸೊಸೆಯಾಗಿ ಅಂಗೀಕರಿಸಿದರೂ, ಸೊಸೆ ಸಂಪ್ರದಾಯ ಮುರಿಯಲು ಆಗುವುದಿಲ್ಲ. ಈ ಘಟನೆ, ಸ್ವತಃ ಸೊಸೆ ಓದು ಬರಹ ಕಲಿತ್ತಿದ್ದರೂ ಆಂತರ್ಯದಲ್ಲಿ ಶುದ್ಧ ಸಂಪ್ರದಾಯಸ್ಥೆಯಾಗಿರುವಳೊ ಅಥವಾ ಸಂಪ್ರದಾಯವನ್ನು ಮುರಿಯಲು ಇಚ್ಛಿಸಳೊ ಅಥವಾ ಅತ್ತೆಯನ್ನು ಎದುರಿಸಲು ಬಯಸಳೊ ಅಥವಾ ಮನೆಯ ನೆಮ್ಮದಿ, ಅತ್ತೆಯ ಪ್ರೀತಿಗೆ ಗೌರವ ಸೂಚಿಸಿದಳೊ ಎಂಬುದು ಜಿಜ್ಞಾಸೆ.

ಮಗನೂ ತಾಯಿ ಒಪ್ಪುವ ತನಕ, ಮದುವೆಗೆ ಒತ್ತಾಯ ಮಾಡದೆ 'ಬಹಳ ದಿನ ಅವಿವಾಹಿತನಾಗಿಯೇ' ಉಳಿದಿರುತ್ತಾನೆ. ಅಪ್ಪ, ಉದಾರಿಯಾಗಿದ್ದರೂ, ಮಗನಿಗೆ ಒಪ್ಪಿಗೆಯನ್ನು ನೀಡಿದರೂ, ಹೆಂಡತಿಯನ್ನು ಎದುರಿಸಲು ಸಿದ್ದನಿಲ್ಲ. ಸಂಸಾರದ ಸರಿಗಮ ಅವನಿಗೆ ಮುಖ್ಯ. ತಾನೆ 'ರಾತ್ರೆಯೆಲ್ಲ ಕೋಣೆಯ ದೀಪವುರಿಸಿ, ಸಿಗರೇಟು ಹಚ್ಚಿ ಶತಪಥಿಸಿ ಒಳಗೊಳಗೇ' ನೋಯುತ್ತಾನೆ. ಮಗನ ವೈಚಾರಿಕತೆಯನ್ನು ಮೆಚ್ಚಿ, ಅವನ ಪ್ರೇಮವನ್ನು ಬೆಂಬಲಿಸಲು ಸಂಪ್ರದಾಯವನ್ನು ತ್ಯಜಿಸಲು ಅವನು ಸಿದ್ದ. ಆದರೆ ಸಂಸಾರದ [ಹೆಂಡತಿಯೆಂದು ಓದಿಕೊಳ್ಳಿ] ಹಿಡಿತದಿಂದ ಆತ ಹೊರಬರಲಾರನು.

ಕವನದ ನಾಯಕನಿಗೆ ಅವನ ಪ್ರೀತಿ ಮುಖ್ಯ. ಅದಕ್ಕಾಗಿ ಕಾಯಲು ಸಿದ್ಧ. ಆದರೆ ಅವನೂ ಅಮ್ಮನನ್ನು ಎದುರಿಸಲು ಸಿದ್ಧನಿಲ್ಲ. ತಾಯಿಯನ್ನು ಒಪ್ಪಿಸುವ ಪ್ರಯತ್ನವನ್ನೂ ಅವನು ಮಾಡುವುದಿಲ್ಲ. ಅಮ್ಮನೇ ಮಗನ ಮೇಲಿನ ಪ್ರೀತಿಗಾಗಿ ಅವಳ ಆಚಾರ ಸ್ವಲ್ಪ ಬದಿಗೆ ಸರಿಸಿ, ಅದರಲ್ಲೂ ಹುಡುಗಿಯನ್ನು ಚೆನ್ನಾಗಿ ಪರೀಕ್ಷಿಸಿ ಒಪ್ಪಿಕೊಳ್ಳುತ್ತಾಳೆ. ಸೊಸೆಯ ನಡೆಯು ಅತ್ತೆಗೆ ಕೃತಜ್ಞತೆಯನ್ನು ತೋರುವಂತೆ ಕಾಣುತ್ತದೆ. ಅತ್ತೆಯ ಬಗೆಗಿನ ಅಂಜಿಕೆ ಅಥವಾ ಸಂಸಾರದ ಸೌಖ್ಯ, ತನ್ನ ಗಂಡನ ನೆಮ್ಮದಿಯು ಅವಳಿಗೆ ಮುಖ್ಯವಾಗುತ್ತದೆ. ಆಧುನೀಕತೆಯ ಮೇಲೆ ಸಾಂಪ್ರದಾಯಿಕತೆಯ ಮುಸುಕು ಆವರಿಸಿಕೊಳ್ಳುತ್ತದೆ.

ಕಥಾನಾಯಕನಿಗೆ ಸಂಪ್ರದಾಯವನ್ನು ಮುರಿಯುವುದಕ್ಕಿಂತ ಅವನ ಪ್ರೇಮವೇ ಮುಖ್ಯ. ಹೆಂಡತಿಯ ಆಧುನಿಕ ವೇಷಭೂಷಣಕ್ಕೆ ಅನುಮತಿ ಕೊಟ್ಟಿದ್ದರೂ ಅವನು ಸಂಪ್ರದಾಯದ ಹಿಡಿತಕ್ಕೆ ಮೂಕನಾಗುತ್ತಾನೆ.

ನವ್ಯ ಮಾರ್ಗಕ್ಕೆ ಪ್ರತಿಭಟನೆ ಮುಖ್ಯವಾಗಿತ್ತು. ಸಂಪ್ರದಾಯವನ್ನು ಮುರಿದು ಹೊಸಹಾದಿ ಹುಡುಕುವುದು ನವ್ಯದ ಆಶಯ. ಸ್ತ್ರೀ ಸಮಾನತೆ, ಮಾನವ ಹಕ್ಕುಗಳನ್ನು, ವೈಯುಕ್ತತೆಯನ್ನು ನವ್ಯ ಎತ್ತಿ ಹಿಡಿಯಿತು. ನವೋದಯದ್ದು ರಮ್ಯ ಮಾರ್ಗ. ಸಂಪ್ರದಾಯದ ಮೌಲ್ಯವನ್ನು ಅದು ಅಭಿವ್ಯಕ್ತಿಸಿತು. ಗದ್ಯಲಯ ಅಳವಡಿಸಿಕೊಂಡ ನಿಸಾರರು ಒಂದು ರೀತಿ, ಇವೆರಡರ ನಡುವೆ ನಿಲ್ಲುತ್ತಾರೆ. ನವೋದಯದ ಮೌಲ್ಯಗಳಿಗೆ ವಾಲುತ್ತಾರೆ. ಮೆದು ಪ್ರತಿಭಟನೆಯ ದನಿಯುಳ್ಳ ಈ ಕವನ ಸಂಪ್ರದಾಯದ ತೆಕ್ಕೆಗೆ ಬೀಳುತ್ತದೆ.

ಒಂದು ರೀತಿಯಲ್ಲಿ ' ಅಮ್ಮ ಆಚಾರ ಮತ್ತು ನಾನು', ಈ ಕಾಲದ ಯುವ ಜನರ ಪ್ರಾತಿನಿಧಿಕ ಕವನ ಅನ್ನಿಸುತ್ತದೆ. ಹೊರ ಮಗ್ಗುಲಲ್ಲಿ ಪ್ರತಿಭಟನೆ, ಮನದೊಳಗೆ ಸಂಪ್ರದಾಯ ನಿಷ್ಠೆ.

ಗಮನ ಸೆಳೆದ ಕವನ. ದಾಸೋಹದಲ್ಲಿ ಓದಲು ಸಿಕ್ಕಿದ್ದು ಸಂತೋಷ ತಂದಿತು. ನಾಡೋಜ ನಿಸಾರರಿಗೆ ನಮನಗಳು.

ಪ್ರಸ್ತುತಿ - ಬೆಂಶ್ರೀ ರವೀಂದ್ರ.

ಮೈ ಮುರಿದೆದ್ದಿರೆ

ಮೈ ಮುರಿದೆದ್ದಿರೆ ಮೂಡಣದಲ್ಲಿ
ಹೊಂಬಿಸಿಲಿನ ನಗೆ ಸೂರ್ಯ
ಬಣ್ಣಗಳೊಂದಿಗೆ ದಿಬ್ಬಣ ಹೊರಟಿದೆ
ಪ್ರಕೃತಿಯ ಸೌಂದರ್ಯ

ತೇಲಿದೆ ತಂಬೆಲೆರಲಿ ಮರಗಿಡಗಳ
ಮಂಜುಳ ಮಂಗಳ ವಾದ್ಯ
ಪಾಳ್ ನೆಲ ನಂದನವಾಗಿದೆ ಆಹಾ !
ಚಣದೊಳಗೆಂತಹ ಚೋದ್ಯ

ಅಂಬರದಲಿ ತೇಲಾಡುವ ಮೇಘಗಳಂಚಿಗೆ
ಕಂಚಿನ ಹೊಳಪು
ಮಂಜಿಗು ಸಹ ಅಪರಂಜಿಯ ಲೇಪ
ತಲೆ ಮರೆಸಿರುವುದು ಬಿಳುಪು ||

ಗಾಯಕರು : ಸುಮಾ ಪ್ರಸಾದ್

ಮಾಸ್ತಿ

(ಕವನ ಸಂಕಲನ 'ಸಂಜೆ ಐದರ ಮಳೆ)

ಸದಾ ಇವರು ಹೀಗೆಯೇ—
ಇಲ್ಲೆ, ಗಾಂಧಿಬಜಾರಿನ ಹಿರಿ ಚೌಕದೆದುರಲ್ಲೆ,
ಸಿಗರೇಟು ಸೇದುತ್ತಲೊ, ಪತ್ರಿಕೆಯನೋದುತ್ತಲೊ,
ಹರಟುತ್ತಲೊ ಇದ್ದಾಗ ಎದುರಾಗುವರು ಇದ್ದಕಿದ್ದಂತೆ
ನಿರ್ದಿಷ್ಟ ಸಮಯದಂತೆ.

ವಯಸು ಅನುಭವ ಹೂಡಿ ಸುಖದುಃಖ ಬೆಳೆದ ಮುಖ,
ಹಿಂದೊಮ್ಮೆ ನೆಲಸಿದ್ದ ಬೆಳಕ ಕನವರಿಸುತಿಹ ಮಂದಗಣ್ಣು;
ಸಾಂತ್ವನವ ನುಡಿದಿರುವ ಹಳೆ ನಮೂನೆಯ ಚಶ್ಮ.
ಅದೇ ಕೊಡೆಯ ಗದೆ:
ಬೆದರಿಸಲು ಭಿಕ್ಷುಕರ ಹುಡುಗರನ್ನ,
ಬೀದಿಕುನ್ನಿಯ, ಪೋಲಿ ದನಗಳನ್ನ,
ಎದುರಿಸಲು ಮಳೆ ಬಿಸಿಲ ದಾಳಿಯನ್ನ,
ಸಾಲುವೃಕ್ಷದ ಹಕ್ಕಿಹಿಕ್ಕೆಯನ್ನ.

ಇವರು ನನ್ನೆದುರಲ್ಲಿ ಹಾದು ಹೋದಾಗೆಲ್ಲ
ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ
ಬೆಳಗಾಗ ಛಳಿಯಲ್ಲಿ ಬಿಸಿ ನೀರ ಮಿಂದಂತೆ
ಎದೆ ಸ್ವಚ್ಛಗೊಳ್ಳುತ್ತದೆ; ಹಗುರಕ್ಕೆ ಸಲ್ಲುತ್ತದೆ. (1)

ಗವೀಪುರದಿಂದ ಗಾಂಧಿಬಜಾರಿನ ಕೊನೆಗೆ
ಪ್ರಕೃತಿಯ ಕರೆಯಂತೆ ಎಳೆಯುವುದು ಕ್ಲಬ್ಬು.
ಅಲ್ಲಿ ಕಾಯುತ್ತಾರೆ ಕಿಟ್ಟಿ ಗುಂಡೂ ಸುಬ್ಬು-
ಹೊಸಹೊಸ ಯೌವನದ ರಂಗುಗಳ ಗುಂಗುಗಳ,
ಫ್ಯಾಶನ್ನು ಪಹರೆಗಳ, ಕಸಿ ಹಣ್ಣು ಚಹರೆಗಳ
ವರ್ತಮಾನದ ನಟ್ಟನಡುವಿನಲ್ಲಿ
ಹುಚ್ಚು ಹುರುಪಿನ ನೂಕುನುಗ್ಗುಲಲ್ಲಿ— ಅಚ್ಚುಕಟ್ಟಿನ ಹಾಗೆ,
'೪೦ ಮಾದರಿಯ ಬೆಂಗಳೂರಿನ ಹಾಗೆ,
ಕಾಲ ಕುಗ್ಗಿಸಿದೊಡಲು ಕಾಲನೆಳೆಯುತ ಬರಲು
ಈ ವೃದ್ಧರನು ಕಂಡು "ಅಯ್ಯೋ" ಎಂದಿದ್ದೇನೆ;
ಎನ್ನುತಿರುವಂತೆಯೇ ಕೈಯ ಮುಗಿದಿದ್ದೇನೆ.

ರಸ್ತೆ ಹಿರಿದಾಗಿ ಫುಟ್ಪಾತು ಕಿರಿದಾಗಿ
ಓಡಾಟ ಹೆಚ್ಚಾಗಿ, ನೆಮ್ಮದಿಯೆ ಪೆಚ್ಚಾಗಿ,
ಲೋಕ ಕಂಪ್ಯೂಟರಿನ ಸ್ವಿಚ್ಚು ತಂತಿಗಳಂತೆ ಸಂದಿಗ್ಧವಾಗಿ,

ಬೆಲೆಗಳೆಲ್ಲ ಬಿದ್ದು ಹರಡಿ ದಿಕ್ಕಾಪಾಲು
ಎಸೆಯುತಿವೆ ಪ್ರತಿ ಕ್ಷಣವು ಸರಳ ವೃದ್ಧಾಪ್ಯಕ್ಕೆ ಹಿರಿ ಸವಾಲು (2)

ಕ್ಲಬ್ಬಿನಲಿ ನಿಶ್ಚಿಂತೆಯಾಗಿ ಎಲೆ ಕಲಸುವುದು
ಇಪ್ಪತ್ತೆಂಟನಾಡುವುದು—ನಡುವೆ ಅದೂ ಇದೂ
ಇಪ್ಪತ್ತೆಂಟನಾಡುವುದು;
ನಂಬರೆರಡರ ಬಸ್ಸಿನೆದುರು ಬಾಳೆಯ ಸಿಪ್ಪೆ
ಟೈಲರನ ಎಡಗಾಲನುಳುಕಿಸಿದ್ದು:
ರಾತ್ರಿ ಪುರ ಭವನದಲಿ ಸಂಗೀತ ಸಾಮ್ರಾಜ್ಞಿ
ಶಂಕರಾಭರಣದಲಿ ಪುಲಕಿಸಿದ್ದು;
ಅಬ್ದುಲನ ಹೈಕೋರ್ಟು ರಿಟ್ಟು ವಜಾ ಆದದ್ದು;
ಖೋಟ ನೋಟ್ ಕೃಷ್ಣನಿಗೆ ಕಠಿಣ ಸಜ ಆದದ್ದು;
ಬದರಿ ನಾದಿನಿಗೊಬ್ಬ ಒಳ್ಳೆ ವರ ಸಿಕ್ಕಿದ್ದು;
ರಷ್ಯ ಚೀನಾ ಕ್ಯೂಬ ಅಮೇರಿಕ ವಾರ್ತೆ ಮಿಕ್ಕಿದ್ದು;
ಅದೂ ಇದೂ ಇಪ್ಪತ್ತೆಂಟನಾಡುವುದು.
ನಡುವೆ ತಪ್ಪಾಡಿದರೆ ಎದುರಾಳಿಯಲ್ಲೊಬ್ಬ
ಮನೆಯ ಕಿರಿ ಸೊಸೆಯಂತೆ ಮುಖವನೂದಿಸಿ ಬೇಗಿ
ಗೊಣಗುವುದು: Let us play the game for game's sake.

ಇನ್ನಿವರ ಜೀವನ? ಅದು ಕೂಡ ಹೀಗೆಯೇ, ಎಲ್ಲ ಖುಲ್ಲ;
ಖುಷಿಗಷ್ಟೆ ನಫೆಗಲ್ಲ.
ಗಂಟೆಗಟ್ಟಲೆ ಕಲಸಿದರು ಕೈ
ಬಂದರಿಪ್ಪತ್ತು ಹೋದರಿಪ್ಪತ್ತು ನ.ಪೈ.
ಕೂಗು ಹುಸಿ ಮುನಿಸುಗಳ ನಡುವೆ ತುಟಿಗಳ ಮೊಗ್ಗೆ
ಬಿರಿಸಿ ನಕ್ಕಾಗಿವರು ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ;
ಚಣಕಿಷ್ಟು ಚಳಿ ನೂಲು, ಒಂದಿಷ್ಟು ಹೂ ಬಿಸಿಲು,
ಹೊರಗೆ ಕಚಪಿಚ ಕೆಸರು, ಒಳಗ ಬೆಚ್ಚನೆ ಸೂರು (3)

ಹೊತ್ತಾಯಿತೆ? ಆವರಿಸಿತೇ ಮಬ್ಬು?
ಕೊಡೆ ತೆರೆದು ಏಕಾಕಿ ಮನೆಯತ್ತ ನಡೆಯುವರು ಮರೆತು ಕ್ಲಬ್ಬು,
ಗಾಂಧಿಬಜಾರೀಗ ತಿಳಿಯಾಗಿ ಫರ್ಲಾಂಗು ಬೆಳಕ ಹಬ್ಬ—
ಚೌಕದೆಡೆ ಆಗೀಗ ಪ್ರತಿಪಕ್ಷದವನೊಬ್ಬ
ಎಲುಬಿರದ ನಾಲಗೆಯ ನಾಚು ನಡೆಸುತ್ತಿರಲು,
ಸರ್ಕಾರದಸಫಲತೆಯ ಹುಣ್ಣ ನೊಣ-ಸುತ್ತಿರಲು,
ದೀಪಗಳ ಝಗಮಗದಿ ಕಣ್ಸೋತು ನಿಂತಿರಲು
ಮನೆಮಠವ ಮರೆತಿರುವ ಮಂದಿ ಸಂತೆ
ಬೊಬ್ಬೆ ಅಬ್ಬರದೆದುರು ಗುರುತು ಹತ್ತದ ಹಾಗೆ
ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು
ಸಾಗುವರು ಸದ್ದಿರದೆ ಚಂದ್ರನಂತೆ;

ಗಂಭೀರವಾಗಿ
ಕರ್ತವ್ಯದೆಚ್ಚರಿನ ಸನ್ನೆಯಂತೆ.

ನೋಡುತ್ತಲಿದ್ದಂತೆ
ಹೋಟಲಿನ ಬದಿಯಲ್ಲಿ ಬೀದಿ ತಿರುಗನು ಹೊಕ್ಕು
ಮರೆಯಾಗುವರು ಮಾಸ್ತಿ—
ಸಂದ ಜೀವನದೊಂದು ರೀತಿಯಂತೆ;
ಸರಳ ಸದಭಿರುಚಿಯ ಖ್ಯಾತಿಯಂತೆ
***

ವಿಮರ್ಶೆ :

ನಿಸಾರರು ತಮ್ಮ ಹಿರಿಯ ತಲೆಮಾರಿನ ಸಾಹಿತಿ ಮಾಸ್ತಿಯವರನ್ನು ಕಂಡ ರೀತಿಯು ಇಲ್ಲಿ ಕವಿತೆಯಾಗಿದೆ. ಮಾಸ್ತಿಯವರು ಇಲ್ಲಿ ಗಾಂಧಿ ಬಜಾರಿನಂತೆ ಒಂದು ಪರಂಪರೆಯ ಸಂಕೇತವಾಗಿ ನಿಲ್ಲುತ್ತಾರೆ. ನಾಲ್ಕು ಭಾಗಗಳಲ್ಲಿರುವ ಕವಿತೆಯ ಮೊದಲನೆಯ ಭಾಗದಲ್ಲಿ ಕವಿ ಮಾಸ್ತಿಯವರ ಚಿತ್ರವನ್ನು ಕಟ್ಟಿಕೊಡುತ್ತಾರೆ. ಕವಿತೆಯಲ್ಲಿ ಪರಂಪರೆಯ ಬಗ್ಗೆ ಗೌರವವಿದೆ, ಕಳೆದುಹೋಗುತ್ತಿರುವ ಜೀವನ ರೀತಿಯ ಸರಳತೆ ಹಾಗೂ ಸದಭಿರುಚಿಯ ಬಗ್ಗೆ ಕಳಕಳಿ ಇದೆ. ಹಾಗೆಯೇ ಕವಿತೆಯು ಆಧುನಿಕ ಜೀವನದ ಅನಿವಾರ್ಯತೆಯನ್ನು ಒಪ್ಪಿಕೊಳ್ಳುತ್ತದೆ.

ಕವಿ ಸಿಗರೇಟಿನ ಹೊಗೆಯಲ್ಲೋ, ಹರಟುತ್ತಲೋ, ಪೇಪರೋದುತ್ತಲೋ ಯಾವುದೋ ಒಂದು ಹಗುರ ಲಹರಿಯಲ್ಲಿದ್ದಾಗ ಇದ್ದಕ್ಕಿದ್ದಂತೆ ಎದುರಾಗುವ ಮಾಸ್ತಿ ಅವರಿಗೆ ಒಂದು ಪರಂಪರೆಯ ಪ್ರತೀಕದಂತೆಯೇ ಕಾಣುತ್ತಾರೆ. ಜೀವನದಲ್ಲಿ ಸುಖ ದುಃಖವನ್ನು ಉಂಡಿರುವ ಮಾಸ್ತಿಯವರ ಹಳೆ ನಮೂನೆಯ ಚಶ್ಮಾದ ಹಿಂದಿರುವ ಅವರ ಬೆಳಕು ಕುಂದಿರುವ ಮಂದ ಕಣ್ಣುಗಳಲ್ಲಿ ಎದುರಿನವರನ್ನು ಸಾಂತ್ವನಗೊಳಿಸುವಂತಹ ಸಾತ್ವಿಕ ತೇಜಸ್ಸಿದೆ; ಪ್ರೀತಿ, ಆತ್ಮೀಯತೆಯಿದೆ. ಅವರ ಕೈಯಲ್ಲಿನ ಕೊಡೆ ಬರಿಯ ಬಿಸಿಲು, ಮಳೆಯಿಂದ ರಕ್ಷಣೆಗಾಗಿಯಷ್ಟೇ ಅಲ್ಲ; ಅದು ಭಿಕ್ಷುಕರು, ಬೀದಿನಾಯಿಗಳು ಮತ್ತು ಪೋಲಿ ದನಗಳಿಂದ ತಮ್ಮನ್ನ ರಕ್ಷಿಸಿಕೊಳ್ಳಲು ಹಿಡಿದಿರುವ ಗಧೆ; ಅಂತೆಯೇ ಸಾಲುಮರಗಳ ಕೆಳಗೆ ನಡೆಯುವಾಗ ಹಕ್ಕಿ ಹಿಕ್ಕೆಗಳು ತಮ್ಮ ಮೇಲೆ ಬೀಳದಂತೆ ಕಾಪಾಡುವ ಒಂದು ಕವಚ. ಮಾಸ್ತಿಯವರು ಎದುರಾದಾಗೆಲ್ಲಾ ಕವಿಗೆ ಹಳ್ಳಿಗಾಡಿನ ಮುಗ್ಧ ಸಂತೋಷ, ಹಿಂಜರಿಕೆಯನ್ನು ತೊಡೆಯುವ ಆತ್ಮೀಯ ಸಿಂಚನದಂತೆನ್ನಿಸಿ ಮನ ಹಗುರಾಗುತ್ತದೆ.

ಸಂಜೆಯ ಹೊತ್ತಿನಲ್ಲಿ ಗವಿಪುರದಿಂದ ಗಾಂಧೀ ಬಜಾರಿನ ಕ್ಲಬ್ಬಿಗೆ ಮಾಸ್ತಿಯವರು ತಮ್ಮ ಎಂದಿನ ಗೆಳೆಯರನ್ನು ಭೇಟಿಯಾಗಲು ಬರುತ್ತಾರೆ. ಇಂದು ವಾಹನಗಳಿಗಾಗಿ ರಸ್ತೆ ಹಿರಿದು, ನಡೆಯುವವರು ಕಡಿಮೆಯಾಗಿ ಫುಟ್ಪಾತು ಕಿರಿದು; ಅಂದಿನ ಸೋವಿ, ಇಂದಿನ ತುಟ್ಟಿ; ಅಂದಿನ ನೆಮ್ಮದಿ, ಇಂದಿನ ಧಾವಂತ- ಎಲ್ಲ ಬದಲಾವಣೆಗಳಿಗೂ ಇವರು ಅನಿವಾರ್ಯವಾಗಿ ಹೊಂದಿಕೊಳ್ಳಲೇಬೇಕಾಗಿದೆ. ಇಂದಿನ ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಯುವಕರ ಫ್ಯಾಶನ್ನುಗಳ, ಖಯಾಲಿಗಳ, ಬಣ್ಣಬಣ್ಣದ ಹುಚ್ಚು ಪ್ರವಾಹದಲ್ಲಿ ಇವರು ಸ್ವಾತಂತ್ರಪೂರ್ವದ ದಿನಗಳ ಪ್ರತಿನಿಧಿಯೋ ಎಂಬಂತೆ ನಿಧಾನವಾಗಿ ಗಾಂಧೀಬಜಾರಿನ ರಸ್ತೆಯಲ್ಲಿ ಸಾಗುವಾಗ ಆ ಹಿರಿ ಜೀವದ ಬಗ್ಗೆ ಕರುಣೆಯುಂಟಾಗಿ ಒಂದು ಪೂಜ್ಯ ಭಾವನೆ ತನ್ನಿಂತಾನೇ ಮೂಡುತ್ತದೆ.

ಇವರು ಕ್ಲಬ್ಬಿಗೆ ಹೋಗುವುದಾದರೂ ಏತಕ್ಕೆ? ಕೇವಲ 'ಖುಷಿಗಷ್ಟೆ, ನಫೆಗಲ್ಲ'. ಇಡೀ ಸಂಜೆಯೆಲ್ಲಾ ಗಳಿಕೆಯಾದರೂ, ಕಳೆದುಕೊಂಡರೂ ಇಪ್ಪತ್ತು ಪೈಸೆಯ ಮೇಲಿಲ್ಲ. ಗೆಳೆಯರ ಜೊತೆ ಇಸ್ಪೀಟಿನ ಎಲೆಗಳನ್ನು ಕಲಸುತ್ತಾ ಇಪ್ಪತ್ತೆಂಟನ್ನು ಆಡುತ್ತಾ ಜೊತೆಜೊತೆಗೆ ಲೋಕಾಭಿರಾಮದ ಇಪ್ಪತ್ತೆಂಟು ವಿಷಯಗಳನ್ನಾಡುತ್ತಾ ಕಾಲ ಕಳೆಯುವುದಷ್ಟೇ ಉದ್ದೇಶ. ಆಟದಲ್ಲಿ ಮುಳುಗಿ ಗೆಳೆಯರ ಹರ್ಷದ ಕೇಕೆಗಳು, ಕೂಗಾಟಗಳು, ತಪ್ಪಾದಾಗ ಯಾರೋ ಒಬ್ಬರ ಹುಸಿಮುನಿಸು-

ಎಲ್ಲವನ್ನೂ ಖುಷಿಯಾಗೇ ತೆಗೆದುಕೊಳ್ಳುವ ಇವರು ತುಟಿಬಿರಿದು ನಕ್ಕಾಗ 'ಥೇಟ್ ಜುಲೈ ತಿಂಗಳಿನ ಶಿವಮೊಗ್ಗೆ' ಎನ್ನುವಾಗ ಮಳೆಯ ನಡುನಡುವಿನ ಹೂ ಬಿಸಿಲು, ಹೊರಗಿನ ಕೊಚ್ಚೆ, ಕೆಸರನ್ನು ದಾಟಿಕೊಂಡು ಮನೆಯೊಳಗೆ ಬಂದ ತಕ್ಷಣ ಬೆಚ್ಚನೆಯ ಭಾವ ಮೂಡುವ ಸೊಗಸು ಒಂದು ರೂಪಕವಾಗಿ ಎದುರು ನಿಲ್ಲುತ್ತದೆ.

ಕತ್ತಲಾಗುತ್ತಾ ಬಂದಂತೆಯೇ ಮರಳಿ ಮನೆಗೆ ಹೊರಡುತ್ತಾರೆ ಸದ್ದಿರದ ಚಂದ್ರನಂತೆ. ಗಾಂಧೀ ಬಜಾರಿನುದ್ದಕ್ಕೂ ಕಣ್ಣು ಕುಕ್ಕುವ ದೀಪಗಳ ಸಂಭ್ರಮ. ಜನರ ಉದ್ದೇಶವಿಲ್ಲದ ಅಲೆದಾಟ, ಯಾರದೋ ಅವೇಶಭರಿತ ಭಾಷಣ, ಮೈಮರೆತು ನಿಂತಿರುವ ಜನಜಂಗುಳಿ ಬೇರೆಯದೇ ಲೋಕವನ್ನು ಸೃಷ್ಟಿಸಿಬಿಟ್ಟಿರುತ್ತದೆ. ಇದಾವುದೂ ತಮಗೆ ಸಂಬಂಧವಿಲ್ಲವೆಂಬಂತೆ ಒಂದು ಸ್ಥಿತಪ್ರಜ್ಞಭಾವದಿಂದ ಮುಂದೆ ಸಾಗುತ್ತಾರೆ. 'ಕಾಲಿಗೊತ್ತಿದ ಗಾಜ ಚೂರ ದೂರಕೆ ಎಸೆದು' ಎನ್ನುವ ಪದಗಳಲ್ಲಿ ಜೀವನದ ಹಾದಿಯಲ್ಲಿ ತಮಗೆ ನೋವಾದರೂ, ಇನ್ನೊಬ್ಬರಿಗೆ ನೋವುಂಟಾಗದಂತೆ ಎಚ್ಚರದಿಂದ ನೋಡುವ ಅವರ ಕರ್ತವ್ಯ ಪ್ರಜ್ಞೆಯ ಹೊಳಹಿದೆ. ಇಂದಿನ ದಿನಗಳಲ್ಲೂ ತಮ್ಮ ಸದಭಿರುಚಿಯ ಪರಂಪರೆಯ ಜೀವನ ವಿಧಾನಕ್ಕೆ ಧಕ್ಕೆ ಬಾರದಂತೆ ನಿರ್ಲಿಪ್ತರಾಗಿ ಸಾಗುವ ಮಾಸ್ತಿಯವರ ಸಾತ್ವಿಕ ವ್ಯಕ್ತಿತ್ವದ ಭಾಷ್ಯವಿದೆ.

ನಿಸಾರರಿಗೆ ತಮ್ಮ ಹಿರಿಯ ತಲೆಮಾರಿನ ಮಾಸ್ತಿಯವರ ಬಗ್ಗೆ ಇರುವ ಅಪಾರ ಗೌರವ, ಅಭಿಮಾನಗಳು ಈ ಕವಿತೆಯಲ್ಲಿ ನಿಸಾರರ ನಗೆಯಷ್ಟೇ ಹಿತವಾಗಿ ಪ್ರತಿಬಿಂಬಿತವಾಗಿದೆ. ಅವರು ಮಾಸ್ತಿಯವರಲ್ಲಿ ಒಂದು ಸದಭಿರುಚಿಯ ತಲೆಮಾರಿನ ಪ್ರತೀಕವನ್ನು, ಆಧುನಿಕ ತಲ್ಲಣಗಳ ನಡುವೆಯೂ ಉಳಿಸಿಕೊಳ್ಳುವ ತಮ್ಮದೇ ಅಸ್ತಿತ್ವವನ್ನು, ಜೀವನದ ಸಂಧ್ಯೆಯಲ್ಲೂ ಕಾಣುವ ಜೀವನ ಪ್ರೀತಿಯನ್ನು, ತಾನು ನೋವುಂಡರೂ, ಇತರರಿಗೆ ಅದನ್ನು ಕೊಡಲಿಚ್ಛಿಸದ ಸಜ್ಜನ ಕರ್ತವ್ಯ ಪ್ರಜ್ಞೆಯನ್ನು ಅವರಲ್ಲಿ ಕಾಣುತ್ತಾರೆ. ಅವರು ಓಡಾಡುವ ಗಾಂಧೀ ಬಜಾರು ಹೊಸ, ಹಳೆ ತಲೆಮಾರುಗಳ ತಲ್ಲಣಗಳ ರೂಪಕದಂತೆ ಕಾಣುತ್ತದೆ. ಇಂದಿನ ತಲೆಮಾರಿನವರು ಎದುರಿಸುತ್ತಿರುವ ಸವಾಲುಗಳೆದುರಲ್ಲಿ ಅವರೊಬ್ಬ ಸಾಕ್ಷಿ ಪ್ರಜ್ಞೆಯಂತೆ ದೃಢವಾಗಿ ನಿಲ್ಲುತ್ತಾರೆ.

ಪ್ರಸ್ತುತಿ - ಟಿ. ಎಸ್. ಶ್ರವಣ ಕುಮಾರಿ.

ನಿಸಾರ್ ಅಹಮದ್ ಅವರೊಂದಿಗಿನ ಸಂವಾದದ ನೆನಪುಗಳು

ನನ್ನ ಸ್ನೇಹಿತ ಸುಬ್ರಹ್ಮಣ್ಯ ಮತ್ತು ನಿಸಾರ್ ಅಹಮದ್ ಅವರ ನಡುವೆ ನಡೆದ ಸಂವಾದವನ್ನು ಪ್ರಸ್ತುತಪಡಿಸುತ್ತಿದ್ದೇನೆ.

"ನಿನ್ನೆ ರಾತ್ರಿ ನಿದ್ದೆ ಬಾರದೆ ಹಾಗೇ ಯೋಚನೆ ಮಾಡುತ್ತಿರುವಾಗ, ಕಾಲೇಜಿನಲ್ಲಿದ್ದಾಗಿನ ನಡೆದ ಒಂದು ಘಟನೆ ಜ್ಞಾಪಕ್ಕಕ್ಕೆ ಬಂತು. ಗೌರ್ಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ಅಂದರೆ(ಗ್ಯಾಸ್ ಕಾಲೇಜ್ ಅಂತ ಕರೀತಿದ್ವಿ) 63 - 66 ರಲ್ಲಿ ನಾನು ಬಿಎಸ್ಸಿ ಓದುತ್ತಿದ್ದೆ.
ನಿಸಾರ್ ಅಹಮದ್ ರವರು ಭೂಗರ್ಭಶಾಸ್ತ್ರದ ಪ್ರೊಫೆಸರ್ ಆಗಿದ್ದರು. NCC ಆಫೀಸರ್ ಆಗಿ ನನಗೆ ಪರಿಚಯವಾಗಿದ್ದರು. ತೆಳ್ಳನೆ ಮೈಕಟ್ಟು. ಈಗಲೂ ಹಾಗೆ ಇದ್ದಾರೆ. ಅವರಿಗೆ ಕನ್ನಡದ ಮೇಲೆ ಆಸಕ್ತಿ ಇದೆ ಅಂತ ತಿಳಿದಿತ್ತು. ಕೆಲವು ಹಾಡಿನ ಧ್ವನಿಸುರುಳಿಯೂ ಮಾಡಿದ್ದರು.
ಹಾ! ಈಗ ಏನು ಹೇಳ ಹೊರಟೆ ಅಂದರೆ, ಒಂದು ದಿನ ನಾನು ಬನಶಂಕರಿ ಕಡೆ ಹೋಗಬೇಕಾಗಿತ್ತು. ಕಾರ್ಪೊರೇಷನ್ ಬಳಿ ಬಸ್ಸು ಹತ್ತಿ ಕುಳಿತೆ. ನಿಸಾರ್ ಅವರು ಸೂಟ್ ಹಾಕಿಕೊಂಡು ನಿಂತಿರುವುದನ್ನು ಕಂಡೆ. ನಮಸ್ಕಾರ ಮಾಡಿದೆ. ಬಸ್ಸು ಚಲಿಸುವ ತನಕ ಕಾದಿದ್ದು ನಿಸಾರ್ ಅವರಿಗೆ ದಯವಿಟ್ಟು ಕುಳಿತುಕೊಳ್ಳಲು ತಿಳಿಸಿದೆ. ಇಲ್ಲಪ್ಪ ಪರವಾಗಿಲ್ಲ ಕೂತ್ಕೊಳ್ಳಿ ಅಂದ್ರು. ಆಗ ನಾನು ಸರ್ ನೀವು ನನಗೆ ಮೇಷ್ಟ್ರಾಗಿದ್ದಿರಿ. ನೀವು ನಿಂತಿರುವುದು, ಶಿಷ್ಯ ಕೂತ್ಕೊಂದಿರುವುದು ಸರಿಕಾಣಲ್ಲ ಅಂದೆ. ನನ್ನ ನೋಡಿ ನಕ್ಕು ಸರಿಯಪ್ಪ ಅಂತ ಹೇಳಿ ಕುಳಿತುಕೊಂಡರು. ಬನಶಂಕರಿ ಸ್ಟಾಪ್ ಬಂತು ಇಬ್ಬರು ಇಳಿದಾಗ ಎಲ್ರೀ ನನ್ನ ಶಿಷ್ಯ ಆಗಿದ್ರೀ ಅಂತ ಮಾತು ಮುಂದುವರಿಸಿದರು. 63-66 ರಲ್ಲಿ ಬಿಎಸ್ಸಿ, ತಾವು ಜಿಯಾಲಜಿ ಮೇಷ್ಟ್ರು ಅಂತ ಹೇಳಿದಾಗ
"ಓ ಹೌದೇನ್ರೀ, ನೆನಪಿಟ್ಕೊಂಡಿದ್ದೀರಾ! ಪರವಾಗಿಲ್ಲ, ಆಮೇಲೇ ನೋಡಿ, ಒಂದ್ಮಾತು - ಕಾಲ ಕೆಟ್ಟೋಗಿದೆ ಕಾಲಾ ಕೆಟ್ಟೋಗಿದೆ ಅಂತಾರೆ, ಎಲ್ರೀ ಕೆಟ್ಟೋಗಿದೆ? ನನಗೇನೋ ಹಾಗನಿಸುತ್ತಿಲ್ಲ. ನೋಡಿ 25 ವರ್ಷಾ ಆದ್ರೂ ನೆನಪಿಟ್ಟುಕೊಂಡು, ಗುರುತಿಟ್ಟುಕೊಂಡು ದೊಡ್ಡವರು ಚಿಕ್ಕವರು ಗುರುಹಿರಿಯರು ಅಂತ ಭಾವನೆ ಮನಸಲ್ಲಿ ಇರುತ್ತೆ." ಜನ ಬದಲಾಗುತ್ತಾರೆ ಅಷ್ಟೆ ಅಂದರು.

ನಾನು ಚಾಕೃತಿ ನಮನ ಸಲ್ಲಿಸಿ ನಿಸಾರ್ ರವರ ಮಾತುಗಳನ್ನು ಪ್ರಸ್ತುತಿ ಪಡಿಸಲು ಅವಕಾಶ ಮಾಡಿಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ತಿಳಿಸಲು ಹರ್ಷವಾಗಿದೆ.

ಪ್ರಸ್ತುತಿ - ಬಾಲಸುಬ್ರಹ್ಮಣ್ಯಂ.

ನಮ್ಮ ಬಡಾವಣೆಯ ಕತೆ

(ಕವನ ಸಂಕಲನ - ಸ್ವಯಂ ಸೇವೆಯ ಗಿಳಿಗಳು)

ಅಯ್ಯಾ ಸಹವಾಸಿ,ಹೊಸಬ ನೀನು ಬೆಂಗಳೂರಿಗೆ
ವರ್ಗವಾಗಿ ಸಕುಟುಂಬ ಅವತರಿಸಿದೆ ಮೊದಲಬಾರಿಗೆ
ಹಿಡಿದೆ ಈ ಬಡಾವಣೆಯಲ್ಲೊಂದು ದಿವಿನಾದ ಮನೆ
ದೂರವಿದೆ ನಿಜ ಆಫೀಸಿಗೆ,ಹಾಗೆಂದುಇದಲ್ಲ ಲೋಕದ ಕೊನೆ

ಮೊನ್ನೆ ಫ್ಯೂಸ್ ಮುನಿದು,ಮಾಡಿದರೂ ಐದಾರು ಸಲ ಫೋನು
ವಿದ್ಯುಚಛಕ್ತಿ ಇಲಾಖೆಯ ಪಾದ ಬೆಳೆಯಲಿಲ್ಲೆಂದು ಹಾರಾಡಿದೆ ನೀನು
ಒಂದಷ್ಟು ತಡವಾದದ್ದಕ್ಕೆ ಆಕಾಶವೇ ಬಿದ್ದಂತೆ ಆದೆ ಹತಾಶ
ಹಳಬ ನನಗೆ ಬಾಯಿಪಾಠವಾಗಿದೆ ಈ ಬಡಾವಣೆಯ ಇತಿಹಾಸ

ಹಿಂದೆ ಈ ನಿವೇಶನಗಳಲಿ ಮನೆಗಳರಳುವ ಮೊದಲು
ಬೀದಿಯ ಬೆಟ್ಟ ಕಣಿವೆ ಗಳಿಗೆ ಟಾರು ಸಮಾನತೆ ಸಾರುವ ಮೊದಲು
ಬಸ್ ಸ್ಟಾಪು ಹೆರಿಗೆಯಾಸ್ಪತ್ರೆ,ಪೋಸ್ಟಾಫೀಸು ನೆರಳು ಚೆಲ್ಲುವ ಮೊದಲು
ನೆಲೆಸಿದ್ದರಿಲ್ಲಿ ಇನ್ನೆಷ್ಟು ಹರಿಸುತ್ತಿದ್ದೆಯೋ ಗಂಟಲಿನ ಹೊನಲು

ಒಂದು ಕಾಲಕ್ಕಿಲ್ಲಿ ರಾಗಿ,ಹುಚ್ಚೆಳ್ಳು ಹೊಲ,ಜಾಲಿ ಈಚಲುವನ
ಸಿಟಿ ಮಾರ್ಕೆಟ್ಟಿಗಿಂತ ಕನಕಪುರವೇ ಹತ್ತಿರವೆಂದು ಜನ
ಜೋಕು ಮಾಡುವ ಕಾಲದಲ್ಲಿ,ಮನೆ ಕಟ್ಟಿದೈವರಲ್ಲಿ ನಾನೂ ಒಬ್ಬ
ನಲ್ಲಿ ಗೊರ ಗೊರ ಎಂದು ಕಂಠ ಸರಿಪಡಿಸಿಕೊಂಡರೆ ಇರಬೇಕು ಆ ದಿನ ಹಬ್ಬ

ಕಂಬಕ್ಕೆ ತಂತಿ ಚಿಗುರಿ,ಒಂದೇ ವರ್ಷಕ್ಕೆ ಮನೆಗೆ ಬೆಳಕಿನ ಭಾಗ್ಯ
ಗುಲ್ಮೊಹರಿನೆಸಳೂ ಉದುರದ ಗಾಳಿ ಬೀಸಿದರು ಕಂಬಕ್ಕೆ ಅನಾರೋಗ್ಯ
ವಾರಕ್ಕೆರಡುಸಲ ಈ ಬಡಾವಣೆ ಅಂಧಕಾಸುರನ ಗೋಡೌನು,ಮೇಣದ ಬತ್ತಿ
ತರಲೊಂದೇ ಮೈಲಿ,ಹತ್ತಿರದ ದಾರಿ ಹಿಡಿದರೆ,ಹಿಙದೆ ಅಲ್ಲಿದ್ದ ಗುಡ್ಡಹತ್ತಿ

ಈಗ ಗಿರಣಿಯಿದೆಯಲ್ಲ,ಅಲ್ಲಿ ಅಧಿಕಾರ ನಡೆಸಿತ್ತು ದೊಡ್ಡಹೊಂಡ
ಮಳೆಗಾಲದಲ್ಲೂ ಹಸಿರು,ಸಂಜೆ ಐದಕ್ಕೇ ಸಿದ್ಧ ಪಿಟೀಲುವಾದಕರ ತಂಡ
ಹೆಚ್ಚು ಹೇಳುವುದಿಲ್ಲ ಕಲ್ಪಿಸಿಕೋ,ನಾವಿಲ್ಲಿ ಮನೆಕಟ್ಟಿ ನೆಲೆಸಲು ಹಿಂದೇಟು
ಹಾಕುತ್ತಿದ್ದವರ ಪಾಯದಿಂದ ತೋರಣದವರೆಗೂ ಮೇಸ್ತ್ರಿಗಳೇ ಥೇಟು

ಕಟ್ಟಿದ ಮನೆಯ ದೊರೆಮಗನಂತೆ ಸೇರಿದ ನಿನಗೆ,ಪುಟ್ಟ ಕೊರತೆಗಳೂ ಬೆಟ್ಟ
ಆ ಕಷ್ಟಗಳನುಂಡ ನನಗೆ ಈ ಸೌಕರ್ಯಗಳ ಹೋಲಿಸಲು ನೆನಪೇ ತಕ್ಕಡಿ
ನೆನೆದರೇನೋ ತೃಪ್ತಿ,ಆಡಿದ್ದು ಧನ್ಯತೆಯ ಕುಡಿ,ಇರವು ಹೂವೇರಿದ ಮುಡಿ
ಕಷ್ಟಪಡದಿದ್ದರೂ ನೀನು,ಇರಲಿ ಪರಂಪರೆಯ ಊಹೆ- ಬದುಕು ಸಂತುಷ್ಟ

ವಿಮರ್ಶೆ
"ಅಯ್ಯಾ ಸಹವಾಸಿ", ಎಂದು ಹೊಸತಾಗಿ ಬಡಾವಣೆಗೆ ಬಂದವನನ್ನು ಆಪ್ತವಾಗಿ ಸಂಭೋದಿಸುತ್ತಾ ಕವನ ಆರಂಭವಾಗುತ್ತದೆ.
ಐದಾರು ಸಲ ಕರೆ ಮಾಡಿ ದೂರು ಕೊಟ್ಟರೂ ವಿದ್ಯಚ್ಛಕ್ತಿ ಇಲಾಖೆಯವರು ಬಾರದ್ದಕ್ಕೆ ಹತಾಶನಾಗಿ ಕೂಗಾಡುವ ಹೊಸತಾಗಿ ಬಡಾವಣೆಗೆ ಬಂದ ಯುವಕನಿಗೆ ಕವಿ ತಾವು ಇಲ್ಲಿ ಬಂದು ಮೊದಲು ಮನೆ ಮಾಡಿದಾಗ ಹೇಗಿತ್ತು ಎಂದು ಬಡಾವಣೆಯ ಕತೆ ಹೇಳುವುದೇ ಕಾವ್ಯದ ವಸ್ತು.
ಇಲಾಖೆಯವರು ಪಾದ ಬೆಳಸಲಿಲ್ಲ ಎಂಬಲ್ಲಿ ದೂರು ನೀಡಿದಾಗ ಬಂದರರದೇ ಪುಣ್ಯ ಎಂಬಂತಹ ಚುರುಕಾದ ವ್ಯಂಗ್ಯವಿದೆ. ಇಂತಹ ಸಣ್ಣ ಸಮಸ್ಯೆಗೆ ಆಕಾಶವೇ ತಲೆಮೇಲೆ ಬಿದ್ದಂತೆ ಆಡುವೆಯಲ್ಲಾ. ಹಳಬನಾದ ನನಗೆ ಈ ಬಡಾವಣೆಯ ಇತಿಹಾಸ ಬಾಯಿಪಾಠ ವಾಗಿದೆ ಅನ್ನುತ್ತಾರೆ. ತಮ್ಮ ಬವಣೆಯನ್ನು ತೋಡಿಕೊಂಡು ಇತರರಲ್ಲಿ ಅನೇಕಬಾರಿ ಹೇಳಿಕೊಂಡಾಗಿದೆ ಎಂಬುದನ್ನು ಬಾಯಿಪಾಠವಾಗಿದೆ ಎಂದು ಒಂದೇ ಪದ ಬಳಸಿ ಹೇಳಿಬಿಟ್ಟಿದ್ದಾರೆ.

ಈ ಬಡಾವಣೆಯ ಮನೆ ಆಫೀಸಿಗೆ ದೂರವಿರಬಹುದು ಆದರೆ ಇದಲ್ಲ ಲೋಕದ ಕೊನೆ ಎಂದು ತಮಾಷೆ ಮಾಡಿ ಟಾರು ರಸ್ತೆ, ಬಸ್ ಸ್ಟಾಪು, ಹೆರಿಗೆ ಆಸ್ಪತ್ರೆ ಮುಂತಾದ ಎಲ್ಲ ಅನುಕೂಲತೆಗಳಾದ ಮೇಲೆ ಬಂದ ನೀನು ಮೊದಲೇ ಬಂದಿದ್ದರೆ ಇನ್ನೆಷ್ಟು ಗಂಟಲು ಹರಿದುಕೊಳ್ಳತ್ತಿದ್ದೆಯೋ ಎನ್ನುತ್ತಾರೆ.

ಇದೆಲ್ಲಾ ಹೊಲ ಇದ್ದ ಜಾಗವಾಗಿದ್ದು ,ಇಲ್ಲಿ ಮನೆ ಮಾಡುವುದೆಂದಾಗ, ಅಷ್ಟು ದೂರವೇ...ಸಿಟಿಮಾರ್ಕೆಟ್ ಗಿಂತ ಕನಕಪುರವೇ ಹತ್ತಿರ ಎಂದು ಜನ ಜೋಕು ಮಾಡುತ್ತಿದ್ದರು. ಅಂತಹ ಸಮಯದಲ್ಲಿ ಮನೆಕಟ್ಟಿದವನು ನಾನು ಎನ್ನುವ ಕವಿ, ನಲ್ಲಿ ನೀರು ಅಪರೂಪಕ್ಕೇನಾದರೂ ಗೊರ ಗೊರ ಅಂದರೆ ಅದು ಹಬ್ಬದ ದಿನವಾಗಿರಬೇಕು ಅನ್ನುವರು.

ಬಡಾವಣೆಗೆ ಬೆಳಕಿನ ಭಾಗ್ಯ ಒಂದೇ ವರ್ಷದಲ್ಲಿ ಬಂದರೂ, ಹಗುರಾದ ಗುಲ್ ಮೊಹರ್ ಹೂವೂ ಉದುರದಂತಹ ಗಾಳಿಗೇ ಕಂಬದಲ್ಲಿ ತೊಂದರೆಯಾಗುತ್ತಿತ್ತು ಅನ್ನುವ ಕವಿ ಒಂದು ಮೇಣದ ಬತ್ತಿ ತರುವುದಕ್ಕೂ ಒಳದಾರಿಯಲ್ಲಿ ಒಂದು ಮೈಲಿ ಹೋಗಬೇಕಾಗಿತ್ತು ಎನ್ನುವರು.

ಈಗ ಗಿರಣಿ ಇರುವಲ್ಲಿ ಹಿಂದೆ ದೊಡ್ಡ ಹೊಂಡ ಇದ್ದು ಸಂಜೆ ಐದಕ್ಕೇ ಬಯಲಿಗೆ ಹೋಗುವವರು(ಪಿಟೀಲುವಾದಕರ ತಂಡ!) ಅಲ್ಲಿ ಬರುತ್ತಿದ್ದರು ಎಂಬುದನ್ನು ತಮಾಷೆಯಾಗಿ ಹೇಳುತ್ತಾರೆ.
ಹಿಂಜರಿಯುತ್ತಿದ್ದ ಬೇರೆಯವರಿಗೂ ಮನೆ ಕಟ್ಟಲು ಪ್ರೇರೇಪಿಸಿ ಪಾಯದಿಂದ ಹಿಡಿದು ತೋರಣ ಕಟ್ಟುವವರೆಗೂ ಅವರ ಮನೆಗಳಿಗೆ ನಾವೇ ಮೇಸ್ತ್ರಿಗಳಾಗಿರುತ್ತಿದ್ದೆವು, ಎನ್ನುವ ಕವಿ,
ಕವನದುದ್ದಕ್ಕೂ ತಾವು ಪಟ್ಟ ಕಷ್ಟವನ್ನು ವಿನೋದದ ಲೇಪದೊಂದಿಗೆ ಹೇಳಿ ಕೊನೆಯಲ್ಲಿ ಮಾರ್ಮಿಕವಾಗಿ ನುಡಿಯುತ್ತಾರೆ.

"ನೀನೀಗ ದೊರೆಮಗನಂತೆ ಕಟ್ಟಿದ ಮನೆಗೆ ಬಂದಿರುವೆ. ಸಣ್ಣ ಪುಟ್ಟ ಕೊರತೆಗಳೇ ನಿನಗೆ ಬೆಟ್ಟವಾಗಿ ಕಾಣುತ್ತವೆ. ನಾನು ಪಟ್ಟ ಕಷ್ಟಗಳ ನೆನಪಿನಲ್ಲಿ ತೂಗಿದರೆ, ತೃಪ್ತಿ ಮೂಡುತ್ತದೆ." ಕಷ್ಟಪಡದಿದ್ದರೂ ನಿನಗೂ ಇರಬೇಕು ಪರಂಪರೆಯ ಊಹೆ ಎಂದು ತಮ್ಮ ಬಡಾವಣೆಯ ಕತೆ ಮುಗಿಸುತ್ತಾರೆ

ಜೀವನಾನುಭವ ಹಾಗೂ ಮೌಲ್ಯ, ವಿಚಾರಪರತೆ, ಜನಭಾಷೆಯ ದನಿ ಹಿಡಿದ ಭಾಷಾ ಪ್ರಯೋಗ, ಚುರುಕಾದ ವ್ಯಂಗ್ಯ, ಸಾಮಾಜಿಕ ವಿಮರ್ಶೆಗಳನ್ನು ಕವನ ಒಳಗೊಂಡಿರುವುದನ್ನು ಕಾಣಬಹುದು.
ಒಂದು ಸರಳ ನೇರ ಸುಂದರ ಕವನ.
ಪ್ರಸ್ತುತಿ - ಹು.ವಾ.ಶ್ರೀಪ್ರಕಾಶ್

ಕವಿಯಿಲ್ಲದಿದ್ದರೆ
(ಕವನ ಸಂಕಲನ - ಆಕಾಶಕ್ಕೆ ಸರಹದ್ದುಗಳಿಲ್ಲ)

ಕವಿ
ಅರೆ ಮರುಳ;
ಜೊತೆ ಜೀವಿಗಳ ಥರ ಸದಾ ಸ್ವಹಿತ ಚಿಂತನೆಗೆ
ಶೃಂಖಲಿಸಲೊಪ್ಪದ ಸ್ವಚ್ಛಂದ ಸಂಚಾರಿ.
ಹೆಂಗರುಳ:
ಸಮಾಜದಾಗುಹೋಗುಗಳ ಕೊಂಚ ಕುಲುಕಾಟಕ್ಕೂ
ಮಿಡಿವ ತರಂಗರೂಪಿ ಸುವಿಚಾರಿ.
ಜಗದ ಗತಿಶೀಲ ಗ್ರಾಮಾಫೋನಿನ ರೆಕಾರ್ಡಿನ ಮೇಲೆ
ಸೋಕಿಯೂ ಸೋಕದೆ ತಾಕಿ
ಸಂಗೀತ ಹೊಮ್ಮಿಸುವ ಸೂಜಿ.
ನಮ್ಮ ನಿಮ್ಮಂತೆ ಭವಿ
ಯಾದರೂ ಕವಿ ನಿತ್ಯ ಮನಮೋಜಿ.

ಅವನ ವಾಸ್ತವಿಕ ಬದುಕೆಲ್ಲ ಅಂತೆ ಕಂತೆ,
ಕನವರಿಕೆಗಳ ಸಂತೆ.
ಸಾಗುತ್ತ ಸಹಲೌಕಿಕರ ಸಾವು ನೋವಿನ ಹೆಡೆಯ ಅಡಿಯಲ್ಲಿ
ಮಾಗುತ್ತಾನೆ ಉಸಿರು ಸಿಕ್ಕಿಸುವ ಬಿಸಿಯ ಕಸಿವಿಸಿಗಳಡೆಯಲ್ಲಿ.
ಒಳಗೆ ಕುದ್ದೂ ಕುದ್ದೂ ಆಗುತ್ತಾನೆ ಅನ್ನದರಳು,
ಬಾಳಿನುಂಗುರದ ಪಚ್ಚೆ ಹರಳು.
ಹೊತ್ತಿಗೆ ನೆತ್ತಿಯನ್ನೊಡ್ಡಿ ನಡೆವವರ ನೆರಳು.

ಕವಿ -
ಸವಿ ಭಾವದೋಗರ
ಜೋಗುಳದ ಸೌದಾಗರ
ಮಾತು ನಲ್ಲೆಯ ಮುದ್ದಿನ ಗಲ್ಲ
ಅಷ್ಟುಮಾತ್ರವೆ ಅಲ್ಲ;
ಅವನೊಂದು ಚುಚ್ಚು ಮದ್ದು,
ಮಸಜೀದಿನ ಮುವಜ್ಜನ್ನಿನ ಎಚ್ಚರದ ಸದ್ದು;

ಅವನರಿಯ ಕುಲ ದೇಶ ಭಾಷೆಗಳ
ಸಂಕುಚಿತ ಸರಹದ್ದು.
ರಸದರಸ, ಕಲ್ಪನಾ ದರಬಾರಿ

ಕವಿ -
ಕೆಲವರ ಪಾಲಿಗೆ ಸಖತ್ ಸೋಂಭೇರಿ.
ಅಂಥವರರಿಯರು ಅವನೊಂದು
ಮೌಢ್ಯ ದಬ್ಬಾಳಿಕೆಯ ವಿರುದ್ಧದ ರಣಭೇರಿ.
ಐನ್ ವೇಳೆಯಲಿ ಸ್ಫೋಟಿಸುವ ಗ್ರೇನೇಡೆಂದು.

ಕವಿ -
ಜಗದ ಕೆನ್ನೆಯ ಮೇಲಿನೊಂದು ಕಂಬನಿ ತೇವ;
ನೊಂದೆದೆಯ ನಿಟ್ಟುಸಿರ ನಿಸ್ಸಹಾಯಕ ಭಾವ.
ಕವಿಯಿಲ್ಲದಿದ್ದಲ್ಲಿ,
ಲೋಕ ಉಡುಗಿಹೋಗುವುದಿಲ್ಲ.
ನಡುಗಿ ನಲಗುವುದಿಲ್ಲ.
ಹಾಗಾದರೇನಾಗುತ್ತದೆ?
ಬದುಕು ತನ್ನ ಪಾಡಿಗೆ
ಯಥಾ ಪ್ರಕಾರ ಸಾಗುತ್ತದೆ;
ಆದರೊಂದಿಷ್ಟು ಸೊರಗಿ ಬರಡಾಗಿ;
ಕೊಂಚ ಕೊರಗಿ ಕುರುಡಾಗಿ.

ವಿಮರ್ಶೆ :

'ಕವಿಯಿಲ್ಲದಿದ್ದರೆ' ಈ ಕವಿತೆಯನ್ನು ಕೆ ಎಸ್ ನಿಸಾರ್ ಅಹಮದರ 'ಆಕಾಶಕ್ಕೆ ಸರಹದ್ದುಗಳಿಲ್ಲ' ಸಂಕಲನದಿಂದ ಆಯ್ದುಕೊಳ್ಳಲಾಗಿದೆ. 1998 ರಲ್ಲಿ ಮೊದಲ ಬಾರಿಗೆ ಪ್ರಕಟವಾದ ಈ ಸಂಗ್ರಹದಲ್ಲಿ ಒಟ್ಟು 50 ಕವಿತೆಗಳಿವೆ.

ಕವಿಯ ವ್ಯಾಪಾರ ಅಂದರೆ ಕಾವ್ಯ 'ಉದ್ಯಮ'ದ ಬಗ್ಗೆ ನಮ್ಮ ಪರಂಪರೆ ಚಿಂತನೆ ನಡೆಸುತ್ತಲೇ ಬಂದಿದೆ. 'ನಾನೃಷಿಃ ಕುರುತೇ ಕಾವ್ಯಂ' ರೀತಿಯ ಮಾತುಗಳಲ್ಲಿ, ಕವಿ ಎಂತೆಂತಹ ಗುಣಗಳನ್ನು ಹೊಂದಿರುತ್ತಾನೆ ಎಂಬ ಮೀಮಾಂಸಕರ ವಿಶ್ಲೇಷಣೆಯಲ್ಲಿ ನಾವು ಇದನ್ನು ನೋಡಬಹುದಾಗಿದೆ. ಕನ್ನಡ ಕಾವ್ಯದಲ್ಲೂ ಕವಿತೆಗೆ ಸಂಬಂಧಿಸಿದ ಹಲವಾರು ಕವಿತೆಗಳಿವೆ. ಬೇಂದ್ರೆ, ಕುವೆಂಪು, ಪು ತಿ ನ, ಅಡಿಗ, ಶರ್ಮ, ಕೆ ಎಸ್ ನ, ಜಿ ಎಸ್ ಎಸ್, ಗಂಗಾಧರ ಚಿತ್ತಾಲ ಹೀಗೆ ಹಿರಿಯ ಕವಿಗಳೆಲ್ಲ ಕಾವ್ಯದ ಕುರಿತಾಗಿಯೇ ಅನೇಕ ಕವಿತೆಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಕೆ ವಿ ತಿರುಮಲೇಶರು ತಮ್ಮ 'ಅರಬ್ಬಿ' 'ಅವ್ಯಯ ಕಾವ್ಯ'ಗಳಲ್ಲಿ ಕವಿ ಏನು ಮಾಡುತ್ತಾನೆ ಹೇಗಿರುತ್ತಾನೆ ಎಂಬುದರ ಬಗ್ಗೆ ತಮ್ಮ ಚಿಂತನೆಗಳನ್ನು ಹಲವಾರು ಕವಿತೆಗಳಲ್ಲಿ, ಸಾಲುಗಳಲ್ಲಿ, ವಿಶಿಷ್ಟ ರೀತಿಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಈ ಸಾಲಿಗೆ ಸೇರುವ ನಿಸಾರ್ ಅಹಮದ್ ಕೂಡ ಕಾವ್ಯವೆಂಬ ಮಾಯಗಾತಿಯ ಕುರಿತು ಬರೆದಿದ್ದಾರೆ. ಈ ಸಂಕಲನದಲ್ಲೇ 'ಕವನ ಮತ್ತು ಮಾವಿನ ಹೂವು', 'ಎಲ್ಲಿದ್ದೀಯ ನನ್ನ ಕವಿತೆ', 'ಕವಿತೆ ಆಗಬೇಕು ಕಾಲಾತೀತ' ಮೊದಲಾದ ಕವಿತೆಗಳಿವೆ. ಇವುಗಳ ನಡುವೆ ವಿಶೇಷ ಗಮನ ಸೆಳೆಯುವ ಕವಿತೆ "ಕವಿಯಿಲ್ಲದಿದ್ದರೆ"

'ಕವಿಯಿಲ್ಲದಿದ್ದರೆ' ಎಂದು ಬರೆದರೂ ನಿಸಾರರು 'ಕವಿತೆಯಿಲ್ಲದಿದ್ದರೆ' ಎಂಬ ಸ್ಥಿತಿಯನ್ನೇ ಹೇಳುತ್ತಿದ್ದಾರೆ, ಎಂದು ಭಾವಿಸಬೇಕಾಗುತ್ತದೆ. ಕವಿ ಕವಿತೆಯ ವಾಹಕನಾಗಿದ್ದರಿಂದ.

"ಕವಿಯಿಲ್ಲದಿದ್ದರೆ?" ಒಂದು ಕ್ಷಣ ನಿಂತು, ಧ್ಯಾನಿಸಿ, ಇಂಥ ಒಂದು ಸಂಗತಿಯನ್ನು, ಸಾಧ್ಯತೆಯನ್ನು ಪರಿಭಾವಿಸಿಕೊಂಡು, ನಮ್ಮ ನಮ್ಮ ಉತ್ತರಗಳನ್ನು ಕಂಡುಕೊಂಡು, ಮುಂದೆ ಹೋಗಬಹುದು. ನನಗೆ ಶೀರ್ಷಿಕೆ ಓದಿದಾಗ ಆ ಕೂಡಲೇ ಅನಿಸಿದ್ದು 'ಜಗತ್ತು ಹೀಗಂತೂ ಇರುತ್ತಿರಲಿಲ್ಲ!'

ಕವಿ ನಿಸಾರ್ ಇಂಥದೊಂದು ಸ್ಥಿತಿಯತ್ತ ನಮ್ಮ ಗಮನ ಸೆಳೆಯುವ ಕೆಲಸ ಮಾಡಿದ್ದಾರೆ.

ಇನ್ನು ಕವನದತ್ತ ಬರೋಣ.೪೫ ಸಾಲುಗಳ ಕವಿತೆ ಇದು. "ಕವಿ(-)" ಎಂದು ಅವರು ಪುನರಾವರ್ತಿಸುವ ಭಾಗವನ್ನು ಒಂದು ಚರಣ ಎಂದುಕೊಂಡಲ್ಲಿ, ಇಲ್ಲಿ ನಾಲ್ಕು ಚರಣಗಳಿವೆ. ಮೊದಲ ಮೂರು ಚರಣಗಳಲ್ಲಿ ಅವರು ಕವಿ ಯಾರು, ಯಾವ ರೀತಿಯ ಮನುಷ್ಯ ಎಂಬುದನ್ನು ಕಂಡರಿಸುತ್ತಾರೆ. ಕವಿ 'ಎಂಥವನು' ಎನ್ನುವಾಗ 'ಎಂಥವನಿರಬೇಕು' ಎಂಬುದನ್ನೂ ಧ್ವನಿಸುವುದು ಅವರ ಉದ್ದೇಶ, ಅನಿಸುತ್ತದೆ. ಆರಂಭದ ಈ ಸಾಲುಗಳನ್ನು ನೋಡಿ:

ಕವಿ
ಅರೆ ಮರುಳ:
ಜೊತೆ ಜೀವಿಗಳ ಥರ ಸದಾ ಸ್ವಹಿತ
ಚಿಂತನೆಗೆ
ಶೃಂಖಲಿಸಲೊಪ್ಪದ ಸ್ವಚ್ಛಂದ ಸಂಚಾರಿ.

"ಅರೆ ಮರುಳ" ಎಂಬ ಶಬ್ದದಲ್ಲೇ ಅವನನ್ನು ಸಾಮಾನ್ಯರಿಂದ ಭಿನ್ನವಾಗಿ ನಿಲ್ಲಿಸುತ್ತಾರೆ-'ಅ'ಸಾಮಾನ್ಯನಾಗಿ ಕಾಣುತ್ತಾರೆ. ಹೌದು ಅವನಿಗೆ ಕಾವ್ಯಕನ್ನಿಕೆಯ ಮರುಳು ಎಂದು ನಾವು ಉದ್ಗಾರ ತೆಗೆಯುವಂತಾಗುತ್ತದೆ.

ಮುಂದಿನ ಸಾಲುಗಳ ಧ್ವನಿಯನ್ನು ಗಮನಿಸಿ-
ಜೊತೆ ಜೀವಿಗಳಾದ, ಕವಿಗಳಲ್ಲದ, ಇತರರ ಹಾಗೆ ಆತ ಸದಾ ಸ್ವ-ಹಿತ ಚಿಂತನೆಗೆ ಶೃಂಖಲಿಸಲೊಪ್ಪದ ಸ್ವಚ್ಛಂದ ಸಂಚಾರಿ. ಸ್ವ- ಹಿತಚಿಂತನೆ ಅವನಲ್ಲೂ ಇದೆ ನಿಜ ಆದರೆ ಅಷ್ಟಕ್ಕೆ ತನ್ನನ್ನು ಮಿತಗೊಳಿಸಿಕೊಂಡವನಲ್ಲ ಅವನು. ಅಷ್ಟೇ ಆಗಿ ಬದುಕಲು ಒಪ್ಪದವನು. ಅದು ಅವನ ಆಯ್ಕೆ ಎಂಬುದನ್ನು ಗಮನಿಸಬೇಕು. ಹಾಗೆ ಸಂಕೋಲೆಯಲ್ಲಿ ತನ್ನನ್ನು ತಾನು ಬಂಧಿಸಿಕೊಳ್ಳದವನು, ಸಂಕುಚಿತತೆಯಿಂದ ಬಿಡುಗಡೆ ಪಡೆದವನು, ಸಹಜವಾಗಿ ಸ್ವಚ್ಛಂದವಾಗಿ ವಿಹರಿಸಬಲ್ಲವನಾಗಿರುತ್ತಾನೆ.

ಮುಂದಿನ ಸಾಲಿನಲ್ಲಿ ಒಂದೇ ಒಂದು ಪದ, ನಮ್ಮನ್ನು ಜಗ್ಗಿ ನಿಲ್ಲಿಸುವಂತಹದು-

ಹೆಂಗರುಳ:

ಮೇಲಿನ 'ಅರೆ ಮರುಳ' ಜೊತೆಗೆ ಪ್ರಾಸಪದವೂ ಆಗಿ ಬಂದಿರುವ ಈ ಶಬ್ದದ ವ್ಯಾಪ್ತಿ ದೊಡ್ಡದು. ಪರರ ನೋವಿಗೆ ಮಿಡಿವ ಹೃದಯವಂತಿಕೆಯನ್ನು 'ಹೆಂಗರುಳು' ಎನ್ನುತ್ತಾರೆ. ಈ ಅರೆ ಮರುಳ ತನ್ನ ಲೋಕದಲ್ಲಿ ಕಳೆದು ಹೋದವನಲ್ಲ. ಅವನದು ಜಗದ ತಲ್ಲಣಗಳಿಗೆ ಮಿಡಿವ ಅಂತಃಕರಣ - ಹೆಂಗರುಳು.

ಮುಂದೆ

"ಸಮಾಜದಾಗುಹೋಗುಗಳ ಕೊಂಚ ಕುಲುಕಾಟಕ್ಕೂ
ಮಿಡಿವ ತರಂಗರೂಪಿ ಸುವಿಚಾರಿ
ಜಗದ ಗತಿಶೀಲ ಗ್ರಾಮಫೋನಿನ ರಿಕಾರ್ಡಿನ ಮೇಲೆ
ಸೋಕಿಯೂ ಸೋಕದೆ ತಾಕಿ
ಸಂಗೀತ ಹೊಮ್ಮಿಸುವ ಸೂಜಿ.

ನಮ್ಮ ನಿಮ್ಮಂತೆ ಭವಿ
ಯಾದರೂ ಕವಿ ನಿತ್ಯ ಮನಮೋಜಿ.

ಈ ಸಾಲುಗಳಲ್ಲಿ ಕವಿಯ ಶಿಲ್ಪ, ಅವನ ರೂಪುರೇಷೆಗಳು ಇನ್ನಷ್ಟು ಮೈದಳೆದಿವೆ. ಅವನು ಸುವಿಚಾರಿ. ಜಗದ...ಸೋಕಿಯೂ ಸೋಕದೆ ತಾಕಿ ಸಂಗೀತ ಹೊಮ್ಮಿಸುವ ಸೂಜಿ. ಭವಿ. ಆದರೂ ಭವದಲ್ಲಿ ಕೆಸರಿನಲ್ಲಿ ಸಿಕ್ಕವನಂತೆ ಸಿಲುಕಿಕೊಂಡವನಲ್ಲ. ಅವ ನಿತ್ಯ ಮನ ಮೋಜಿ- ಮೋಜುಗಾರ.

ಮುಂದಿನ ಭಾಗದಲ್ಲಿ, ಕವಿಯ ಜೀವನ ಯಾತ್ರೆಯ ವಿವರಗಳನ್ನು, ರೂಪಕಗಳಲ್ಲಿ ಕಟ್ಟಿಕೊಟ್ಟಿದ್ದಾರೆ, ನಿಸಾರ್.

ಅವನ ವಾಸ್ತವಿಕ ಬದುಕೆಲ್ಲ ಅಂತೆ ಕಂತೆ,
ಕನವರಿಕೆಗಳ ಸಂತೆ

'ವಾಸ್ತವಿಕ ಬದುಕು-ಕನವರಿಕೆಗಳ ಸಂತೆ' ಎನ್ನುವಲ್ಲಿನ ಐರನಿ ಗಮನಿಸಬೇಕಾದ್ದು.
ಹತ್ತು ಹಲವಕ್ಕೆ ಕೈಚಾಚುವ, ಎದೆ ಚಾಚುವ ಕವಿಯ ಬದುಕಿನಲ್ಲಿ ಮುಗಿಯದ ಆಸೆಗಳ ಮೆರವಣಿಗೆ ಸಹಜ - ಸ್ವಾಭಾವಿಕ.
ಮುಂದೆ ಅವನ ಬದುಕಿನ ಯಾತ್ರೆ ಸಾಗುತ್ತದೆ.
"ಸಾಗುತ್ತ....ಸಾವು ನೋವಿನ ಹೆಡೆಯ ಅಡಿಯಲ್ಲಿ"
ಈ ಅರಿವು, ಬದುಕಿನ ಕ್ಷಣಿಕತೆ ಕವಿಯನ್ನು ಸತತವಾಗಿ ಕಾಡುವಂತೆ, ಇತರರನ್ನು- ಅಷ್ಟು ತೀವ್ರವಾಗಿ- ಕಾಡಲಾರದೇನೋ(ಅವನು 'ಹೆಂಗರುಳ'). ಈ ಸಾವಿನ ಹಾವಿನ ಹೆಡೆಯ ಅಡಿಯಲ್ಲೇ ಇರುವ ತೀವ್ರವಾದ ಅರಿವು-ಮಾಗಿಸುವ ಕುದಿಸುವ ಅನುಭವಗಳಲ್ಲಿ ಅವನಾಗುವುದು
'....ಅನ್ನದರಳು
....
ಹೊತ್ತಿಗೆ ನೆತ್ತಿಯನ್ನೊಡ್ಡಿ ನಡೆವವರ ನೆರಳು.'

ಹೀಗೆ ಕವಿಯ ಕನಸು ವಾಸ್ತವ ನೋಯುವ ಮಾಗುವ ಬದುಕಿನ ಪರಿಣಾಮ ಈಗ-
"ಅವನೊಂದು ಚುಚ್ಚುಮದ್ದು
.....
ಅವನರಿಯ... ಸಂಕುಚಿತ ಸರಹದ್ದು"
ಅವನು 'ರಸದ ಅರಸ', 'ಕಲ್ಪನಾ ದರಬಾರಿ' ಎನ್ನುವ ಕವಿತೆ ಹಂತದಲ್ಲಿ ಕವಿಯನ್ನು ಇತರರ ಕಣ್ಣುಗಳಿಂದ ನೋಡುತ್ತದೆ.
'ಕವಿ-ಕೆಲವರ ಪಾಲಿಗೆ ಸಖತ್ ಸೋಂಭೇರಿ'
ಆದರೆ ಅವರಿಗೆ ಗೊತ್ತಿಲ್ಲ; ಅವನು
"ಮೌಢ್ಯ ದಬ್ಬಾಳಿಕೆಯ ವಿರುದ್ಧದ ರಣಭೇರಿ"
ಸರಿಯಾದ ವೇಳೆಗೆ 'ಸ್ಫೋಟಿಸುವ ಗ್ರನೇಡೆಂದು'
ಎನ್ನುವ ಮೂಲಕ ಅನ್ಯಾಯ ಶೋಷಣೆಯ ವಿರುದ್ಧ ನಿಲ್ಲುವ, ನಿಲ್ಲಬೇಕಾದ ಜವಾಬ್ದಾರಿಯನ್ನು ಕವಿತೆ ನೆನಪಿಸಿಕೊಡುತ್ತದೆ.
ಇದೆಲ್ಲದರ ಪರಿಣಾಮವಾಗಿ ಕವಿ
"ಜಗದ ಕೆನ್ನೆಯ ಮೇಲಿನೊಂದು ಕಂಬನಿ ತೇವ"
ಎನ್ನುವಲ್ಲಿ 'ಕವಿ'ಯ ದರ್ಶನ ಶಿಖರ ಮುಟ್ಟುತ್ತದೆ. ಅವನು-

'ನೊಂದೆದೆಯ ನಿಟ್ಟುಸಿರ ನಿಸ್ಸಹಾಯಕ ಭಾವ'.
ಸ್ವಹಿತ ಚಿಂತನೆಯ ಸರಪಣಿಯಲ್ಲಿ ಕಟ್ಟಿಕೊಳ್ಳಲು ಒಪ್ಪದ ಕವಿಯ ಬದುಕು ಮಾಗುತ್ತ ಆಗುತ್ತ ನೊಂದೆದೆಯ ನಿಟ್ಟುಸಿರಿನ ಭಾವ-ವಾಗುವಲ್ಲಿ ಪಡೆಯುವ ವಿಸ್ತಾರ ಮನನೀಯ.

ಇಲ್ಲಿಂದ ಮುಂದೆ ಶೀರ್ಷಿಕೆಯಲ್ಲಿ ಹೇಳಿದ ಸಂಗತಿಗೆ ಹೊರಳುತ್ತದೆ, ಕವಿತೆ.
"ಕವಿಯಿಲ್ಲದಿದ್ದಲ್ಲಿ" ಮುಂದಿನ ಏಳು ಸಾಲುಗಳಲ್ಲಿ, ಕ್ಷಿಪ್ರವಾಗಿ, ಹ್ರಸ್ವ ಪಂಕ್ತಿಗಳಲ್ಲಿ :

ಲೋಕ ಉಡುಗಿ ಹೋಗುವುದಿಲ್ಲ,
ನಡುಗಿ ನಲಗುವುದಿಲ್ಲ,
ಹಾಗಾದರೇನಾಗುತ್ತದೆ?
ಬದುಕು ತನ್ನ ಪಾಡಿಗೆ
ಯಥಾ ಪ್ರಕಾರ ಸಾಗುತ್ತದೆ:
ಆದರೊಂದಿಷ್ಟು ಸೊರಗಿ ಬರಡಾಗಿ;
ಕೊಂಚ ಕೊರಗಿ ಕುರುಡಾಗಿ.

ಕವಿ ಇಲ್ಲದಿದ್ದರೆ ಲೋಕ ಬರಡು, ಅದರ ನಡಿಗೆ ಕುರುಡು ಎಂದು ತುಂಬಾ ಸಾರ್ಥಕ ಪ್ರಮೇಯಗಳಲ್ಲಿ ಹೇಳುತ್ತ ಮುಕ್ತಾಯವಾಗುವ ಕವಿತೆ, ಜಡ - ರುಕ್ಷ ಲೋಕಕ್ಕೆ ಒಂದು "ಎಚ್ಚರಿಕೆಯ ಗಂಟೆ" ಎಂದೇ ನನಗೆ ಅನಿಸಿದ್ದು.

ಸರಳ ನೇರ ನಿರೂಪಣೆಯ ಈ ಕವಿತೆ ನನಗೆ ಮೊದಲ ಓದಿಗೇ ಇಷ್ಟವಾಯಿತು. ಇದು ನಿಸ್ಸಂದೇಹವಾಗಿ, ನಿಸಾರರ ಸಾರ್ಥಕ ಕವಿತೆಗಳಲ್ಲಿ ಒಂದು.

ಸ್ವತಃ ನಿಸಾರ್ ಈ ಕವಿತೆಯಲ್ಲಿ ಕವಿ 'ಏನೇನು' ಎಂಬುದನ್ನು ಹೇಳುತ್ತಾರೋ ಅವೆಲ್ಲವೂ ಆಗಿದ್ದರು ಎಂಬುದು, ಅವರನ್ನು ನಾವು ಕಳಕೊಂಡ ಈ ಹೊತ್ತಿನಲ್ಲಿ, ನಮ್ಮನ್ನು ಕಾಡುವ ಸಂಗತಿ. ಅವರ ಕವಿತೆ ಮತ್ತು ಇತರ ಬರಹಗಳ ಸತ್ವ-ಬೆಳಕಿನಲ್ಲಿ, ನಾವು ನಮ್ಮ ಬರಡುತನ-ಕುರುಡುತನಗಳನ್ನು ನೀಗಿಕೊಳ್ಳಬೇಕಾಗಿದೆ.

ನಿಸಾರರಿಗೆ ನಮನ.

ಪ್ರಸ್ತುತಿ : ಡಾ. ಗೋವಿಂದ ಹೆಗಡೆ

ರಾಮನ್ ಸತ್ತ ಸುದ್ದಿ
(ಕವನ ಸಂಕಲನ - ನಾನೆಂಬ ಪರಕೀಯ)

ರಾಮನ್ ಸತ್ತ ಸುದ್ದಿ ಓದಿದ ಬೆಳಿಗ್ಗೆ ಶಿವಮೊಗ್ಗೆಗೆ
ದರಿದ್ರ ಥಂಡಿ; ಅಸ್ತಿತ್ವದ ಅಸ್ಪಷ್ಟ ಜಿಜ್ಞಾಸೆ, ಗುರುತಿಸಲಾಗದ
ಕಸಿವಿಸಿ, ಮುಜುಗರ ತಾಳದೆ ವಾಕಿಂಗ್ ಹೊರಟೆ; ಬೀದಿ-
ಗದೇ ಮಾಮೂಲು ಭಂಗಿ; ಯಾರೂ ದುಃಖಿಸುತ್ತಿಲ್ಲವೆನ್ನಿಸಿ
ದುಃಖವಾಯಿತು. ಮೈಲಿಗೆ
ಪರಿಚಿತ ಸಿಕ್ಕಿದ್ದು ನವುಲೆ ಗ್ರಾಮದ ಹನುಮ;
ಯಾರದೋ ಗದ್ದೆಯಲ್ಲಿ ಗೇಯುವ, ಮೋಟು ಬೀಡಿಯ
ಕಿವಿಗೆ ಸಿಕ್ಕಿಸಿಕೊಳ್ಳುವ, ತೊಡೆಯ ಪರಪರ ಕೆರೆದುಕೊಳ್ಳುವ,
ಹಳ್ಳಿಯೇ ಹನುಮಿಸಿದಂತೆ ನನಗೆ ಭಾಸವಾಗುವ ವಿಚಿತ್ರ-
ಅಭ್ಯಾಸರೂಪಿತ ನಿರ್ದಿಷ್ಟ ಅಳತೆಯ ನಿರ್ವಿಧ ಕೂಗಿಂದ
ಹಕ್ಕಿಗಳ ಅಟ್ಟುತಿದ್ದ; ಪಾತಿ ಸರಿಗೊಳಿಸುತಿದ್ದ; ಅಪ್ರಚಲಿತ
ಹಳ್ಳಿಪದದ ಅಶಾಸ್ತ್ರೀಯ ಮಟ್ಟನ್ನು ಕುರುಕುತಿದ್ದ.

ಕಂಡೊಡನೆ, 'ಹ್ಯಾಂಗಿದೀರಿ' ಅಂದ;
ಈಚೀಚೆಗೆ ಅಪರೂಪವಲ್ಲ ಅಂದ, ಯಾಕೋ ಬಡವಾಗಿದ್ದೀರಿ
ಅಂದ, ಮಳೆ ಬೇಕಾಗಿಲ್ಲ ಅಂದ, ಫಸಲನ್ನು ಅಂದಾಜಿಸಿದ,
ನೆರೆಯವರೊಡನೆ ದಿನವಹಿ ಕಾದಾಟ ಸಾಕಾಗಿದೆ ಮಾರಾಯರೇ
ಅಂದ-ಕೊರೆಯುತ್ತಲೇ ಇದ್ದ-ಹೂಂಗುಟ್ಟಿದೆ-
ಅವನ ಮಾತಿಗೆ ಮಂಜಿನೊಳಗಿನ ಸೂರ್ಯ ನನ್ನ ಪ್ರಜ್ಞೆ.
'ರಾಮನ್ ಸತ್ತರೋ ಹನುಮ' ಅನ್ನಬೇಕು, ಆಗ ತಡೆದು
ಸುಮ್ಮನಾದೆ. ರಾಮನ್ ಅರ್ಥೈಸಿಕೊಳ್ಳಬಹುದೆ ಇವನ
ಅಶಿಕ್ಷಿತ ಅರಿವಿಗೆ?

ಆ ಕಡೆ ರಾಮನ್, ಈ ಕಡೆ ಹನುಮ;
ದಿನವಿಡೀ ಮೈ ಕೆಸರಿಸಿಕೊಂಡು, ನನ್ನಂಥವ ನೆನೆಯಲೂ
ನಿರಾಕರಿಸುವ ತಂಗಳುಂಡು, ರಾತ್ರಿ ಕಳ್ಳಭಟ್ಟಿಯ ಹೊಡೆದು-
ನಾಡಿದ್ದು ನಾಳೆಯ, ನಾಳೆ ಇವೊತ್ತಿನ, ಇಂದು ನೆನ್ನೆಯ
ಪುನರಾವರ್ತನೆಯ ಏಕತಾನತೆಯಲ್ಲಿ-ಲೋಕ ಮರೆಯುವ
ಹನುಮನಿಗೆ ರಾಮನ್ ಹೋದರೆಷ್ಟೋ ರಸೆಲ್ ಹೋದರೂ ಅಷ್ಟೆ.
ಪತ್ರಿಕೆಯೋದುವುದಿಲ್ಲ; ನಾನು ಕವಿಯೆಂಬುದು ಗೊತ್ತಿಲ್ಲ:
ಹೊಟ್ಟೆಬಟ್ಟೆಯ ಅಗತ್ಯ ಮೀರಿದ ನನ್ನ ಹಸಿವು, ಅಸ್ವಸ್ಥತೆ
ಅರಿತಿಲ್ಲ; ಲೋಕದ ಪ್ರತಿನಿತ್ಯದ ಆಗು-ಹೋಗುಗಳಿಗೆ ಪ್ರತಿಕ್ರಿಯಿಸುವ
ಸೂಕ್ಷ್ಮತೆ ಕಂಡಿಲ್ಲ; ಅನೇಕ ಮಟ್ಟದಲ್ಲಿ ಬಾಳುವ ಪ್ರಶ್ನೆಯೇ
ಉದ್ಭವಿಸಿಲ್ಲ-ಆದರೂ ತೃಪ್ತ...

ಗದ್ದೆ, ಧಣಿ, ಹ್ಯಾಪ ಮೋರೆಯ ಹೆಂಡಿರು, ಸಿಂಬಳಸುರುಕ ಮಕ್ಕಳು,
ದೇವರ ಗ್ರಾಮ್ಯ ಕಲ್ಪನೆ, ಊರಿನ ಪುಢಾರಿ-ಇಷ್ಟೇ ಜಗತ್ತು-ಆದರೂ ತೃಪ್ತ...

ನನ್ನಂತೆ ಕನ್ನಡ, ಗಡಿ, ನದಿ, ಪದ್ಯ, ಪ್ರತಿಷ್ಠೆ ಕಾಡುವುದಿಲ್ಲ-
ಹೆಂಡತಿಗೆ ಚೋಲಿ, ಹಿರಿ ಮಗನ ಶಾಲೆ
ಬೆಲ್ಲದ ಕಾಫಿಯ ಹಾಲೇಶಿಯ ಸಾಲ
ಹೊತ್ತು ಹೊತ್ತಿಗೆ ರುಚಿ ಗೌಣ ಅರಸಿಕ ಕೂಳು-ಚಿಂತೆಯಿಲ್ಲವೆಂದಲ್ಲ-ಆದರೂ ತೃಪ್ತ...

ಇದ ಮೆಚ್ಚಿ, ಕರುಬಿ, ಪೇಚಾಡಿ ನಡೆದಾಗ
ದೂರದಿಂದ, ಪ್ರಕೃತಿಯ ಅಗಾಧದಲ್ಲಿ ಹಿಮಾಚ್ಛಾದಿತ ಹನುಮ,
ಅವನ ಕೂದಲೆಳೆಯ ಕೂಗು-
ಅರ್ಥ ತೋರದ ಚುಕ್ಕೆ.

ಇಲ್ಲಿಂದ ನನಗೆ ವರ್ಗವಾಗುತ್ತೆ-ಒಂದು ದಿನ
ಹನುಮ ಸಾಯುತ್ತಾನೆ-ತಿಳಿಯುವುದಿಲ್ಲ.
ಇಲ್ಲಿನ ಹಳಬ ಅಲ್ಲಿ ಹೊಸಬನಾಗುತ್ತೇನೆ,
ಎಲ್ಲೋ ಹೇಗೋ ಸಾಯುತ್ತೇನೆ-ತಿಳಿಯುವುದಿಲ್ಲ.
ನನ್ನ ಹೆಸರು, ಹುದ್ದೆ, ಪದ್ಯ, ತಳಮಳ, ಬದುಕು-ತಿಳಿಯುವುದಿಲ್ಲ.
ಈ ಪರಿಚಿತ ಆಕಾಶ, ತೆಂಗಿನ ಮರ, ಕಾಲುವೆ, ಗುಡ್ಡ, ಗುಡಿಸಲು-
ಇವು ಕೊಟ್ಟ ಧಾರಾಳ, ಅರ್ಥವಂತಿಕೆ, ಭಾವ ಸಂಚಾರ-ತಿಳಿಯುವುದಿಲ್ಲ.

ಕೊರಲು ಬಿಗಿದು ಒಬ್ಬಂಟಿ ನಿಧಾನ ನಡೆದಂತೆ
ರಾಮನ್ ಸತ್ತ ತೀವ್ರತೆ, ಕಳವಳ ತಣ್ಣಗಾಯಿತು...

ವಿಮರ್ಶೆ

ಸ್ವತಃ ಕವಿ ನಿಸಾರರೇ ಪದೇ ಪದೇ ಕವಿಗೋಷ್ಠಿಗಳಲ್ಲಿ ಧ್ವನಿಪೂರ್ಣವಾಗಿ ಹಾಗೂ ಶ್ರೋತೃಗಳು ಮಂತ್ರಮುಗ್ಧರಾಗುವಂತೆ ವಾಚಿಸಿ ಪರಿಣಾಮ ಉಂಟು ಮಾಡುತ್ತಿದ್ದ ಕವನ "ರಾಮನ್ ಸತ್ತ ಸುದ್ದಿ."

ಸರ್ ಸಿವಿ ರಾಮನ್ ನಿಧನರಾದ ಸಂದರ್ಭದಲ್ಲಿ ಕವಿ ಬರೆದ ಕವನವಿದು.

ಈ ಕವನದಲ್ಲಿ ಕವಿ ಒಬ್ಬ ಗಣ್ಯ ವ್ಯಕ್ತಿಯ ಸಾವಿನ ಪ್ರತಿಮೆಯ ಮೂಲಕ ಬೌದ್ಧಿಕವಾಗಿ ಉನ್ನತಸ್ತರದಲ್ಲಿರುವ ವ್ಯಕ್ತಿಯ ಚಿಂತನೆಗಳು ಹಾಗೂ ಶ್ರಿಸಾಮಾನ್ಯನ ಚಿಂತನೆಗಳು ಎರಡರ ನಡುವಣ ಅಂತರವನ್ನು ವಿಶ್ಲೇಷಣೆ ಮಾಡುತ್ತಿದ್ದಾರೆ.

ಮುಂಜಾನೆ ರಾಮನ್ ಅವರು ಸತ್ತ ಸುದ್ದಿಯನ್ನು ತಿಳಿದ ಕವಿ (ನಿರೂಪಕ) ಅದರ ಬಗ್ಗೆ ಚಿಂತಿಸುತ್ತ ತಾವು ಆಗ ವಾಸಿಸುತ್ತಿದ್ದ ಶಿವಮೊಗ್ಗೆಯಲ್ಲಿ ಸಂಚಾರ ಹೊರಡುತ್ತಾರೆ.

ರಾಮನ್ ಅಂಥ ಗಣ್ಯ ವ್ಯಕ್ತಿಯ ಸಾವು ಜನಜೀವನದ ಮೇಲೆ ಏನೂ ಪರಿಣಾಮ ಬೀರಿಲ್ಲದುದರ ಬಗ್ಗೆ ಕವಿ ವಿಷಾದಿಸುತ್ತಿರುವಾಗಲೇ, ಶ್ರೀಸಾಮಾನ್ಯ ಪ್ರತಿನಿಧಿಯಾಗಿ ಹಳ್ಳಿಗ ಹನುಮ ಅವರಿಗೆ ಎದುರಾಗುತ್ತಾನೆ.

ಹಳ್ಳಿಯ ಸ್ಥಿತಿ, ಮಳೆ, ಬೆಳೆ, ಸ್ಥಳದ ಪುಢಾರಿಗಳು, ಮುಂತಾದ ವಿಷಯಗಳ ಬಗ್ಗೆ ಹನುಮ ಅವ್ಯಾಹತವಾಗಿ ಮಾತನಾಡುತ್ತಾ ಇರುವಾಗ "ರಾಮನ್ ಸತ್ತರೋ ಹನುಮ" ಎಂದು ತಿಳಿಸುವ ತವಕ ಕವಿಗಿದ್ದರೂ ಹೇಳಲು ಸಾಧ್ಯವಾಗದೆ ಹೋಗುತ್ತದೆ. ಏಕೆಂದರೆ ತನ್ನದಲ್ಲದ ಹೊರಜಗತ್ತಿನ ಸಂಕಟಗಳಿಗಿಂತ, ಹನುಮನಂಥ ಸಾಮಾನ್ಯರಿಗೆ ಬಾಳ್ವೆಯ ಸವಾಲುಗಳೇ ಮುಖ್ಯ. ಅಷ್ಟರಿಂದಲೇ ಅಂಥವರು ತೃಪ್ತರು.

ಆದರೆ ಆಧುನಿಕ ವಿದ್ಯಾಭ್ಯಾಸಕ್ಕೆ ಒಡ್ಡಿಕೊಂಡ ಮನುಷ್ಯರ ಆತಂಕಗಳೇ ಬೇರೆ ಸ್ತರದವು. ಭಾಷೆ, ನೆಲ, ಜಲ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿದ್ಯಾಮಾನಗಳು ಇತ್ಯಾದಿ.

ಕವಿ ಈ ಕವನದಲ್ಲಿ ಕಲಿತವರ ಹಾಗೂ ಶ್ರೀಸಾಮಾನ್ಯನ ಚಿಂತನೆಗಳನ್ನು ಮುಖಾಮುಖಿಯಾಗಿಸಿ ಚರ್ಚಿಸುವ ಪರಿ ಅನನ್ಯ.

ಸುಲಲಿತವಾದ ಕಥನ ಕವನ ಶೈಲಿಯ, ಆದರೆ ಚಿಂತನೆಗೆ ಹಚ್ಚುವ ಕವನ.

ಸಂವಹನಕ್ಕೆ ತೊಡಕಾಗದ ಸಂಸ್ಕೃತ ಪದಗಳು ರಂಜಿಸುತ್ತವೆ(ಅಸ್ಪಷ್ಟ ಜಿಜ್ಞಾಸೆ, ನಿರ್ವಿವಿಧ ಸೂಕ್ಷ್ಮತೆ ಇತ್ಯಾದಿ).

ಹ್ಯಾಪ(ಜೋತುಬಿದ್ದ)ಮೋರೆಯಂತೆ ಹ್ಯಾಪಮೊಲೆ ಎಂದು ಪದಪ್ರಯೋಗ ವಿಸ್ತರಿಸುವ ಜಾಣ್ಮೆಗೆ ನಿಸಾರರು ನಿಸ್ಸೀಮರು.

ಇಂಥ ಚಿಂತನೆಗೆ ಹಚ್ಚುವ ಅನೇಕ ಕವನಗಳನ್ನು ನಮಗಿತ್ತ ನಾಡೋಜ ನಿಸಾರ್ ಅಹಮದ್ ರಿಗೆ ಅಸಂಖ್ಯ ನಮನಗಳು.

ಪ್ರಸ್ತುತಿ - ಕೆ.ಏನ್.ಮಹಾಬಲ

ನಿನ್ನ ನೆರವಿಲ್ಲದೆಯೇ

(ಕವನ ಸಂಕಲನ - ನಿತ್ಯೋತ್ಸವ)

ನಿನ್ನ ನೆರವಿಲ್ಲದೆಯೆ ತೊಳಲಿರುವೆ ನೆಲದಲ್ಲೆ
ಚೇತನವನುದ್ಧರಿಸೋ ದೇವ ದೇವ;
ಹಗಲಿರುಳು ನಿನ್ನೊಂದು ಕೃಪೆಗಾಗಿ ಕಾದಿರುವೆ
ನಿನ್ನ ಕಂದನ ಸಲಹೋ ದೇವ ದೇವ.

ಎಲರ ಹಾದಿಯ ನಂಬಿ ನಾವೆ ತಾನೊಲೆವಂತೆ
ಗುರಿ ಇಲ್ಲದಲೆದಿರುವೆ ನೆಲೆಯನರಸಿ.
ದಿವ್ಯ ಅಂಬಿಗ ನೀನು ಬಂದೆನ್ನ ಪೊರೆಯಯ್ಯ
ದೂರ ತೀರದ ಬಳಿಗೆ ನನ್ನ ನಡೆಸಿ

ತೋರು ಶಾಂತಿಯ ತಂದೆ, ನನ್ನ ಸೋತಿರುವೆದೆಗೆ
ಭಕ್ತಿ ಭಾವವೆ ಉಳಿದ ಶಕ್ತಿ ದೇವ -
ಕಾಡದಿರು ಪ್ರಭುವೆನ್ನ ನೊಂದಿರುವೆ ಸಾಕಷ್ಟು
ನಿನ್ನ ಅಭಯದ ಹಸ್ತ ನೀಡು ದೇವ.

ವಿಮರ್ಶೆ :

ಈ ಕವನದಲ್ಲಿ ಜೀವನದ ಜಂಝಾಟದಲ್ಲಿ ತೊಳಲಾಡುತ್ತಿರುವ ಭಕ್ತನೊಬ್ಬನ ಆರ್ತದನಿಯಿದೆ. ಕವನ ಸರಳ. ಇಲ್ಲಿ ಯಾವ, ಗೂಡಾರ್ಥ, ವಿಶೇಷಾರ್ಥ, ಕಾವ್ಯ ಮರ್ಮವೂ ಇಲ್ಲ. ಗೇಯಗುಣವಳ್ಳ ಮನತಟ್ಟುವ ಸುಂದರ ಕವನ. ನೇರವಾಗಿ ಭಗವಂತನ ಕೃಪೆಗಾಗಿ ಬೇಡಿಕೆಯಿದೆ. ತಾನೀಗಿರುವ ಸ್ಥಿತಿಗೆ ಆ ದೇವ ದೇವನ ಸಹಾಯ ಇಲ್ಲದಿರುವುದೇ ಕಾರಣ ಎಂದು ನೊಂದಿರುವ ಭಕ್ತ ಬೇಡುತ್ತಾನೆ. ಅವನ ಕಂದನಾದ ತನ್ನನ್ನು (ತಾಯಿ ಮಗುವನ್ನು) ಸಲಹುವಂತೆ ಸಲಹಿ, ತನ್ನ ಚೈತನ್ಯವನ್ನು ಉದ್ಧರಿಸು ಜಗದ ಏಳುಬೀಳುಗಳನ್ನು ಎದರಿಸುವ ಶಕ್ತಿಕೊಡು ಎಂದು ಕೋರುತ್ತಾನೆ.

ಜೀವನದಲ್ಲಿ ಯಾವ ಒಂದು ನಿರ್ಧಿಷ್ಟ ಗುರಿಯಿಲ್ಲದೆ, ಸಮುದ್ರದಲ್ಲಿ ಗಾಳಿಯ ಹೊಡತಕ್ಕೆ ಸಿಕ್ಕ ನಾವೆ ತೋಯ್ದಾಡುವಂತಾಗಿದೆ ನನ್ನ ಜೀವನ. ನೀನೇ ಭವಸಾಗರವ ದಾಟಿಸುವ ದಿವ್ಯ ಅಂಬಿಗ. ಬೇಗ ಬಂದು ನನ್ನ ಸಲಹು ಸಂಸಾರದ ಸಾಗರದ ಮಧ್ಯದಲ್ಲಿ ಸಿಲುಕಿರುವ ನನ್ನನ್ನು ಭವಸಾಗರವದಾಟಿಸು, ತೀರ ಸೇರಿಸು ಎನ್ನುತ್ತಾನೆ ಭಕ್ತ.

ಬಹಳ ನೊಂದಿದ್ದೇನೆ, ಜೀವನದಲ್ಲಿ ಸೋತುಹೋಗಿದ್ದೇನೆ, ಕೇವಲ ನಿನ್ನಲ್ಲಿನ ಭಕ್ತಿಯೊಂದೇ ಉಳಿದಿರುವ ವಸ್ತು. ಅದರಿಂದ ಬೇಡುತ್ತಿದ್ದೇನೆ. ನನ್ನ ಅಶಾಂತ ಮನಸ್ಸಿಗೆ ಶಾಂತಿಯನ್ನು ಕೊಡು. ಈಗಾಗಲೇ ಬಹಳ ನೊಂದಿದ್ದೇನೆ ಮತ್ತೂ ಕಾಡದಿರು ಪ್ರಭು. ನಿನ್ನ ಅಭಯ ಹಸ್ತವನ್ನು ಕೊಡು ದೇವ ಎಂದು ದೀನನಾಗಿ ಕೇಳಿಕೊಳ್ಳುತ್ತಾನೆ.

ಪ್ರಸ್ತುತಿ - ಅನ್ನಪೂರ್ಣ ಸೀತಾರಾಮು **-9880219663**

ತುಂಬಿದ ತಪ್ಪಲೆ ಮತ್ತು ತುಂಟ ಪೋರರು

(ಕವನ ಸಂಕಲನ - "ಅರವತ್ತೈದರ ಐಸಿರಿ")

ಮದುವೆ ಛತ್ರದ ನೀರು ತುಂಬಿಟ್ಟಿರುವ ಕೊಳದಪ್ಪಲೆಗೆ
ದೊಡ್ಡವರ ಕಣ್ಣು ತಪ್ಪಿಸಿ,
ಗುಂಪುಗೂಡಿದ ಹುಚ್ಚು ಪೋರರು
ಕಲ್ಲುಚೂರುಗಳನೆಸೆದು ನಡೆಸಿದ್ದಾರೆ
ಮೋಜು, ಕುಚೋದ್ಯಗಾರರು.
ಸ್ತಬ್ಧ ಪ್ರಶಾಂತ ಜಲ
ಒಮ್ಮೆಲೇ ಕಲಕಿ ತಳಮಳಿಸಿ
ಕಳೆದುಕೊಂಡು ಸಮತ್ವ ಹೌಹಾರಿ ಕಳವಳಿಸಿ
ಚೆಲ್ಲತೊಡಗಿದೆ ಕುಲುಕಿ ಅತ್ತ ಇತ್ತ
ಮರಿ ಈಜುಕೊಳವನ್ನು ಅಣಕಿಸುತ್ತ.

ಒಂದಿಷ್ಟು ಜಲ ವಿಹ್ವಲಿಸಿ ತಪ್ಪಲೆಯ ಗಡಿ ತೊರೆದು
ಜಿಗಿದಿರುವುದಾಚೆಗೆ ಗತಿಗೆಟ್ಟು ಹರಿದು.
ಮತ್ತೊಂದಷ್ಟು ವಿರಳ ಸಂಖ್ಯೆಯ ನೀರು ದೂರಕೆ ಸಿಡಿದು
ಬದಿಯ ಮಣ್ಣಿನ ರಾಶಿಯೊಳಗಿಳಿದು
ಭಯಭೀತವಾದಂತೆ, ಅತ್ಯಂತ ತ್ವರಿತ
ಆಗಿಹುದು ಭೂಮಿಗತ.
ಮಿಕ್ಕ ಹನಿಗಳಂಟಿಕೊಂಡಿವೆ ಒಳಗೆ, ಪಾರ್ಶ್ವಗಳಿಗೆ -
ತಪ್ಪಲೆಗೆ ಹೇಳದೆ ಪೂರ್ತಿ ವಿದಾಯ;
ತ್ರಿಶಂಕುವಿನ ಹಾಗೆ ಸದಾ ನಿಸ್ಸಹಾಯ. (1)

ಸದರಿ ಬಿಂದುಗಳು ಒಟ್ಟು ಜಲದಿಂದ ಪರಿತ್ಯಕ್ತಗೊಂಡು
ಸಂಬಂಧವನು ಚುಕ್ತಗೊಳಿಸಿ ಮುಕ್ತವಾದಂತೆ ಕಂಡು
ಅನತಿ ದೂರದಲಿ ನೆರೆದಿವೆ ನಿಜ -
ಅದರವು ತ್ಯಜಿಸಿ ತಪ್ಪಲೆಯ ಜಲ ಸಮಸ್ತವನು,
ಹೊರ ನೆಗೆದು ಗಡೀಪಾರಾದ ಮೊತ್ತವನು
ಕೂಡಿಕೊಳ್ಳಲು ಹಾತೊರೆದು ಹವಣಿಸದೆ
ಪಾತ್ರೆ ಪರಿಧಿಗೇ ಕಚ್ಚಿಕೊಂಡಿವೆ;

ಗುಪ್ತ ಹುನ್ನಾರಗಳ ಚಿತಾವಣಿಸದೆ,
ಎಂದೆಂದಿಗೂ ಅವನ ನೆಚ್ಚಿಕೊಂಡಿವೆ -
ಊರುಗೋಲನಾಶ್ರಯಿಸಿರುವ ಕುಂಟರಂತೆ;
ಉಳ್ಳವರ ಮನೆಯ ಕಂಗಾಲ ನಂಟರಂತೆ. (2)

ಗಮನಿಸುತ ಈ ಎಲ್ಲ ವಿದ್ಯಮಾನಗಳ
ಕಲ್ಪಿಸುತ ಇಲ್ಲ ಸಲ್ಲದ ಕಾರಸ್ಥಾನಗಳ
ತಪ್ಪಲೆಯ ಜಲದಿಂದ ಹನಿಗಳೆಂದೆಂದಿಗೂ ಹೊರಗೇ,
ಪ್ರತ್ಯೇಕತೆಯ ಹೊಂಚುತಿವೆ
ಹೂಡಿ ಸಂಚನು ಪ್ರತಿ ಗಳಿಗೆ ತೆರೆ ಮರೆಗೆ
ಎಂದೆನುವ ಅವಸರದ ಗುಮಾನಿ ಧೂಪವ ಹಚ್ಚಿ
ಕುಪ್ರಚಾರದೂಹಾಪೋಹದ ಪಿಶಾಚವನು ಬಿಚ್ಚಿ
ಹುಚ್ಚು ಕುಣಿತದುದ್ವೇಗಕ್ಕೆ ಹಚ್ಚಿ
ಸೊಗ ಸವಿವ ಅನ್ಯಾಯ, ಹೊಲ್ಲತನ ಹುಟ್ಟಿಳಿದು
ನಿಜ ಸ್ಥಿತಿಯನರಿತು ಅದ ಸುತ್ತ ಸಾರುವ
ತಾಳ್ಮೆ, ಸಂಯಮ ಬೆಳೆದು
ಮತಿ ತೊಳಗಬೇಕು ಸುವಿವೇಕವನು ತಳೆದು - (3)

ಕಲ್ಲೋಲ ಜಲ ತಿಳಿದು ಸಮರಸದ ಸ್ಥಿತಿಗೆ ಮರಳುವುದು
ಬೇರ್ಪಟ್ಟ ಬಿಂದುಗಳು ಮುಂದೊಮ್ಮೆ ಬಳಿ ಸಾರಿ
ಮೂಲದವಿಭಾಜ್ಯ ಭಾಗಗಳಾಗಿ ಜೊತೆ ಸೇರಿ
ಸ್ವಾಸ್ಥ್ಯ, ನೆಮ್ಮದಿ ನೆಲಸಬಹುದೆಂಬ ವಿಶ್ವಾಸ ಬೇರಿಳಿಸಿ,
ನಚ್ಚು, ನಂಬಿಕೆಯ ನನೆ ಕಣ್ಣ್ ಕೋರೈಸಬೇಕು ನಳನಳಿಸಿ.
ಸಹನೆಯಲಿ ಸಾಗುತ್ತಾ ಒಳಿನೆತ್ತರದ ಹಂತಕ್ಕೆ
ಹಾರೈಸು ತಿರಬೇಕು ನಿತ್ಯ ಶುಭದಂತ್ಯಕ್ಕೆ. (4)

ವಿಮರ್ಶೆ :

ಮೇಲ್ನೋಟಕ್ಕೆ ಕವನದಲ್ಲಿ ಮದುವೆ ಛತ್ರ, ನೀರು ತುಂಬಿಸಿಟ್ಟಿರುವ ಕೊಳದಪ್ಪಲೆ, ಹುಚ್ಚು ಪೋರರ ಮೋಜು, ಕುಚೋದ್ಯ, ಗಲಾಟೆಗಳ ವರ್ಣನೆ ಎಂದೆನಿಸಿದರೂ, ಕವಿಯ ಅಂತರಾರ್ಥವನ್ನು ಹೀಗೆಂದು ಅರ್ಥೈಸಬಹುದು.

ತುಂಬಿದ ತಪ್ಪಲೆಯಲ್ಲಿ ತುಂಟ ಹುಡುಗರು ಆಕ್ರಮಿಸಿಕೊಂಡಾಗ ಅದರಲ್ಲಿದ್ದ ನೀರು ಹೊರಚೆಲ್ಲುತ್ತದೆ.   ತಪ್ಪಲೆಯಿಂದ ಹೊರಚೆಲ್ಲಿದ ನೀರು ನಿಶ್ಚಿಂತೆಯಿಂದ ಮಣ್ಣಿನಲ್ಲಿ ಬೆರೆತು ಹೋಗುತ್ತದೆ. ತಪ್ಪಲೆಯ ಒಳ ಪಾರ್ಶ್ವಕ್ಕೆ ಅಂಟಿಕೊಂಡಿರುವ ನೀರಿನ ಹನಿಗಳು ಹೊರಚೆಲ್ಲಿದ ನೀರನ್ನೂ ಸೇರಲಾಗದೆ, ತಪ್ಪಲೆಯ ಒಳಗಿನ ನೀರಿನೊಂದಿಗೂ ಬೇರೆಯಲಾಗದೆ ತ್ರಿಶಂಕು ಸ್ಥಿತಿಯಲ್ಲಿದೆ.

ಮದುವೆಯಂತಹ ಸಂಭ್ರಮದ ಉತ್ಸವ ಅಂದರೆ ಲಕ್ಷಾಂತರ ಜನರ ತ್ಯಾಗ ಬಲಿದಾನದ ಫಲವಾಗಿ ದೊರೆತ ದೇಶದ ಸ್ವಾತಂತ್ರ್ಯ ವಿಜಯೋತ್ಸವ. ತಪ್ಪಲೆಯೆಂಬ ದೇಶ. ತಪ್ಪಲೆಯಿಂದ ಸಿಡಿದು ಹೊರಬಂದ ನೀರು ಅಂದರೆ ಹೊಸ ಮಣ್ಣಿನಲ್ಲಿ ಸಲೀಸಾಗಿ ಹೊಂದಿಕೊಂಡಿರುವ ಜನತೆ (ದೇಶ ವಿಭಜನೆಯ ಪರಿಣಾಮ). ತಪ್ಪಲೆಯ ಒಳಅಂಚಿನಲ್ಲಿನ ನೀರ ಹನಿಗಳು - ಒಂದು ವರ್ಗದ ಸಮುದಾಯ, ಈ ವರ್ಗವು ತಪ್ಪಲೆಯಿಂದ ಹೊರಹರಿದು ಹೊಸ ಮಣ್ಣಿನಲ್ಲಿ ಬೆರೆಯಲು ಹಾತೊರೆದರೂ, ತಪ್ಪಲೆಯಲ್ಲಿನ ನೀರಿನೊಂದಿಗೆ ಬೆರೆಯುವುದು ಇವರಿಗೆ ಅನಿವಾರ್ಯ. ತಪ್ಪಲೆಯಲ್ಲಿದ್ದರೂ ತಪ್ಪಲೆಯ ನೀರಿನೊಂದಿಗೆ ಯಾವ ಸಂಬಂಧವೂ ಇಲ್ಲದಂತೆ ಬೇರ್ಪಟ್ಟ ಹನಿಗಳ ಹಿಂಸೆಯ ಚೆಲ್ಲಾಟ ನಡೆದಿರುವುದು

ಮದುವೆ ಎಂಬ ಸ್ವಾತಂತ್ರೋತ್ಸವ ಸಂದರ್ಭದಲ್ಲಿ ಹುಚ್ಚು ಹುಡುಗರ ಗಲಾಟೆ, ಕುಚೋದ್ಯದಿಂದ. ಈ ಚೆಲ್ಲಾಟದಲ್ಲಿ ಹಾನಿಯಾಗುವುದು ಅಮಾಯಕರಿಗೆ. ಅದಕ್ಕೆ ಪೂರಕವಾಗಿ ಅಪಪ್ರಚಾರ, ಕೆಟ್ಟ ಊಹೆಗಳು ಕ್ರಿಯಾತ್ಮಕಗೊಂಡು, ಇಲ್ಲದ ಅಪಾಯಗಳಿಗೆ ಎಡೆಮಾಡಿಕೊಡಬಹುದು.

ಅಲ್ಲೋಲ ಕಲ್ಲೋಲಗೊಂಡ ಜಲ ತಿಳಿಯಾಗಿ, ಸಮಸ್ಥಿತಿಗೆ ಮರಳಿ, ಬೇರ್ಪಟ್ಟ ಬಿಂದುಗಳು ಮೂಲ ಜಲದ ಅವಿಭಾಜ್ಯ ಭಾಗವಾಗಿ ಜೊತೆ ಸೇರಿ ಸ್ವಾಸ್ಥ್ಯ, ನೆಮ್ಮದಿ ನೆಲೆಸಬಹುದೆಂಬ ವಿಶ್ವಾಸದಿಂದ ಸಾಗುತ್ತಾ ನಿತ್ಯ ಶುಭ ಅಂತ್ಯಕ್ಕೆ ಹಾರೈಸೋಣ ಎಂಬುದು ಕವಿಯ ಆಶಯ.

2) ಕವಿತೆಯ ಅಂತರಾರ್ಥವನ್ನು ಹೀಗೆಂದು ಅರ್ಥೈಸಬಹುದು.

ಸಮಾಜದಲ್ಲಿ ನಡೆಯುತ್ತಿರುವ ಮತಾಂತರದ ಹಾವಳಿ. ತಪ್ಪಲೆಯಿಂದ ಹೊರಚೆಲ್ಲಿದ ನೀರಿನ ಹನಿಗಳಂತೆ, ಮತಾಂತರ ಹೊಂದಿದ ಒಂದು ಗುಂಪಿನ ವ್ಯಕ್ತಿಗಳು ಹೊಸ ಧರ್ಮವನ್ನು ಒಪ್ಪಿಕೊಂಡು, ಸುಲಭವಾಗಿ ಬೆರೆಯುತ್ತಾರೆ. ಆದರೆ ಹಸಿವು, ದಾರಿದ್ರ್ಯದ ಕಾರಣ, ಜೀವನದ ಮೂಲಭೂತ ಅಗತ್ಯತೆಗಳಿಗಾಗಿ, ಆಮಿಷಗಳಿಗೆ ಬಲಿಯಾಗಿ, ಮತಾಂತರಗೊಂಡ ದ್ವಂದ್ವ ಮನಸ್ಥಿತಿ ಹೊಂದಿದ ವರ್ಗದವರು, ತಪ್ಪಲೆಯ ಒಳ ಪಾರ್ಶ್ವಕ್ಕೆ ಅಂಟಿದ ನೀರಿನ ಹನಿಗಳಂತೆ ಪ್ರಾರಂಭದಲ್ಲಿ ತ್ರಿಶಂಕು ಸ್ಥಿತಿಯಲ್ಲಿರುತ್ತಾರೆ. ಕಾಲಾಯ ತಸ್ಮೈ ನಮಃ ಎಂಬಂತೆ, ಕಾಲ ಕಳೆದಂತೆ ಪೀಳಿಗೆಗಳು ಮುಂದುವರೆದಂತೆ ನೆಮ್ಮದಿಯ ಬದುಕಿನತ್ತ ಸಾಗುತ್ತದೆ ಇವರ ಜೀವನದ ಪಯಣ.

ಪ್ರಸ್ತುತಿ - ಶುಭಾ ವಾಸುಕಿ

ಹಕ್ಕು

(ಕವನ ಸಂಕಲನ - ನಾನೆಂಬ ಪರಕೀಯ)

ನನ್ನ ಕಾಂಪೌಂಡಲ್ಲಿ ನಾನೆ ಬೆಳಸಿದ ತೆಂಗು
ನೋಡುನೋಡುತ್ತಿದ್ದಂತೆ ಎತ್ತರ ಬೆಳೆದದ್ದು ಗೊತ್ತಿದ್ದರೂ
ಬಿರುಬಿಸಿಲಿನಲ್ಲೊಮ್ಮೆ ಮನೆಗೆ ಬರುವಾಗ್ಗೆ
ರಸ್ತೆಗೂ ಅದು ನೆರಳ ಚೆಲ್ಲಿದ್ದ ಅರಿವಾದದ್ದು
ಆ ನೆರಳಲ್ಲಿ ನಿಂತ ಯಾರದೋ ಕಾರು ಕಂಡಾಗಲೇ.

ಅರೆ, ಎಂದು ಒಂದು ಕ್ಷಣ ಆಶ್ಚರ್ಯಪಟ್ಟೆ.
ಆಲೋಚಿಸಿದೆ:
ನೆರಳು ನನ್ನ ಮರದ್ದು, ನಿಲ್ಲಿಸಬೇಡಯ್ಯ ಕಾರು
ಅಂದರೆ ತಪ್ಪೆ?
ಅದರ ನೆರಳಲ್ಲಿ ನಿಂತಿದ್ದರಿಂದ ಆ ಕಾರು
ನನ್ನದೆಂದರೆ ತಪ್ಪೆ?

ದಬಾಯಿಸಿದರೆ ಅವ ಹೀಗೆ: ಬೆಪ್ಪೆ,
ತೆಂಗು ನಿನ್ನದಿರಬಹುದು, ಆದರೆ ನೆರಳು ನಿನ್ನದ?
ದಿನ ಬೆಳಗಾದರೆ ಗರಿಗಳಲ್ಲಿ ಅರಳುವ ಹಕ್ಕಿ ನಿನ್ನದ?
ಅದರ ಕಚಪಿಚ, ಅಲೆಯುವ ಹವೆ, ಹೊಳೆಯುವ ಕಿರಣ,
ತೂಗುವ ಚಂದ್ರ ನಿನ್ನದ?

ಇದು ಸಾರ್ವಜನಿಕ ರಸ್ತೆ - ಕಾರು ನಿಲ್ಲಿಸಲು,
ಅಲ್ಲಿ ಚೆಲ್ಲಿದ ನೆರಳೂ ನನ್ನದೆನ್ನಲು ಹಕ್ಕುಂಟು.
ಅಲ್ಲದೆ, ನೆರಳ ನೆಪದಿಂದ ವಾಹನ ನಿಲ್ಲುತ್ತೆ,
ಹಾಗಾಗಿ ಸಂಚಾರಕ್ಕೆ ಅಡಚಣೆ, ಕತ್ತರಿಸು
ಮರವನೆಂದರೆ ಎಲ್ಲಿದೆ ನನ್ನಲ್ಲಿ ಜವಾಬು?

ಕ್ಷಣ, ದಿಗಿಲಾಗಿ
ಕಾರಲ್ಲಿ ಯಾರೂ ಇಲ್ಲದ್ದು ಖುಷಿಯಾಗಿ
ನೆರಳ ನೋಡದೆ
ಬರೀ ಕಾರಿನಂದವ ಮೆಚ್ಚುತ್ತಾ ಸರಸರ ಒಳಗೆ ನಡೆದೆ.

ವಿಮರ್ಶೆ :

ಓದುಗರ ಮನಸ್ಸನ್ನು ಮೋಡಿ ಹಾಕಿ ಸೆಳೆಯುವ ಗುಣವನ್ನು ಹೊಂದಿರುವ,
ನಿಸಾರ್ ಅಹಮದ್ ಅವರ ಹಲವಾರು ಪ್ರಸಿದ್ಧ ಕವಿತೆಗಳಲ್ಲಿ `ಹಕ್ಕು' ಮೊದಲ ಸಾಲಿನಲ್ಲಿ ನಿಲ್ಲುವಂತಹುದು.

ಈ ಕವನದಲ್ಲಿ ಮೇಲುನೋಟಕ್ಕೆ ಸರಳವಾಗಿ ತೋರುವ ಅರ್ಥದ ಆಂತರ್ಯ ಮತ್ತೆ ಮತ್ತೆ ಓದುವಾಗ ವಿಸ್ತಾರವಾಗುತ್ತಾ ಹಲವು ಆಯಾಮಗಳಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ನನ್ನ ಮನೆಯ ಕಾಂಪೌಂಡಿನಲ್ಲಿ ತೆಂಗು ಬೆಳೆಸಿದ್ದು ನಾನೇ ? ಎಲ್ಲಿಂದಲೋ ತಂದ ತೆಂಗಿನ ಸಸಿಗೆ ತಾಣ ಕೊಟ್ಟ ಭೂಮಿ, ಎಲ್ಲೆಲ್ಲಿಂದಲೋ ಹರಿದು ಮನೆಯವರೆಗೆ ಬಂದ ನೀರು, ಬೆಳಕು - ಶಾಖ ಕೊಟ್ಟ ಸೂರ್ಯ .. ಇವೆಲ್ಲದರಲ್ಲಿ ನನ್ನ ಪಾಲೆಷ್ಟು? ಇವುಗಳಲ್ಲಿ ಯಾವುದಾದರೊಂದು ಇಲ್ಲದೇ ಹೋದರೂ ಬೆಳೆದು ನಿಲ್ಲುತ್ತಿರಲಿಲ್ಲ ಈ ತೆಂಗು. ಇನ್ನು ಇದರ ನೆರಳು! ಕಾಯುವುದೇ ನನ್ನ ಅಪ್ಪಣೆಗೆ?

ಕೆಲವೇ ಸಾಲುಗಳಲ್ಲಿ ಅಡಗಿರುವ ಈ ನಿತ್ಯ ಸತ್ಯ ಮನಸ್ಸನ್ನು ತಟ್ಟಿ ಹೃದಯದೊಳಗೆ ಇಳಿದ ಆ ಕ್ಷಣ ಮೊಳಗಿತು ಕಿವಿಯಲ್ಲಿ ಉಪನಿಷತ್ತಿನ ಎಚ್ಚರಿಕೆ 'ಮಾ ಗೃಧಃ ಕಸ್ಯಸ್ವಿದ್ಧನಂ .. ಬೇರೆಯಾರದೇ ಸ್ವತ್ತಿನ ಲೋಭಿಯಾಗಬೇಡ '- ಇಲ್ಲಿರುವ ಯಾವುದೂ ಯಾರ ಸ್ವತ್ತೂ ಅಲ್ಲ.

ಈ ಜಗತ್ತಿನಲ್ಲಿ/ಪ್ರಕೃತಿಯಲ್ಲಿ ನಮ್ಮದೆನ್ನುವುದು ಏನಿದೆ ? ಪರಸ್ಪರ ಸಂಬಂಧಗಳಲ್ಲಾಗಲೀ ಗಾಳಿ - ನೀರು - ಬೆಳಕು ಯಾವುದರಲ್ಲಿಯೂ ನಮಗಿಲ್ಲ ಹಕ್ಕು. ಆದರೂ ಇದೆ ಎಂಬ ಭ್ರಮೆಯಲ್ಲಿ - ಹಮ್ಮಿನಲ್ಲಿ - ಅಹಮ್ಮಿನಲ್ಲಿ ಮಾನವ ಎಲ್ಲದರ ಮೇಲೂ ಒಡೆತನ ಸ್ಥಾಪಿಸುವ ವ್ಯರ್ಥ ಪ್ರಯತ್ನ ಮಾಡುತ್ತಲೇ ಇರುತ್ತಾನೆ. ನಡೆಯುತ್ತಲೇ ಇವೆ ಮಹಾಯುದ್ಧಗಳು - ಗುಪ್ತ ಸಮರಗಳು ನಾನು ನನ್ನದು ಎಂಬ ಅಹಮಹಮಿಕೆಯಲ್ಲಿ ಉರುಳಿವೆ ಚಕ್ರಾಧಿಪತ್ಯಗಳು. ಹಿಂಸೆ ಪ್ರತೀಕಾರಗಳ ದಳ್ಳುರಿಯಲಿ ನಾಶವಾಗುತಿದೆ ನಿಂತ ನೆಲ - ಉಸಿರಾಡುವ ಗಾಳಿ - ಜೀವ ಜಲ. ಎಲ್ಲವನ್ನೂ ಕಬಳಿಸುವ ಅದಮ್ಯ ಲಾಲಸೆಯಿಂದ ಸೃಷ್ಟಿಯಾಗುತ್ತಿವೆ ಅದೃಶ್ಯ ವಿಷ ಜೀವಿಗಳು. ಆದರೇನು ತೆಂಗೂ ನನ್ನದು .. ಅದರ ನೆರಳೂ ನನ್ನದು ಎಂಬ ಭ್ರಮೆ ಕಳೆಯುವುದು ಸುಲಭವಲ್ಲ.

'ನನ್ನ ಮರದ ನೆರಳಿನಲ್ಲಿ ನಿಂತ ಕಾರೂ ನನ್ನದೇ' ಎನ್ನುವಂತೆ, ನಮ್ಮದೇ ಮನಸ್ಸು ಕಾಮ್ಯ ವಸ್ತುಗಳ ಹಿಂದೆ ಧಾವಿಸುವುದನ್ನು ಕಂಡು ದಿಗಿಲಾಗುವುದು ಸಹಜ. ನಾನಿಲ್ಲದಿದ್ದರೂ ಬೆಳೆಯುವುದು ಈ ತೆಂಗು ಎಂಬ ಅರಿವಾದಾಗಲಲ್ಲವೇ ಸಿಗುವುದು ಕಡಿವಾಣ ಮನಸ್ಸಿಗೆ ?

ಈ ಜೀವ ಜಗತ್ತಿನಲ್ಲಿರುವ ಯಾವುದರ ಮೇಲೂ ಯಾರದೂ ಹಕ್ಕಿಲ್ಲ .. ಎಲ್ಲವೂ ಇರುವುದು ಎಲ್ಲರ ಉಪಯೋಗಕ್ಕಾಗಿ ಮಾತ್ರ ಎನ್ನುವ ಅರಿವು ಬರಲಿ ಮನುಕುಲಕೆ ಎಂಬ ಆಶಯ ಹೊತ್ತ ನಿಸಾರರಿಗೆ ನೂರೆಂಟು ನಮನಗಳು.

ಪ್ರಸ್ತುತಿ : ಡಾ.ಜಯಂತಿ ಮನೋಹರ

ನಾಡದೇವಿಯ ಕಂಡೆ ನಿನ್ನ ಮಡಿಲಲ್ಲಿ

(ಕವನ ಸಂಕಲನ - ನಿತ್ಯೋತ್ಸವ)

ನಾಡ ದೇವಿಯೇ ಕಂಡೆ ನಿನ್ನ ಮಡಿಲಲ್ಲಿ ಎಂಥ ದೃಶ್ಯ;
ನೋವು ನಗೆಯ ಸಮ್ಮಿಶ್ರದಲ್ಲಿ ಎದೆಯಾಯಿತದಕೆ ವೈಶ್ಯ.
ಒಂದೆದೆಯ ಹಾಲ ಕುಡಿದವರ ನಡುವೆ ಎಷ್ಟೊಂದು ಭೇದ ತಾಯಿ!
ಒಂದೇ ನೆಲದ ರಸ ಹೀರಲೇನು? ಸಿಹಿ, ಕಹಿಯ ರುಚಿಯ ಕಾಯಿ. (1)

ಕತ್ತಲಲ್ಲಿ ಕಂಗೆಟ್ಟು ಎಡವಿ ತಡವರಿಸುತಿರುವ ಮಂದಿ -
ಸಂಸ್ಕಾರವಿಲ್ಲ ಹೆಣಕೆಂದು ತಲೆಗೆ ಕೈ ಹೊತ್ತ ಬಡವನೊಬ್ಬ;
ಇನ್ನೊಬ್ಬ ತಾನು ಆಚರಿಸುತಿರುವ ವೈಭವದ ಹುಟ್ಟುಹಬ್ಬ. (2)

ಅನ್ನವಿರದ ಹಸುಳೆಗಳ ತಬ್ಬಿ ಅಳುತಿರುವ ತಾಯೆ ಕಂಡೆ;
ದುಃಖಪೂರ ಉಕ್ಕುಕ್ಕಿ ಮೊರೆಯೆ, ಕೊಚ್ಚಿತ್ತು ಬಾಳ ದಂಡೆ.
ಹೊಟ್ಟೆ ಹೇಳಿಗೆಯ ಬಿಚ್ಚಿ, ಹಸಿವ ಹಾವನ್ನು ಚುಚ್ಚಿ ಕೆಣಕಿ -
ಯುಕ್ತಿ ರಾಗದಲಿ ಕುಣಿಸಿ, ದಣಿಸಿ, ನಲಿದಿಹರು ಹಲರು ಬದುಕಿ. (3)

ನರನನ್ನೇ ಗಾಳವಾಗಿಸುತ ಬಾಳ ನೀರಲ್ಲಿ. ನಲಿವ ನರಿಗೆ -
ನಾವೊಂದು ಎನುವ ಸತ್ಯಕ್ಕೆ ಅಡ್ಡಗಾಲೆಳೆವ ನಾಡಿನರಿಗೆ,
ಎಚ್ಚರವ ನೀಡಿ ತಿದ್ದುತ್ತಲಿರಲಿ ಕವಿ ಭಾವವೆಂಬ ಬಡಿಗೆ,
ತಾಯಿ ಭಾರತಿಯೆ, ಇದುವೆ ನಿನಗೆ ನಾ ಸಲಿಸಲಿರುವ ಕೊಡುಗೆ. (4)

ವಿಮರ್ಶೆ :

ಶ್ರೀ ನಿಸಾರ್ ಅಹಮದ್ ರವರು ನಿತ್ಯೋತ್ಸವ ಕವಿ ಏಂದೇ ಚಿರ ಪರಿಚಿತರು. ಅವರ ಕವನ ಗಳಲ್ಲಿ ಪ್ರಕೃತಿಯ ಆರಾಧನೆಯನ್ನು ಕಾಣಬಹುದು. ಹಾಗೇ ಅವರಿಗೆ ವಿಶೇಷವಾದ ಸಾಮಾಜಿಕ ಕಳಕಳಿಯಿತ್ತು. ಅವರು ಈ ಕವನದಲ್ಲಿ ನಾಡ ದೇವಿಯಾದ ಕನ್ನಡಮ್ಮನ ಮಡಿಲಲ್ಲಿ ನಾಡಿನ ಸ್ಥಿತಿ ಗತಿಗಳನ್ನು ಕಂಡು ತಮ್ಮ ಮನದಾಳದ ನೋವಿನಲ್ಲಿ ಮೂಡಿದ ಕಳಕಳಿಯನ್ನು ಪ್ರಶ್ನೆಗಳ ಮಾಲೆಗಳಾಗಿ ಬರೆದಿದ್ದಾರೆ.

ಒಂದು ತಾಯಿಯ ಮಕ್ಕಳಾಗಿ ಆಕೆಯ ಎದೆ ಹಾಲು ಕುಡಿದು ಬೆಳೆದರೂ ಭೇದ-ಭಾವ, ಹೆಚ್ಚು- ಕಡಿಮೆ ಅಂತರಗಳ ಭಾವವನ್ನು ದೃಶ್ಯದ ರೂಪದಲ್ಲಿ ಹೆಣೆದಿದ್ದಾರೆ. ಭೂಮಿಯಲ್ಲಿ ಒಂದೇ ನೆಲದ ರಸದಿಂದ ಬೆಳೆದರೂ ಮುಂದೆ ಸಿಹಿ-ಕಹಿ ಫಲ ನೀಡುವ ರೂಪಕವಿದು.

ಸ್ವಹಿತ ಬಯಸುವವನೊಬ್ಬ, ಹೆಣಕ್ಕೆ ಸಂಸ್ಕಾರವನ್ನು ಕೊಡಲು ಸಾದ್ಯವಾಗದೇ ಕಂಗೆಟ್ಟು ತಲೆಯ ಮೇಲೆ ಕೈಯಿಟ್ಟ ಬಡವನಿನ್ನೊಬ್ಬ, ಹೀಗೆ ಅವರ ಪ್ರಶ್ನೆ ಜಗತ್ತಿನಲ್ಲಿರುವ ಸಮಸ್ಯೆ ಹೀಗೇಕೆ ಎಂದು ನಾಡದೇವಿಗೆ. ಪರಿಹಾರ ತೋಚದ ಸ್ಥಿತಿ. ಹಸಿದ ಮಕ್ಕಳಿಗೆ ಅನ್ನ ನೀಡಲೂ ಸಾದ್ಯ ವಾಗದ ಪರಿಸ್ಥಿತಿ ಒಬ್ಬ ವ್ಯಕ್ತಿಯದಾದರೆ, ಇನ್ನೊಬ್ಬನದು ವೈಭವದ

ಹುಟ್ಟು ಹಬ್ಬದ ಆಚರಿಸುವ ರೀತಿ. ಜೀವನ ಸಾಗಿಸಲು ಕೆಲವರು ಹಸಿದ ಹಾವನ್ನು ಚುಚ್ಚಿ ಕೆಣಕಿದರೆ, ಕೆಲವರು ಮನುಜರನ್ನೇ ಗಾಳವಾಗಿಸಿ ನರಿಯಂತೆ ಕುಯುಕ್ತಿಯ ಬಾಳ ನೀರಿನಲ್ಲಿ ಬದುಕುವರು. ಸುಖದ ಸುಶುಪ್ತಿಯಲ್ಲಿರುವ ಜನರಿಗೆ ನಾವೆಲ್ಲ ಒಂದೆನ್ನುವ ಸತ್ಯದ ಅರಿವಾಗದೆ ಅಡ್ಡಗಾಲೆಳೆಯುವವರಿಗೆ ಕವಿಯ ಭಾವನೆಯ ಬಡಿಗೆ ಎಚ್ಚರಿಕೆ ನೀಡುವ ಮೂಲಕ ಭಾರತ ಮಾತೆಗೆ ನೀಡುವ ಕೊಡುಗೆಯಾಗಿ ಸಮರ್ಪಸಿಕೊಂಡಿದ್ದಾರೆ.

ಪ್ರಸ್ತುತಿ : ಶ್ರೀ ವೆಂಕಟಸುಬ್ಬಯ್ಯ ಕೆ

ದ್ವಂದ್ವ
(ಕವನ ಸಂಕಲನ 'ಸಂಜೆ ಐದರ ಮಳೆ')

ಯಾವುದೋ ಮಗು ಸ್ವಂತ? ಯಾವುದೋ ಪರಕೀಯ?
ಎಲ್ಲಕ್ಕು ಒಂದೇ ಪಾಯ
ನಿನ್ನದೇ ಈ ಜೀತ?
ಸ್ವಂತದ್ದರಲು ಮುಕ್ಕಾಲು ಪಿತ್ರಾರ್ಜಿತ,
ಬೆಸೆಯುವುದು ಹೊಳೆ, ದಡವ
ಗಾಳಿಯೋ ಬಾನ್ನೆಲವ :
ದ್ವಂದ್ವ ಮಾಯ.

ಸ್ವಂತ ಪರಕೀಯಗಳ ಸರಹದ್ದ ಗೆರೆ ಗೀಚಿ
ಗುಂಡು ತೋಪು ಫಿರಂಗಿ ನಿಲಿಸಿದಾತ,
ಮೊದಲೆ ಧಗಧಗ ಬೆಂಕಿ, ಅದಕಷ್ಟು
ಪೆಟ್ರೋಲಿನೆಣ್ಣೆ ನೈವೇದ್ಯವನು ಸಲಿಸಿದಾತ,
ಬಿರುಕುಬಿಟ್ಟರೆ ಕಟ್ಟೆ, ಎಲ್ಲ ಬಾಗಿಲು ತೆರೆದು
ನುಗ್ಗು ರೊಚ್ಚಿನ ಹುಚ್ಚು ಹರಿಸಿದಾತ,
ಜೇನುಹುಟ್ಟಿಗೆ ಕವಣೆ ಬೀರಿ, ಕಂಬಳಿ ಹೊದ್ದು
ಪರರ ನೋವಿಗೆ ಕಣ್ಣ ಸುರಿಸಿದಾತ -
ನೀನೇ ಅಲ್ಲವೆ ಮಗುವೆ?
ಹಾಗನಲು ಬರಿ ನಗುವೆ. (1)

ನಿನ್ನದಿದು ಈ ತೋಟ -
ಸಸ್ಯ ಜಗದಚ್ಚರಿಯ ನೋಡು; ಹಸುರಿನ ಮಾಟ;
ನೀನೆ ಸ್ವಂತದಲ್ಲವೆಂದು ಕಡಿಯುವ ಮರವ
ನೆಲದಾಯ ಚಾಮರವ;
ರಫ್ತಾದ ಬೀಜವೀ ಅಪರಿಚಿತ ಪರಿಸರದ
ಗಾಳಿ ಜಲ ಬೆಳಕುಗಳ ಹೀರಿ ಬೆಳದಿಹ ಪರಿಯ
ನೂರಾರು ಚದರಡಿಯ ಸುವಿಶಾಲ ಪರಿಧಿಯಲ್ಲಿ
ಸೊಕ್ಕಿರುವ ಹೊರೆ ಹೊರೆಯ
ಋತು ಋತುಗೆ ಹೊಸ ದಿರಿಸು ತೊಟ್ಟು ಮೆರೆಯುವ ದೊರೆಯ
ಕಣ್ಮನದ ವರವ - ಈ ಹೆಮ್ಮರವ
ನೋಡು; ಬೆಳಗಲ್ಲಿ ಬೈಗಲ್ಲಿ ವಾದ್ಯವೃಂದ
ಇರುಳಲ್ಲಿ ಚಂದ್ರಿಕೆಯ ಬಾಹುಬಂಧ
ಅಳಿ ದುಂಬಿ ಅಳಿಲುಗಳ ಸಲಿಗೆಯಾದೀ ಮರವ
ನೋಡು ಮಗು.

ಸಹಪಾಠಿಗಳ ಜೊತೆಗೆ ಮರಕೋತಿಯಾಡಿದ್ದೆ
ಹೆಸರ ಮೊದಲಕ್ಷರವ ಬುಡದಲ್ಲೆ ಕೆತ್ತಿದ್ದೆ
ಹರಕೆಗಳ ಹೊತ್ತಿದ್ದೆ
ಹೂವುಗಳ ತಿರುಚಿ ಹಣ್ಣುಗಳ ದೋಚಿ
ಹೆಜ್ಜೇನು ಚಪ್ಪರಿಸಿ, ಸುರಿಸಿದ್ದೆ ಜೊಲ್ಲ
ಮರೆತೆಯಾ ಅದನ್ನೆಲ್ಲ?

ನಾಳೆ ನೀ ಹಾಕಲಿಹ ಕೊಡಲಿಗೂ ಹಿಡಿ ಕೂಡ
ಈ ಸಾಧು ವೃಕ್ಷದ್ದು - ಇದರದೇ ವಕ್ಷದ್ದು.
ಬೀಜ ಪರಕೀಯ ನಿಜ, ಎಂದೆ ವೃಕ್ಷವು ಕೂಡ?
ಸುತ್ತ ನೀನೇ ಬೆಳೆದ ಸೊರಗು ಸಸಿ ಈ ವೃಕ್ಷ
ದೆತ್ತರಕೆ ಬರುವನಕ ಕಾಯೋ ಮೂಢ;
ಶ್ರೀಗಂಧ ಬೆಳೆದರೂ ಬೇರೆಯ ಸೌದೆ
ಮೊದಲು ನೆನೆ ಹೊಟ್ಟೆಪಾಡ. (2)

ಸ್ವಂತ ಯಾವುದೋ ಕಂದ? ಯಾವುದೊ ಬಂದಳಿಕೆ?
ಸಹಜ ಸಂತತಿ ಜೊತೆಗೆ ಇರಲಿ ಬಿಡು ಇವು ಕೂಡ
ಇವೇ ನಿನ್ನ ಅಗ್ಗಳಿಕೆ;
ಹಿತ್ತಲಿನ ಹತ್ತಡಿಯ ಕೊಟ್ಟಿಗೆಯು ಇರುಳಲ್ಲಿ
ಮನೆಯಾಚೆ ಮೈದಾನದೆಳೆಹುಲ್ಲು ಹಗಲಲ್ಲಿ -
ಕರೆಯುವುವು ಕರೆಯುತ್ತವೆ;
ಹೊತ್ತು ಭಾರವ ಹೊಟ್ಟೆ ಹೊರೆಯುತ್ತವೆ;
ಮನೆಗೆ ಪೋಲೀಸಾಗಿ ಪೊರೆಯುತ್ತವೆ.(3)

ವಿಮರ್ಶೆ :

ದ್ವಂದ್ವ ಕವನವು "ಸಂಜೆ ಐದರ ಮಳೆ" ಕವನ ಸಂಕಲನದ ಮೂಲಕ 1970ರಲ್ಲಿ ಪ್ರಕಟವಾಯಿತು.
ಈ ಕವನದ ಮೂಲಕ ನಿಸಾರರು ಒಂದು ಶಾಶ್ವತ ಸತ್ಯವನ್ನು ಹೇಳ ಹೊರಟಿದ್ದಾರೆ. ಮನುಷ್ಯನಿಗೆ ಯಾವುದರ ಮೇಲೂ ಅಧಿಕಾರ ಬರುವುದಿಲ್ಲ. ಆದರೆ ಆತ ಎಲ್ಲದರ ಮೇಲೂ ಅಧಿಕಾರ ಸಾಧಿಸಲು ಹೆಣಗುತ್ತಾನೆ. ಅದು ಅಸಾಧ್ಯವೆಂದು ತಿಳಿದಾಗ ಅದರೊಂದಿಗೆ ಹೊಂದಾಣಿಕೆಗೆ ಮುಂದಾಗುತ್ತಾನೆ. ಇದು ಇತಿಹಾಸದುದ್ದಕ್ಕೂ ನಡೆದುಬಂದದ್ದೆ. 12ನೇ ಶತಮಾನದಲ್ಲಿ ಮುಸ್ಲಿಮರ ಆಗಮನ ಅನ್ಯ ಸಂಸ್ಕೃತಿಯ ದಾಳಿ ಎಂದು ಭಾರತೀಯರಿಗೆ ಅನ್ನಿಸಿತು. ಕಾಲಕ್ರಮೇಣ ಇಸ್ಲಾಂ ಸಂಸ್ಕೃತಿಯು ಭಾರತದಲ್ಲಿ ಸಂಲಗ್ನಗೊಂಡ ಮೇಲೆ, ನಂತರ ಆಗಮಿಸಿದ ಬ್ರಿಟಿಷರು ಭಾರತೀಯರಿಗೆ ಮತ್ತೊಂದು ಸಂಸ್ಕೃತಿಯ ದಾಳಿಕೋರರಾಗಿ ಕಂಡರು. ಇಂದು ಬ್ರಿಟಿಷರು ಭಾರತವನ್ನು ಬಿಟ್ಟಿದ್ದರೂ ಅವರ ಭಾಷೆ ನಮ್ಮ ಸಂಸ್ಕೃತಿಯನ್ನು ಬೇರೆಯಾಗಿಯೇ ರೂಪಿಸುವ ಶಕ್ತಿಯನ್ನು ಪಡೆದು ನಮ್ಮನ್ನು ಆಳುತ್ತಿದೆ. ಹಾಗಾದರೆ ನಮ್ಮದೆನ್ನುವುದು ಯಾವುದು, ಪರಕಿಯವೆನ್ನುವುದು ಯಾವುದು? ಮನುಷ್ಯ ತನ್ನಷ್ಟಕ್ಕೆ ತಾನೇ ಕೋಟೆ ಕಟ್ಟಿಕೊಂಡು ಬದುಕಲು ಸಾಧ್ಯವೆ? ಹಾಗಿದ್ದರೆ ಅವನ ಉದ್ಧಾರ ಮತ್ತು ರಕ್ಷಣೆ ಎಷ್ಟರ ಮಟ್ಟಿಗೆ ಸಾಧ್ಯ? ಹೀಗಾಗಿ ಎಲ್ಲ ದ್ವಂದ್ವವನ್ನೂ ದಾಟುವ ಶಕ್ತಿ, ಬೆರೆಯದನ್ನು ತನ್ನದಾಗಿಸಿಕೊಂಡು ಬದುಕುವ ಜಾಣತನ ಮನುಷ್ಯನಿಗೆ ಇದ್ದರೆ ಅದು ಕ್ಷೇಮ ಎನ್ನುವ ಸಾರ್ವತ್ರಿಕ ಸತ್ಯವನ್ನು ದ್ವಂದ್ವ ಕವನ ಸಾರುತ್ತದೆ.

ನದಿ ತೀರದಲ್ಲಿ ಸಂಸ್ಕೃತಿಗಳು ಉಗಮಗೊಂಡು ಸ್ಥಾವರವಾಗಿ ನೆಲೆಯೂರಿದರೂ, ಮಾನವ ಜಂಗಮ. ಒಂದೇ ಕಡೆ ಇರಲು ಸಾಧ್ಯವಿಲ್ಲ. ಹಾಗೆ ಜಂಗಮನಾಗಿ ಅಲೆಯುವಾಗ ಒಂದು ಸಂಸ್ಕೃತಿಯಿಂದ ಮತ್ತೊಂದು ಸಂಸ್ಕೃತಿಗೆ ಕೊಡು-ತಗೋ ನಡೆದೇ ಇದೆ. ಆಚಾರ-ವಿಚಾರ, ಉಡುಗೆ-ತೊಡುಗೆ ಆಹಾರ ಹೀಗೆ. ಆದರೆ ನಾನು ಕೇವಲ ನನ್ನದನ್ನೇ ಪಾಲಿಸುವೆ ಎಂದು ಹೇಗೆ ಹೇಳಬಹುದು? ಆಚಾರ-ವಿಚಾರ, ಪದ್ಧತಿ ಹೀಗೆ ಯಾವುದೇ ಸಂಗತಿ ತನ್ನದು, ತನ್ನಿಂದಲೇ ಉಗಮವಾಗಿದ್ದು ಎಂದು ಖಚಿತವಾಗಿ ಹೇಳಲು ಸಾಧ್ಯ? ದ್ವಂದ್ವ ಕವನ ಈ ವಿಚಾರವನ್ನ ಪ್ರತಿಪಾದಿಸುತ್ತದೆ. ಭಾರತ ಬಹುಧರ್ಮ ರಾಷ್ಟ್ರ. ಮುಸಲ್ಮಾನ ಹಾಗು ಕ್ರೈಸ್ತ ಧರ್ಮಗಳು ಹೊರ ದೇಶಗಳಿಂದ ಬಂದಿದ್ದರೂ ಸಹ, ಆ ಧರ್ಮಗಳು ಈ ದೇಶದ ಅವಿಭಾಜ್ಯ ಅಂಗವಾಗಿವೆ. ಇರಲಿ ಅವು ನಮ್ಮೊಂದಿಗಿದೆ. ಅದು ಬೇಡ, ಇದು ಬೇಡ ಅನ್ನೋ ತಾರತಮ್ಯವೇಕೆ? ಅದೆಷ್ಟೋ ಮಸಾಲೆ ಪದಾರ್ಥ, ವೃಕ್ಷ, ಹಣ್ಣುಗಳ ಬೀಜಗಳನ್ನ ಬೇರೆ ದೇಶಗಳಿಂದ ತಂದಿದ್ದರೂ ಈಗ ಅವು ನಮ್ಮ ದೇಶದಲ್ಲಿ ನಮ್ಮವೇ ಅನ್ನುವಷ್ಟು ಬೇರೂರಿ ಅವುಗಳು ಫಲವನ್ನು ನಾವು ಉಣ್ಣುತ್ತಿಲ್ಲವೇ? ಅವೇ ಮರಗಳು ನಮಗೆ ನೆರಳಾಗಿಲ್ಲವೇ? ಹೀಗೆ ಯಾವುದು ನಮ್ಮದು ಮತ್ತು ಯಾವುದು ಪರಕೀಯ ಎಂದು ಗೆರೆ ಕೊರೆದು ಖಚಿತವಾಗಿ ಹೇಳಲು ಸಾಧ್ಯ? ಮನುಷ್ಯನಿಗೆ ತನ್ನಷ್ಟಕ್ಕೆ ತಾನೇ ಕೋಟೆ ಕಟ್ಟಿಕೊಂಡಿರಲು ಸಾಧ್ಯವೆ? ಪರಕೀಯವನ್ನು ತನ್ನದೆಂದು ಸ್ವೀಕರಿಸಿ ಸಾಮರಸ್ಯದಿಂದ ಬದುಕಬೇಕು ಎಂದು ಕವಿ ದ್ವಂದ್ವವನ್ನ ನಮ್ಮ ಮುಂದಿಟ್ಟು ಕವನದ ಒಳಗೆ ಅದರ ಸಮಾಧಾನವನ್ನೂ ಇಟ್ಟಿದ್ದಾರೆ.

ಪ್ರಸ್ತುತಿ - ಚೈತ್ರಾ ಶಿವಯೋಗಿಮಠ

ನಿಮ್ಮೊಡನಿದ್ದೂ ನಿಮ್ಮಂತಾಗದೆ
(ಕವನ ಸಂಕಲನ - ಸಂಜೆ ಐದರ ಮಳೆ)

ನಿಮ್ಮೊಡನಿದ್ದೂ ನಿಮ್ಮಂತಾಗದೆ
ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲೇ ಬೇರೊತ್ತಿದರೂ ಬಿಗಿ
ಪರಕೀಯನಾಗಿ
ತಲೆ ಎತ್ತುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

ವೃತ್ತದಲ್ಲಿ ಉನ್ಮತ್ತರಾದ
ನಿಮ್ಮ ಕುಡಿತ ಕುಣಿತ ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ -
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ
ಸಂಯಮವನ್ನೇ ಪೋಷಿಸಿ ಸಾಕುತ್ತ
ರೇಖೆಯಲ್ಲೇ ದೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ. (1)

ಒಳಗೊಳಗೇ ಬೇರು ಕೊಯ್ದು
ಲೋಕದೆದುರಲ್ಲಿ ನೀರು ಹುಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿ ಹೀರಿ ಪೇಪರೋದಿ ಹರಟೆ
ಬಾಳ ತಳ್ಳುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ. (2)

ನಿಮ್ಮ ಮಾತುಕತೆಗಳಲ್ಲಿ ಹುದುಗಿದ ಬೆಕ್ಕು
ಸಂಶಯದ ಪಂಜವೆತ್ತಿ
ನನ್ನ ನಂಬಿಕೆ ನಿಯತ್ತು ಹಕ್ಕು
ಕೊನೆಗೆ ಸಾಚಾತನವನ್ನು ಪರಚಿ, ಒತ್ತಿ
ನೋವಿಗೆ ಕಣ್ಣು ತುಂಬಿದ್ದರೂ
ಚೆಲ್ಲಿದ ರಕ್ತದಲ್ಲಿ ರಾಷ್ಟ್ರೀಯತೆಯ ಧಾತುಗಳ
ನನ್ನೆದುರಲ್ಲೇ ತನಿಖೆ ಮಾಡುವ ಕ್ಷಣವನ್ನು
ಹುಸಿ ನಗುತ್ತ ಎದುರಿಸುವುದಿದೆಯಲ್ಲ
ಅದು ಬಲು ಕಷ್ಟದ ಕೆಲಸ.

ಪ್ರಸ್ತುತಿ - ಶುಭಶ್ರೀ ಪ್ರಸಾದ್

ಅಧ್ಯಕ್ಷ ಭಾಷಣ

ಸ್ನೇಹಿತರೆ ಎಲ್ಲರಿಗೂ ನಮಸ್ಕಾರ.

ಸಾಹಿತ್ಯ ದಾಸೊಹದ ಸಂಪ್ರದಾಯದ ಪ್ರಕಾರ ಅಧ್ಯಕ್ಷರು ಕೊನೆಯಲ್ಲಿ ಅಂದು ಮಂಡಿತವಾದ ಕವನ, ಕಥೆಗಳ ಬಗಗೆ ಸೂಕ್ಷವಾಗಿ ತಮ್ಮ ಅನಿಸಿಕೆಗಳನ್ನು ತಿಳಿಸುತ್ತಾರೆ. ಆದರೆ ಇಂದು ನಾನು ಕಾಲದ ಪರಿಮಿತಿಯನ್ನು ಪರಿಗಣಿಸಿ ಹಾಗೆ ಮಾಡದೆ ಪ್ರೋ.ನಿಸಾರ್ ಅಹಮದ್ ಅವರಿಗೆ ನಮನ ರೂಪವಾಗಿ ಅವರ ಸಾಹಿತ್ಯ ಕೃಷಿಯ ಬಗ್ಗೆ ಒಂದು ವಿಹಂಗಮನೋಟವನ್ನು ಬೀರಲಿಚ್ಛಿಸುತ್ತೇನೆ.

ಪ್ರೋ.ನಿಸಾರ್ ಅಹಮದ್ ಅವರದು ಬಹುದಿಶಾ ವ್ಯಕ್ತಿತ್ವ, ಹಲವು ಕ್ಷೇತ್ರಗಳ ಸಾಧನೆ, ಅನನ್ಯವಾದ ಸೃಜನ ಶೀಲತೆ. ಅವರು ನನ್ನ ವಿದ್ಯಾ ಗುರುಗಳು, ಬೆಂಗಳೂರಿನ ಇಂಟರ್ಮ್ಮಿಡಿಯಟ್ ಕಾಲೇಜಿನಲ್ಲಿ 1963-65 ಮೂರು ವರ್ಷಗಳಕಾಲ ನಮಗೆ ಭೂವಿಜ್ಞಾನವನ್ನು ಬೋಧಿಸಿದವರು. ಅಂದು ಅಟ್ಲಾಸ್, ಯೂಲಿಸಿಸ್, ಎರ್ ಪೋರ್ಟ್ ಅನಿಮಲ್ ಫಾರಂ, ಕ್ರೈಮ್ ಅಂಡ್ ಪನಿಷ್ಮೆಂಟ್ ಮುಂತಾದ ಆಂಗ್ಲ ಕಾದಂಬರಿಗಳನ್ನ ಓದುವುದೇ ಹೆಗ್ಗಳಿಕೆ ಎಂದು ಭಾವಿಸಿದ್ದ ನಮಗೆ ಕನ್ನಡ ಕಾವ್ಯದ ರುಚಿಯನ್ನು ತೋರಿಸಿದವರು. ಆ ಮೂರು ವರ್ಷಗಳ ಅವರೊಡನೆಯ ನನ್ನ ಒಡನಾಟವನ್ನು ಅವರ ಅಭಿನಂದನಾ ಗ್ರಂಥದಲ್ಲಿ ಪ್ರಕಟಿತವಾಗಿದ್ದ ನನ್ನ ಲೇಖನ – ಗುರುವೇ ತಸ್ಮಯ್ ನಮಃ-ದಲ್ಲಿ ನೆನಪಿಸಿಕೊಂಡಿದ್ದೇನೆ. ಅಲ್ಲಿ ಅವರ ವ್ಯಕ್ತಿತ್ವದ ಸ್ಥೂಲ ಪರಿಚಯವೂ ಆಗುತ್ತದೆ. ಹಾಗಾಗಿ ಈಗ ನಾನು ಕೇವಲ ಅವರ ಸಾಹಿತ್ಯ ಸೃಷ್ಟಿಯ ಬಗ್ಗೆಯೇ ಮಾತನಾಡುತ್ತೇನೆ. ಕೊಟ್ಟಿರುವ 10 ನಿಮಿಷಗಳಲ್ಲಿ ಆ ಹಿಮಾಲಯದ ಒಂದು ಸ್ನಾಪ್ ಶಾಟ್ ತೋರಿಸಲು ಪ್ರಯತ್ನಿಸುತ್ತೇನೆ.

ನಿಸಾರ್ ಅವರ ಸಾಹಿತ್ಯ ಕೃಷಿಯನ್ನು ಮೂರು ಭಾಗಗಳಲ್ಲಿ ಅವಲೋಕಿಸಬಹುದು. ಕಾವ್ಯ, ಗದ್ಯ, ಅನುವಾದ ಮತ್ತು ಸಂಪದಕೀಯ. ಕನ್ನಡ ಸಾಹಿತ್ಯ ಪ್ರಿಯರಾದ ನಿಮಗೆಲ್ಲಾ ಅದರ ವಿವರಗಳು ತಿಳಿದಿದೆ ಆದ್ದರಿಂದ ಅವುಗಳ ಪಟ್ಟಿಯನ್ನು ನಾನು ಕೊಡಲು ಹೋಗುವುದಿಲ್ಲ. ಕೇವಲ ಈ ವಿವಿಧ ಪ್ರಕಾರಗಳ ವಿಶೇಷತೆ, ಸೌಂದರ್ಯ, ದರ್ಶನಗಳ ಬಗ್ಗೆ ವಿದ್ವಾಂಸರು ಹೇಳಿರುವುದನ್ನು ನೆನಪಿಸಿಕೊಳ್ಳಲಿಚ್ಛಿಸುತ್ತೇನೆ.

ನಿಸಾರ್ ಅವರ ಸಾಹಿತ್ಯದ ಹರಹು, ಆಳ ಅಗಾಧವಾದದ್ದು. ಪ್ರಕೃತಿಮಾತೆಯ ಸೌಂದರ್ಯವನ್ನು ಚಿತ್ರಿಸುವಂತೆಯೇ, -ಬಾ ಬೇಟಕೆ ಎಂದು ತನ್ನ ಸಖೀ/ ಬಾಳ ಸಂಗಾತಿಯನ್ನು ಕರೆಯುತ್ತಾರೆ, ರಾಮನ್ ಸತ್ತಸುದಿಯಿಂದ ತಳಮಳಗೊಂಡ ಅವರ ಮನಸ್ಸನ್ನು ಚಿತ್ರಿಸುತ್ತಾರೆ ಸಾಮಾನ್ಯರ ಕುರಿಬುದ್ದಿಯನ್ನು ತೋರುತ್ತಾರೆ, ಯಾವ ತಾಯಿಯಾಗಾದರೂ (ಹಾಗೆ ನೋಡಿದರೆ ಎಲ್ಲರಿಗೂ) ಆಪ್ಯಾಯಮಾನವಾಗುವ ಬೆಣ್ಣೆ ಕಳ್ಳ ಕೃಷ್ಣನ ಚಿತ್ರ ಬಿಡಿಸುತ್ತಾರೆ, ಶೇಕ್ಸ್ಪಿಯರ್ನಷ್ಟೇ ಸಮರ್ಥವಾಗಿ ಅವನ ಓಥೆಲೋವಿನ ಪಾತ್ರ ಮರುಸೃಷ್ಟಿಸುತಾರೆ, ಸ್ವಸಂಸ್ಕøತಿ ಬೇರುಗಳಿಲ್ಲದ ಸ್ವಾತಂತ್ರ್ಯೋತ್ತರ ತಳಿಗಳಾದ .ಸ್ವಯಂಸೇವೆಯ ಗಿಳಿಗಳತ್ತ ಬೊಟ್ಟುಮಾಡುತ್ತಾರೆ. ಅವರನ್ನು ಮೆಚ್ಚಿಕೊಂಡ ಅವರ ಸಮಕಾಲೀನ, ಕಿರಿಯ, ಹಿರಿಯ ಕವಿಗಳ ಮಾತಿನಲ್ಲೇ ಅವರು ಕೃಷಿಮಾಡಿದ ಮೂರು ಪ್ರಕಾರಗಳ ಬಗ್ಗೆ ದೃಷ್ಟಿ ಹರಿಸೋಣ

ಕಾವ್ಯ:

ನಿಸಾರರು ನವ್ಯ ಕವಿಯೋ, ನವೋದಯ ಕವಿಯೋ ಅನ್ನುವ ಚರ್ಚೆ ಬಹಳ ನಡೆಯಿತು. ಅದರೆ ನಾನು ಅವರನ್ನ ಕರೆಯ ಬಯಸುವುದು ಅವರು ನವ್ಯೋದಯದ ಕವಿ ಎಂದು. ಎರಡು ಸಂಸ್ಕøತಿಗಳ ಸುಂದರ ಸಂಮಿಶ್ರಣÀವಾಗಿದ್ದ ಅವರ ವ್ಯಕ್ತಿತ್ವ, ಅವುಗಳ ಸಾರವಾದ ವಿಶಾಲ ದೃಷ್ಟಿಯನ್ನು ಅವರ ಕವನಗಳಲ್ಲಿ ಕಾಣುತ್ತೇವೆ, ಪ್ರೇಮ, ಪ್ರೀತಿ, ವಿರಹ, ಹರ್ಷ, ವಾತ್ಸಲ್ಯ, ಜೀವನೋತ್ಸಾಹದಂತ ಸುಮಧುರ ಭಾವನೆಗಳ ಜೊತೆಗೆ, ವೈಜ್ಞಾನಿಕ, ವೈಚಾರಿಕ, ಪ್ರಬುದ್ಧ ದಾರ್ಶನಿಕ ಚಿಂತನೆಗಳು ಅವರ ಕಾವ್ಯದಲ್ಲಿ ಕಾಣುತ್ತೇವೆ, ಪ್ರೋ.ಜಿ.ವಿ ಅವರು ಹೇಳುವಂತೆ ನಿಸಾರ್ ಒಬ್ಬ ಅಭಿಜಾತ ಕವಿ. ಕವಿಯಾಗಿ ಅವರು ಬೆಳೆಯುತ್ತಲೇ ಹೋದರು. ನಿಸಾರರ ಭಾಷೆ ಸ್ವಂತಿಕೆಯಿಂದ ಕೂಡಿದ್ದು. ಅವರ ಒಂದು ಕವನವನ್ನು ಬೇರೆ ತೆಗೆದು ಇಟ್ಟು ಓದಿದರೂ ಅದು ನಿಸಾರರದೇ ಎಂದು ಹೇಳಿಬಿಡಬಹುದು. ಅವರು ಪರಭಾಷಾ ಪದಗಳನ್ನು ಕನ್ನಡದ ಪದವೇ ಎಂದು ಭ್ರಮಿಸುವಂತೆ/ ಭಾವಿಸುವಂತೆ ಉಪಯೋಗಿಸುವುದು ಅನ್ಯಾದೃಶ್ಯವಾದದ್ದು..ಕುÀರಿಗಳು

ಸಾರ್ ಕುರಿಗಳು ಕವನದಲ್ಲಿ ನೋಡಿ - ಕಚಕ್ಕೆಂದು ಕಡಿದು ಬಿರ್ಯಾನಿಯ, ಮೆಹರ್ಬಾನಿಯ ಎಂಬ ಪದಗಳು, ಕೆಲವು ಖಾಲಿ ಸೈಟು ಮದುವೆ ಲೇಟಾದ ಕನ್ಯೆಯರ ಥೇಟು ಕನ್ನಡ ಪದಗಳೆಂದೇ ಅನ್ನಿಸಿ ಬಿಡುತ್ತದೆ. ನೂರಾರು ಹೊಸ ಪದಗಳನ್ನೇ ಸೃಷ್ಟಿಸಿದ್ದಾರೆ.- ಗುಮಾನಿಸು, ಸ್ಲಮ್ಮಿಗ, ಇಥಿಯೋಪಿಯತನ ಮುಂತಾಗಿ. ಅವರು ಉರ್ದು, ಪಾರಸಿ ಅರಬ್ಬೀ ಇಂಗ್ಲೀಷು, ಸಂಸ್ಕೃತ ಪದಗಳ ಉದ್ದೇಶಿತ ವಿಲಕ್ಷಣ ಪ್ರಯೋಗದಿಂದ ತಮ್ಮದೇ ಆದ ಒಂದು ಭಾಷಾ ವೈಶಿಷ್ಟ್ಯವನ್ನು ಸೃಷ್ಟಿಮಾಡಿಕೊಂಡಿದ್ದರು.

ನಮ್ಮೆಲ್ಲರ ಗುರು ದ್ರೋಣರಾದ ಪ್ರಾಚಾರ್ಯ ಎಚೆಸ್ಕೆ ಅವರು ಮೆಚ್ಚಿಕೊಂಡಿದ್ದ ಒಬ್ಬ ಕವಿ ನಿಸಾರ್. ಅವರು ಹೇಳುತ್ತಾರೆ " ಇತರ ನವ್ಯಕವಿಗಳಲ್ಲಿ ಇರದಿದ್ದ ಒಂದು ಬಗೆಯ ಸರಳತೆ. ಏಳು ಸುತ್ತಿನ ಕೋಟೆಯಲ್ಲಿ ಹುದುಗಿಕೊಳ್ಳದ ಪ್ರವೃತ್ತಿ, ಸ್ನೇಹಪ್ರಿಯತೆ, ವಯಸ್ಸಿಗೆ ಮೀರಿದ ಆತ್ಮವಿಶ್ವಾಸ, ಅದರೂ ಎಲ್ಲ ಅನುಭವಗಳಿಗೂ ತಮನ್ನು ತೆರೆದು ಕೊಳ್ಳುವ ಗುಣ – ಇವುಗಳಿಂದಾಗಿ ನಿಸಾರ್ ಅಹಮದ್ ನನಗೆ ಬಲು ಹತ್ತಿರ. ಅಷ್ಟೇ ಪ್ರಿಯ"

ಪ್ರಾ. ಎಚೆಸ್ಕೆಯವರು ಮತ್ತೆ ಹೇಳುತ್ತಾರೆ ವ್ಯಂಗ್ಯ, ವಿಡಂಬನೆ, ನಗೆ, ಸಲಿಗೆಗಳು ನಿಸಾರ್ ಅಹಮದರ ಅನೇಕ ಕವನಗಳಲ್ಲಿ ಲಿಲಾಜಾಲವಾಗಿ ಲಾಸ್ಯವಾಡುತ್ತದೆ. ನಗೆಗಡಲಿನಲ್ಲಿ ತೇಲಾಡುತ್ತಾ ಥಟ್ಟನೆ ಸಾಗರದ ಆಳಕ್ಕೆ ಸಾಗಿಬಿಡುತ್ತದೆ. ಸಂಪ್ರದಾಯವನ್ನು ಸರಿಸಿ ಸ್ವಲ್ಪ ಸ್ವಾತಂತ್ರ್ಯ ವಹಿಸುವ ಪ್ರಯತ್ನವೂ ಸಾಮಾನ್ಯ, ಇದು ಭಾಷೆಗೆ ಸಂಬಂಧಿಸಿದ್ದಾಗಿರಬಹುದು. ಕಟ್ಟು ಕಂದಾಚಾರಗಳಿಗೆ ಸಂಬಂಧಪಟ್ಟದ್ದಾಗಿರಬಹುದು.. ಕನ್ನಡ ಸಂಸ್ಕøತ ಪದಗಳೇ ಅಲ್ಲದೆ ಉರ್ದು ಮತ್ತು ಇತರ ಭಾಷೆಯ ಪದಗಳನ್ನು ಸೇರಿಸುವುದು, ನಾಮಪದಗಳಿಗೆ ಇಸು ಪ್ರತ್ಯಯವನ್ನು ಕೂಡಿಸುವುದು, ಪದಗಳನ್ನು ತಿರುಚುವುದು, ಸಾಮಾನ್ಯವೆನಿಸುವಂಥ ಪದಗಳಿಗೆ ಕಾವ್ಯ ಗುಣ ತುಂಬಿ ಅವು ರೆಕ್ಕೆ ಬಿಚ್ಚಿ ಹಾರುವಂತೆ ಜಾದು ಮಾಡುವುದು, ವಿಶಿಷ್ಟವಾದ ಲಯಗಾರಿಕೆ ಮೆರೆಯುವುದು – ಇವು ನಿಸಾರ್ ಕವಿತೆಯ ಕೆಲವು ಲಕ್ಷಣಗಳು.

ಇಂದಿನ ದಾಸೋಹದಲ್ಲಿ ಮಿತ್ರರಿಂದ ಮಂಡಿತವಾದ ಅವರ ಕವನಗಳ ನೋಟ ನನ್ನ ಈ ಮಾತಿಗೆ ಪುಷ್ಟಿಕೊಡುತ್ತದೆ.

ನಿಸಾರರ ಕವನಗಳು ಸುಗಮಸಂಗೀತವಾಗಿ ಲಕ್ಷಾಂತರ ಕನ್ನಡಿಗರಿಗೆ ಮುದ ನೀಡಿದೆ. ಕನ್ನಡದಲ್ಲಿನ ಸುಗಮಸಂಗೀತದ ಮೊಟ್ಟಮೊದಲ ಧ್ವನಿಸುರಳಿ ನಿಸಾರರದೇ. ಇದಕ್ಕೆ ಸಹಕರಿಸಿದವರು ಮತ್ತೊಬ್ಬ ಮೋಡಿಕಾರ ಗಾಯಕ ಮೈಸೂರು ಅನಂತಸ್ವಾಮಿಯವರು.

1962ರಲ್ಲಿ ಚೀನೀಯರ ಆಕ್ರಮಣದ ಕಾಲದಲ್ಲಿ ಅವರು ಬರೆದಿದ್ದ ರಾಷ್ಟ್ರಭಕ್ತಿ ಉಕ್ಕಿಹರಿವ ಗೀತೆಗಳು 'ನೆಲ ನಿಮ್ಮದು ಜಲನಿಮ್ಮದು' 'ಅಭಿವಂದನೆ ನಿಮಗೆ' 'ಧ್ವಜ ವಂದನೆ' ಗೀತೆಗಳನ್ನು ಬೆಂಗಳೂರು ಆಕಾಶವಾಣಿ ಮತ್ತೆ ಮತ್ತೆ ಪ್ರಸಾರಮಾಡುತ್ತಿತ್ತು. ದಾವಣಗೆರೆ ಏನ್ ಸಿ ಸಿ ಕ್ಯಾಂಪಿನಲ್ಲಿ ನಾವೈವರು ಮಿತ್ರರು ಅವರ ಧ್ವಜವಂದನೆ ಗೀತೆ ಹಾಡಿದಾಗ ಅವರಿಗೆ ಅತ್ಯಂತ ಸಂತೋಷವಾಗಿತ್ತು.

ನಿಸಾರ್ ಕಾವ್ಯ ಗುಣಗಾನ ಮಾಡುತ್ತಲೇ ಹೋಗಬಹುದು. ಕಾಲದ ಪರಿಮಿತಿಯನ್ನು ಪರಿಗಣಿಸಿ ಸ್ವಲ್ಪ ಅದರಿಂದ ಸರಿದು ಅವರ ಗದ್ಯಭಂಡಾರದ ಕಡೆಗೆ ಗಮನ ಹರಿಸೋಣ.

ಗದ್ಯ :

ಕೇವಲ ಒಂದೇ ಒಂದು ಕವಿತೆ- ನಿತ್ಯೋತ್ಸವದಿಂದಾಗಿ ರಾತ್ರಿಯಿಂದ ಬೆಳಗಾಗುವುದರೊಳಗಾಗಿ ಲೋಕಪ್ರಯರಾಗಿ ಹೋದ ಕವಿ ಎಂದರೆ ಬಹಶಃ ನಿಸಾರ್ ಅವರೊಬ್ಬರೇ. ಜನಮಾನಸ ಕವಿ ಎಂದಾಗಿ ಬಿಟ್ಟರು. ಆದರೆ ದುರದೃಷ್ಟವಶಾತ್ ಅದರಿಂದಾಗಿ ಅವರ ಇತರ ಸಾಹಿತ್ಯ ಸೃಷ್ಟಿಗೆ ಸಲ್ಲಬೇಕಾದ ಗೌರವ ಖ್ಯಾತಿ ಇಲ್ಲದೇ ಹೋಯಿತು. ನಿಸಾರ್ ಕಾಲದ ಎಲ್ಲ ಶ್ರೇಷ್ಟ ಕವಿಗಳೂ ಗದ್ಯ ರಚನೆ ಮಾಡಿದ್ದಾರೆ. ಅಡಿಗರು, ಕುವೆಂಪು, ಪುತಿನ ಹೀಗೆ. ಬಹುಶಃ ಅವರೆಲ್ಲರಿಗೂ ಅದೊಂದು ಅವಶ್ಯಕತೆ ಎನಿಸಿರಬಹುದು. ನಾನು ನಿಸಾರರ ಕಾವ್ಯವನ್ನಷ್ಟೇ ಓದಿಕೊಂಡಿದ್ದವ. ಹೀಗಾಗಿ

ಅವರ ಗದ್ಯದಬಗ್ಗೆ ಬರೆಯುವ ಕ್ಷಮತೆ, ಧೋರಣೆ, ಧಾರ್ಷ್ಟ್ಯ ನನಗಿಲ್ಲ. ಇತರ ವಿಮರ್ಶಕರು ಅದರ ಬಗೆ ಹೇಳಿರುವ ಮಾತನ್ನಷ್ಟೇ ಇಲ್ಲಿ ಉದ್ಧರಿಸುತ್ತೇನೆ.

ತಾವೇಕೆ ಗದ್ಯ ಬರೆಯಲು ಶುರುಮಾಡಿದೆ ಎನ್ನುವುದನ್ನು ನಿಸಾರ್ ಅವರೇ ಒಂದು ಕಡೆ ವಿವರಿಸಿದ್ದಾರೆ. "ಬಹಳ ಸಮಯದಿಂದ ನನ್ನ ಮನಸ್ಸಿನಲ್ಲಿ ಸ್ಪಷ್ಟವಾಗಿಯೋ ಅಮೂರ್ತವಾಗಿಯೋ ಮನೆ ಮಾಡಿದ್ದ ಅನೇಕಾನೇಕ ಭಾವನೆಗಳು, ವಿಚಾರಗಳು, ನನ್ನ ಕವಿತೆಗಳ ಇತಿಮಿತಿ ಚೌಕಟ್ಟಿಗೆ ಮೀರಿದಂಥವು, ನನ್ನ ಗದ್ಯ ಲೇಖನಗಳಲ್ಲಿ ಆಕಾರ ತಳೆದಿವೆ. ವಿಶ್ಲೇಷಕ ಹಾಗೂ ವಿವರಣಾತ್ಮಕ ಅಗತ್ಯಗಳಿಗೆ ತಕ್ಕಂತೆ ತಮ್ಮ ಬೆಳವಣಿಗೆಯನ್ನು ಕಂಡಿವೆ. ಭಾಷೆಯ ಬಳಕೆಯಲ್ಲಿ, ಅಭಿವ್ಯಕ್ತಿ ಕ್ರಮದ ರೀತಿಯಲ್ಲಿ ಕೂಡಿದ ರಚನೆಗಳ ಹಿನ್ನೆಲೆಯಲ್ಲಿ ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದೆ."

ನಿಸಾರ್ ಅವರ ಗದ್ಯದ ವಸ್ತು ವೈವಿಧ್ಯವೂ ವಿಫಲವಾದದ್ದು. ಅವುಗಳಲ್ಲಿ ವ್ಯಕ್ತಿ ಕೃತಿ ಚಿಂತನೆಗಳಿದೆ, ಧಾರ್ಮಿಕ, ಪೌರಾಣಿಕ ಸಂಬಂಧಿತ ಚಿಂತನೆಗಳಿದೆ, ಸಾಮಾಜಿಕ, ರಾಜಕೀಯ ಸಂಗತಿಗಳಿದೆ, ವ್ಯಕ್ತಿತ್ವ ಚಿತ್ರಣದ ಅನನ್ಯತೆ ಇದೆ, ವಿಜ್ಞಾನ. ಶಿಕ್ಷಣದ ವಿಶೇಷತೆಗಳಿದೆ. ಭಾರತೀಯ ಕಾವ್ಯಮೀಮಾಂಸೆಯ ಪ್ರಕಾರ ಕಾವ್ಯವು ಗದ್ಯ ರೂಪದಲ್ಲಿರಬಹುದು. ಗದ್ಯ ಕೇವಲ ಅರ್ಥಪೂರ್ಣ ಶುಷ್ಕ ಪಂಕ್ತಿಗಳಾಗದೆ ಒಂದು ಸೃಜನ ಶೀಲ ಸೃಷ್ಟಿಯಾದಾಗ ಕಾವ್ಯಗುಣವನ್ನು ಹೊಂದಿ ಹೃದ್ಯವಾಗುತ್ತದೆ ಎನ್ನುತ್ತಾರೆ ನಿಸಾರರನ್ನು ಚೆನ್ನಾಗಿ ಬಲ್ಲವರಾಗಿದ್ದ ಡಾ. ಪಿ. ಎಸ್ .ರಾಮಾನುಜಂ. ನಿಸಾರರ ಇಂತಹ ಗದ್ಯ ಶೈಲಿಗೊಂದು ಉದಾಹರಣೆ ನೋಡಿ. ಮಹಾ ಸಂಗೀತಜ್ಞರಲ್ಲಿರುವ ಪ್ರತಿಭೆಯ ಮಹತ್ವವನ್ನು ನಿಷ್ಕರ್ಷಿಸುವುದು ಹೇಗೆ ಎಂದು ತಿಳಿಸುವ ಸಾಲುಗಳು

"ಪ್ರತಿಭೆಯ ಮಹತಿಯನ್ನು, ಕಲೌನ್ನತ್ಯವನ್ನು ನಾವು ನಿಷ್ಕರ್ಷಿಸಬೇಕಾದ್ದು ಮಾರ್ಗಾನುಸರಣತೆಯಿಂದಲ್ಲ; ಪರಿಣಾಮರೂಪಿ ಸಿದ್ದಿಯ ಪರಿಪೋರ್ಣತೆಯನ್ನು ಪರಿಗಣಿಸಿ. ಸ್ವೋಪಜ್ಞ ಪ್ರತಿಭಾಚೇತನವೊಂದರ ಅಂತರ್ದರ್ಶನದ ಪ್ರಾರಂಭಿಕ ಹೊಳಹುಗಳು ಸಾಂಗವಾಗಿ ಬೆಸದು ಸೊಪೂರ್ಣವಾಗಿ ಸೌಂದರ್ಯಕೃತಿಯಾಗಿ ಹೇಗೆ ಘಟಿಸುತ್ತದೆ ಎನ್ನುವುದು ಕಾವ್ಯಕಲೆಗಳ ವಿಷಯದಲ್ಲಿ ಗಣನೆಗೆ ಬರಬೇಕಾದ ವಿಷಯ." ಈ ದೊಡ್ಡ ವಾಕ್ಯವನ್ನು ಸಣ್ಣ ಸಣ್ಣ ಸಾಲಾಗಿ ಕತ್ತರಿಸಿ ಜೋಡಿಸಿದರೆ ಕವನ ವಾಗಿ ಬಿಡುತ್ತದೆ ಅಲ್ಲವೇ.

ಮತ್ತೊಬ್ಬ ವಿದ್ವಾಂಸರು ಹೇಳಿರುವುದು- "ನಿಸಾರ್ ಅಹಮದ್ ಗದ್ಯ ಬರಹಗಳಲ್ಲಿ ನಗೆಯಿದೆ, ಹೊಗೆಯಿದೆ, ಕಿಡಿಯಿದೆ, ಕಿಚ್ಚಿದೆ, ಜ್ಞಾನ ವಿಜ್ಞಾನದ ತಾಕಲಾಟವಿದೆ, ವಿಚಾರ ವಿಹಾರದ ಬೆಳಕಿದೆ, ಮಾನವೀಯ ಸಂಬಂಧದ ಸಂವಾದವಿದೆ, ಬೌದ್ದಿಕ ಕಸರತ್ತಿದೆ, ರಸವಂತಿಕೆಯ ರುಚಿಯಿದೆ, ತುಪ್ಪದ ದೀಪದ ಕಾಂತಿಯಿದೆ, ಲೋಕಜ್ಞಾನದ ವಿಹಂಗಮ ನೋಟವಿದೆ, ಸಾಹಿತ್ಯ ಮತ್ತು ಬದುಕಿನ ಅವಿನಾ ಸಂಬಂಧದ ತುಡಿತವಿದೆ, ಸಾಮಾನ್ಯದಿಂದ ಅಸಾಮಾನ್ಯಕ್ಕೆ ಚಿಮ್ಮುವ ಚೇತನದ ಆಶಯವಿದೆ." ನಿಸಾರ್ ಅಹಮದ್‌ರ ಸಮಗ್ರ ಪ್ರತಿಭೆಯ ಗ್ರಹಿಕೆಗೆ ಅವರ ಕವಿತೆಗಳಂತೆ ಲೇಖನಗಳೂ ಸಹಕಾರಿಯಾಗಿವೆ. ಕನ್ನಡ ಸಾರಸ್ವತ ಲೋಕದಲ್ಲಿ ನಿಸಾರರ ಸ್ಥಾನ ನಿರ್ದೇಶನದ ಸಂದರ್ಭದಲ್ಲಿ ಅವರ ಪ್ಯದ್ಯ ಗದ್ಯ ಬರಹಗಳೆರಡನ್ನೂ ಸಮ ಪ್ರಮಾಣದಲ್ಲಿ ಸಮದರ್ಶಿತ್ವದಲ್ಲಿ ಪರಿಶೀಲಿಸಬೇಕಾಗುತ್ತದೆ.

ನಿಸಾರರ ಗದ್ಯ ಸಾಹಿತ್ಯದ ಮತ್ತೊಂದು ಮಜಲು -ವ್ಯಕ್ತಿ- ಕೃತಿ ಚಿಂತನೆ. ಆಗಿನ ಕಾಲದ ನಾಡಿನ ಬಹುತೇಕ ಹಿರಿಯ ಸಾಹಿತಿಗಳ -ವೀ.ಸಿ, ಕುವೆಂಪು,ಮಾಸ್ತಿ ವೀಕೃ, ಏಆರ್ ಕೃಷ್ಣ ಶಾಸ್ತ್ರಿ, ಡಿವಿಜಿ ಯವರ ಬಗ್ಗೆ ಬರೆದಿದ್ದಾರೆ. ಒಬ್ಬೊಬ್ಬ ಸಾಹಿತಿಯ ವ್ಯಕ್ತಿತ್ವ, ವಿಚಾರ, ಕೃತಿ ಶ್ರೇಷ್ಠತೆ, ಪರಿಸರ, ಅವರವರ ಸ್ವಭಾವ, ಒಲವುಗಳ ಸಾರವನ್ನು ಸಂಗ್ರಹಿಸಿ ಕೊಟ್ಟಿರುವ ಶುಚಿ, ರುಚಿಯಾದ ಗದ್ಯ ಬರಹಗಳು.

ಭಾಷಾಂತರ ಮತ್ತು ಸಂಪಾದಿತ ಕೃತಿಗಳು.

ಅವರು ಭಾಷಾಂತರಿಸಿರುವ ಎರಡು ಶೇಕ್ಸಪಿಯರನ ನಾಟಕಗಳು – ಮಿಡ್ ಸಮರ್ಸ್ ನೈಟ್ ಡ್ರೀಮ್ಸ್ ಹಾಗೂ ಒಥೆಲೋ. ಈ ಎರಡೂ ಅನು ಸೃಷ್ಟಿಗಳು. ಮಾಸ್ತಿಯವರು ಮೆಚ್ಚಿಕೊಂಡು ತಮ್ಮ ಭಾಷಾಂತರ ಕಾವ್ಯ ಗ್ರಂಥದಲ್ಲಿ ಸೇರಿಸಿದ್ದಾರೆ. ಡ್ರೀಮ್ಸ್‌ಗೆ ಮುನ್ನುಡಿಯನ್ನು ಬರೆದಿರುವ ಅವರು ಹೇಳಿರುವ ಮಾತು- "ಶ್ರೀಯುತರು ಈ ಕೃತಿಯಲ್ಲಿ ನಮಗೆ ಕೊಟ್ಟಿರುವುದು ಭಾಷಾಂತರವಲ್ಲ. ಭಾಷಾಂತರವೆಂದರೆ ಮೂಲದ ಯಾವ ಮಾತನ್ನೂ ಬಿಡಬಾರದು. ಮೂಲಕ್ಕೆ

ಯಾವ ಮಾತನ್ನೂ ಸೇರಿಸಬಾರದು, ಮೂಲದ ಯಾವ ಮಾತನ್ನೂ ತೀರ ಬೇರೆ ಮಾಡಬಾರದು. ಇಂತಹ ಭಾಷಾಂತರ ಮಾಡಿದ್ದರೆ ಈ ನಾಟಕ ಈ ಕೃತಿಯಲ್ಲಿ ಈಗ ಇರುವಂತೆ ಇರುತ್ತಿರಲಿಲ್ಲ. ನಿಸಾರರು ಕೆಲವು ಮಾತುಗಳನ್ನು ಬಿಟ್ಟಿದ್ದಾರೆ, ಬೇರೆ ರೂಪದ ಛಂದಸ್ಸಿನ ಪದ್ಯವನ್ನು ಬಳಸಿದ್ದಾರೆ, ಬೇರೆ ಮತುಗಳನ್ನು ಹಾಕಿದ್ದಾರೆ. ಆದ್ದರಿಂದ ಇದೊಂದು ಛಾಯಾನುವಾದ. ಅದು ಯಶಸ್ವಿಯಾಯಿತೆನ್ನುವುದಕ್ಕೆ ಅದು ರಂಗದಮೇಲೆ ಬಂದ ವೇಳೆ ಪ್ರೇಕ್ಷಕರು ಮತ್ತೆ ಮತ್ತೆ ನಕ್ಕದ್ದೂ ನಲಿದದ್ದೂ ಸಾಕ್ಷಿ.

ಬಹಳಷ್ಟು ಚರ್ಚಿತವಾಗಿರುವ ಅವರ ಓಥೆಲೋ ನಾಟಕದ ಭಾಷಾಂತರದ ಬಗ್ಗೆ ನಾನು ಹೇಳಲು ಸಮಯವಿಲ್ಲ. ಮುಂದೊಂದು ದಿನ ಆತ್ಮೀಯ ಮಿತ್ರರೂ ಶ್ರೇಷ್ಟ ನಟರೂ ಆದ ಧೀರೇಂದ್ರರು ಅದರ ಬಗೆ ವಿವರ ನೀಡಬಹುದು.

"ಬೈ ವಿಮರ್ಶೆ ಜೈ ವಿಮರ್ಶೆ" ಲೇಖನ ವಿಮರ್ಶೆಯ ಪರಿಕಲ್ಪನೆಗೆ ಸಂಬಂಧಪಟ್ಟದ್ದು. ವಿಮರ್ಶೆಮಾಡುವಾಗ ಅದು ಲೇಖಕನಿಗೆ ಬದ್ಧವಾಗಿರಬೇಕೆ/ ಅಥವ ಕೃತಿಗೆ ನಿಷ್ಠವಾಗಿರಬೇಕೆ ಎಂಬ ಮೂಲಭೂತ ಪ್ರಶ್ನೆಯನ್ನು ಅದು ಎತ್ತುತ್ತದೆ. ನಿಜವಾದ ವಿಮರ್ಶಕ ಹೇಗೆ ಕೃತಿಯನ್ನು ವಿಮರ್ಶೇಮಾಡಬೇಕು ಎನ್ನುವುದರ ಬಗ್ಗೆ ಮಾರ್ಗದರ್ಶನಮಾಡುತ್ತದೆ.

ವಿಶ್ವಕಥಾ ಕೋಶದ ಒಂಬತ್ತನೆಯ ಸಂಪುಟವಾದ ರಷ್ಯದ ಕಥೆಗಳನ್ನು - ಹೆಜ್ಜೆ ಗುರುತು - ಎನ್ನುವ ಶೀರ್ಷಿಕೆಯೊಂದಿಗೆ ಅನುವಾದಿಸಿದ್ದಾರೆ. ಇನ್ನು ಅವರು ಸಂಪಾದಿತ ಕೃತಿಗಳೂ ಅತ್ಯಂತ ಶ್ರೇಷ್ಠಮಟ್ಟದವು. ಕೇವಲ 10 ನಿಮಿಷದಲ್ಲಿ ನಿಸಾರ್ ಸಾಹಿತ್ಯದ ವಿರಾಟ್ ಸ್ವರೂಪವನ್ನು ಪರಿಚಯಮಾಡಿಕೊಡುತ್ತೇನೆ ಎನ್ನುವುದು ಒಂದು ಹುಚ್ಚುಸಾಹಸವೇ ಸೈ.

ಕೆಲವರು ನಿಸಾರ್ ಅವರನ್ನು ಬಹಳ ನಿಷ್ಠೂರ ವ್ಯಕ್ತಿ ಎನ್ನುತ್ತಿದ್ದರು. ಅದು ಸರಿಯಲ್ಲ. ಪರಿಚಯವಾಗುವರೆಗೆ ಒಂದುತೂಕದಲ್ಲೆ ಮಾತನಾಡುತ್ತಿದ್ದರು. ಆಮೇಲೆ ಬಹಳ ಆಪ್ಯಾಯಮಾನತೆ. ನಾನು ಹಲವು ಬಾರಿ ಅವರ ಮನೆಗೆ ಹೋಗಿದ್ದೆ. ನನ್ನ ಚೊಚ್ಚಲ ಕವನ ಸಂಕಲನ - ಕದಂಬ ದ ಪ್ರತಿಯನ್ನು ಕೊಡಲು ಹೋದಾಗ, ಒಂದು ತುಂಟ ನಗೆಯೊಂದಿಗೆ "ಯಾವಾಗಲಿಂದ ಕವನ ಬರೆಯಲು ಶುರು ಮಡಿದೆ" ಎಂದು ಕೇಳಿದ್ದರು. ಆನಂತರ ಭಾರತೀ ವಿದ್ಯಾಭವನದಲ್ಲಿ ನಡೆದ ಒಂದು ಕವಿ ಸಮ್ಮೇಳನದಲ್ಲಿ ನನ್ನ ಹೆಸರನ್ನು ಸೇರಿಸುವಂತೆ ಮಾಡಿದ್ದರು. ಅವರಿಗೆ ಸಂಗೀತದಲ್ಲೂ ಅಭಿರುಚಿ ಇತ್ತು. ನನ್ನ ಮಗಳು ಒಬ್ಬ ಉತ್ತಮ ಹಿಂದೂಸ್ತಾನಿ ಶಾಸ್ತ್ರೀಯ ಸಂಗಿತ ಗಾಯಕಿ ಎಂದು ಕೇಳಿದಾಗ ಒಮ್ಮೆ ಅವರ ಮನೆಯಲ್ಲೆ ಒಂದು ಬೈಠಕ್ ಮಾಡೋಣ ಎಂದಿದ್ದರು. 2010ರಲ್ಲಿ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ನಡೆದ ನನ್ನ ಚಿತ್ರಕಲಾ ಪ್ರದರ್ಶನಕ್ಕೆ ಬಂದು ಪ್ರತಿಯೊಂದು ಚಿತ್ರದ ವಿವರ ಪಡೆದು ನೋಡಿ ಖುಷಿಪಟ್ಟಿದ್ದರು. ಸುಮಾರು 45 ನಿಮಷಗಳಷ್ಟು ಕಾಲ ಕಳೆದು ಕೆಲವು ಅಮೂಲ್ಯ ಸಲಹೆಗಳನ್ನು ಕೊಟ್ಟಿದ್ದರು. ಅವರ ಆತ್ಮೀಯ ಒಡನಾಟ ನನ್ನ ಮನಸ್ಸಿನಲ್ಲಿ ಚಿರಸ್ಥಾಯಿಯಾಗಿ ಉಳಿದಿರುತ್ತದೆ.

ನನ್ನ ಮಟ್ಟಿಗಾದರೆ ನಾನು ಇಂದಿನ ಕವಿಗಳ ಕಾವ್ಯ, ಕವನಗಳನ್ನು ಅಳೆಯುವ ಮೀಟರ್ ನಿಸಾರ್. ಅದು ತಪ್ಪೋ ಸರಿಯೋ ನನಗೆ ಗೊತ್ತಿಲ್ಲ. ನಮ್ಮ ದಾಸೋಹಿ ಮಿತ್ರರು ಅವರ ಸಾಹಿತ್ಯವನ್ನು ಹೆಚ್ಚು ಹೆಚ್ಚು ಓದಲಿ ದಾಸೋಹದಲ್ಲಿ ಈ ಅಸಮಾನ್ಯ ಕವಿ ಚೇತನವನ್ನು ನೆನೆಸಿಕೊಳ್ಳೋಣ ಎಂದು ಹೇಳಿ ಮತ್ತೊಮ್ಮೆ ಅವರಿಗೆ ನನ್ನ, ನಮ್ಮೆಲ್ಲರ ನಮನಗಳನ್ನು ಸಲ್ಲಿಸುತ್ತಾ ವಿರಮಿಸುತ್ತೇನೆ.

9.5.2020 ಶನಿವಾರದಂದು ನಡೆದ ವಿಶೇಷ ಸಾಹಿತ್ಯ ದಾಸೋಹ ' ನಿತ್ಯೋತ್ಸವ ಕವಿನಮನ" ಕಾರ್ಯಕ್ರದಲ್ಲಿ ನಾನು ಮಂಡಿಸಿದ ಅಧ್ಯಕ್ಷೀಯ ಲೇಖನ.

ಎಸ್. ಸೀತಾರಾಮು - **9880219663**

ನಿಸಾರ್ ಅಹಮದ್ - ಸಂಕ್ಷಿಪ್ತ ಪರಿಚಯ
(5.2.1936 - 3.5.2020)

ಜೀವನ

ನಿಸಾರ್ ಅಹಮದ್ ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಫೆಬ್ರುವರಿ 5,1936ರಲ್ಲಿ ಜನಿಸಿದರು. 1959ರಲ್ಲಿ ಭೂವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದರು. 1994ರ ವರೆಗೆ ವಿವಿಧ ಸರಕಾರಿ ಕಾಲೇಜುಗಳಲ್ಲಿ ಅಧ್ಯಾಪಕ ಹಾಗು ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾದರು.

ಸಾಹಿತ್ಯ

ನಿಸಾರ್ ಅಹಮದ್ ಅವರ ಸಾಹಿತ್ಯಾಸಕ್ತಿ 10ನೇ ವಯಸ್ಸಿನಲ್ಲೇ ಆರಂಭ.'ಜಲಪಾತ'ದ ಬಗ್ಗೆ ಬರೆದ ಕವನ ಕೈಬರಹದ ಪತ್ರಿಕೆಯಲ್ಲಿ ಅಚ್ಚಾಗಿತ್ತು. ಅವರು ಇಲ್ಲಿಯವರೆಗೆ (2018) 21 ಕವನ ಸಂಕಲನಗಳು, ೧೪ ವೈಚಾರಿಕೆ ಕೃತಿಗಳು, 5 ಮಕ್ಕಳ ಸಾಹಿತ್ಯ ಕೃತಿಗಳು, 5 ಅನುವಾದ ಕೃತಿಗಳು, 13 ಸಂಪಾದನಾ ಗ್ರಂಥಗಳನ್ನು ಹೊರತಂದಿದ್ದಾರೆ.

ಅವುಗಳಲ್ಲಿ ಮನಸು ಗಾಂಧಿಬಜಾರು ಹಾಗು ನಿತ್ಯೋತ್ಸವ ಇವು ಪ್ರಸಿದ್ಧ ಕವನ ಸಂಕಲನಗಳಾಗಿವೆ. ನಿಸಾರ್ ಅಹಮದ್ ಸಂವೇದನಾಶೀಲ ಹಾಗೂ ಜನಪ್ರಿಯ ಕವಿ.
1978ರಲ್ಲಿ ಇವರ ಮೊದಲ ಭಾವಗೀತೆಗಳ ಧ್ವನಿಮುದ್ರಿಕೆ ನಿತ್ಯೋತ್ಸವ ಹೊರಬಂದು, ಕನ್ನಡ ಲಘುಸಂಗೀತ (ಸುಗಮ ಸಂಗೀತ) ಕ್ಷೇತ್ರದಲ್ಲಿ ಭರ್ಜರಿ ಯಶಸ್ಸು ಪಡೆಯಿತು. ಇದುವರೆಗೂ (2018) 13 ಧ್ವನಿಸುರುಳಿಗಳ ಮೂಲಕ ಅವರು ರಚಿಸಿದ ಕವನಗಳು, ಗೀತೆಗಳು ಸಂಗೀತದೊಂದಿಗೆ ಪ್ರಚುರಗೊಂಡಿವೆ.
ಕುರಿಗಳು ಸಾರ್ ಕುರಿಗಳು, ರಾಜಕೀಯ ವಿಡಂಬನೆ ಕವನ
ಭಾರತವು ನಮ್ಮ ದೇಶ (ಸರ್ ಮೊಹಮದ್ ಇಕ್ಬಾಲ್ ಅವರ ಸಾರೆ ಜಹಾಂ ಸೆ ಅಚ್ಚಾ ಕವನದ ಕನ್ನಡ ಭಾಷಾಂತರ)
ಬೆಣ್ಣೆ ಕದ್ದ ನಮ್ಮ ಕೃಷ್ಣ ಕವನ ಕವಿಯ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿವೆ.

ಕೃತಿಗಳು

ಕವನ ಸಂಕಲನಗಳು

ಮನಸು ಗಾಂಧಿ ಬಜಾರು (1960)
ನೆನೆದವರ ಮನದಲ್ಲಿ (1964)
ಸುಮಹೂರ್ತ (1967)
ಸಂಜೆ ಐದರ ಮಳೆ (1970)
ನಾನೆಂಬ ಪರಕೀಯ (1972)
ಆಯ್ದ ಕವಿತೆಗಳು (1974)
ನಿತ್ಯೋತ್ಸವ (1976)
ಸ್ವಯಂ ಸೇವೆಯ ಗಿಳಿಗಳು (1977)

ಅನಾಮಿಕ ಆಂಗ್ಲರು(1982),
ಬರಿರಂತರ (1990)
ಸಮಗ್ರ ಕವಿತೆಗಳು (1991)
ನವೋಲ್ಲಾಸ (1994)
ಆಕಾಶಕ್ಕೆ ಸರಹದ್ದುಗಳಿಲ್ಲ (1998)
ಅರವತ್ತೈದರ ಐಸಿರಿ(2001)
ಸಮಗ್ರ ಭಾವಗೀತೆಗಳು(2001)
ಪ್ರಾತಿನಿಧಿಕ ಕವನಗಳು(2002)
ನಿತ್ಯೋತ್ಸವ ಕವಿತೆ
ಗದ್ಯ ಸಾಹಿತ್ಯ ಸಂಪಾದಿಸಿ
ಅಚ್ಚುಮೆಚ್ಚು
ಇದು ಬರಿ ಬೆಡಗಲ್ಲೊ ಅಣ್ಣ
ಷೇಕ್ಸ್ ಪಿಯರನ ಒಥೆಲ್ಲೊದ ಕನ್ನಡಾನುವಾದ
ಅಮ್ಮ ಆಚಾರ ಮತ್ತು ನಾನು' (ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್ ಕೃತಿಯ ಕನ್ನಡಾನುವಾದ)

ಪ್ರಶಸ್ತಿ ಪುರಸ್ಕಾರಗಳು

2006ರ ಮಾಸ್ತಿ ಪ್ರಶಸ್ತಿ.
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ
ಗೊರೂರು ಪ್ರಶಸ್ತಿ
ಅನಕೃ ಪ್ರಶಸ್ತಿ
ಕೆಂಪೇಗೌಡ ಪ್ರಶಸ್ತಿ
ಪಂಪ ಪ್ರಶಸ್ತಿ
1981ರ ರಾಜ್ಯೋತ್ಸವ ಪ್ರಶಸ್ತಿ
2003ರ ನಾಡೋಜ ಪ್ರಶಸ್ತಿ
2006ರ ಅರಸು ಪ್ರಶಸ್ತಿ
2006 ಡಿಸೆಂಬರಿನಲ್ಲಿ ಶಿವಮೊಗ್ಗದಲ್ಲಿ ನಡೆದ 73ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನಿತ್ಯೋತ್ಸವ ಕವಿ ನಿಸಾರ್ ಅಹಮದ್ (84) ಪದ್ಮನಾಭಗರದಲ್ಲಿರುವ ಸ್ವಗೃಹದಲ್ಲಿ ಮೇ ಮೂರನೇ ತಾರೀಖು, ಭಾನುವಾರ ನಿಧನರಾದರು. ಕ್ಯಾನ್ಸರ್‌ನಿಂದ ಬಳಲುತ್ತಿದ್ದರು. ಕೆಲ ಸಮಯ ಆಸ್ಪತ್ರೆಗೂ ದಾಖಲಾಗಿದ್ದರು. ಅಮೆರಿಕದಲ್ಲಿದ್ದ ಅವರ ಪುತ್ರ ಈಚೆಗಷ್ಟೇ ಮೃತಪಟ್ಟಿದ್ದರು.

ಕವಿ ಮಿತ್ರರ ಅಚ್ಚುಮೆಚ್ಚಿನ ಕಾವ್ಯ

ಪ್ರೊ.ಎಚ್ಚೆಸ್ಕೆ

ನಾಡೋಜ ಪ್ರೊ.ಕೆ.ಎಸ್.ನಿಸಾರ್ ಅಹಮದ್ ಅವರ 70 ಸಂವತ್ಸರಗಳನ್ನು ಪೂರೈಸಿ (2006) 71ರಲ್ಲಿ ಮುನ್ನಡೆದಿರುವ ಶುಭ ಸಂದರ್ಭದಲ್ಲಿ ಕನ್ನಡ ಸಾಹಿತ್ಯದ ಸಪ್ತ ದಿಗ್ಗಜರಾದ ಪ್ರೊ.ಜಿ.ವೆಂಕಟಸುಬ್ಬಯ್ಯ, ಡಾ.ಡಿ.ಜವರೇ ಗೌಡ, ಪ್ರೊ.ಎಚ್ಚೆಸ್ಕೆ, ವ್ಯಾಸರಾಯ ಬಲ್ಲಾಳ ಹಾಗೂ ಡಾ.ಪ್ರಭುಶಂಕರ ಅವರುಗಳ ಸಂಪಾದಿತ ಆವೃತ್ತಿ, ಅಭಿನಂದನ ಗ್ರಂಥ -"ನಿಸಾರ್ ನಿಮಗಿದೋ ನಮನ". ಈ ಗ್ರಂಥದಲ್ಲಿ ಕನ್ನಡ ಸಾಹಿತ್ಯದ ಮಹಾನ್ ಬರಹಗಾರರು, ಕವಿ-ವಿಮರ್ಶಕ-ಚಿಂತಕರ 212 ಲೇಖನಗಳನ್ನು 1783 ಪುಟಗಳಲ್ಲಿ ಸಂಗ್ರಹಿಸಲಾಗಿದೆ. ಈ ಅಭಿನಂದನ ಗ್ರಂಥದಿಂದ ನನ್ನ ಅಚ್ಚುಮೆಚ್ಚಿನ ಪ್ರೊ.ಎಚ್ಚೆಸ್ಕೆ ಅವರ "ಕವಿ ಮಿತ್ರರ ಅಚ್ಚುಮೆಚ್ಚಿನ ಕಾವ್ಯ" ಎಂಬ ಲೇಖನದ ಬಗ್ಗೆ ಸಂಕ್ಷಿಪ್ತ ಪರಿಚಯವನ್ನು ಪ್ರಸ್ತುತಪಡಿಸಲು ಸಂತೋಷವಾಗುವುದು.

ಪ್ರೊ.ಕೆ.ಎಸ್.ನಿಸಾರ್ ಎಂದೊಡನೆ ನನ್ನ ಮನಸ್ಸು ಅರ್ಧ ಶತಮಾನಗಳ ಹಿಂದಕ್ಕೆ ಹೋಗುವುದು. ನಿಸಾರ್ ಅಹಮದ್ ಕವಿಯಾಗಿ, ಚಿಂತನಶೀಲರಾಗಿ, ಗದ್ಯಶಿಲ್ಪಿಯಾಗಿ, ಚತುರ ಮಾತುಗಾರರಾಗಿ, ಸ್ನೇಹಜೀವಿಯಾಗಿ, ಸಂಘಟನಾ ಕುಶಲರಾಗಿ ನಿರಂತರವಾಗಿ ವಿಕಾಸಗೊಳ್ಳುತ್ತಲೇ ಬಂದಿದ್ದಾರೆ. ಹೊಸತನವೇ ಇವರ ಪ್ರತಿಭೆಯ ಬೀಸು. 1956ರರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದ ಜಿ.ಪಿ.ರಾಜರತ್ನಂ ಅವರು ಹೊಸ ಪ್ರತಿಭೆಯನ್ನು ಹುಡುಕುವ ಕಾರ್ಯದಲ್ಲಿ ಮಗ್ನರಾಗಿದ್ದರು. ಇಂದು ವಿಶೇಷ ಖ್ಯಾತಿ ಗಳಿಸಿರುವ ಕವಿಗಳು ಆಗಿನ್ನೂ ವಿದ್ಯಾರ್ಥಿ ವಿದ್ಯಾರ್ಥಿನಿಗಳು. ಅವರಲ್ಲಿ ಪ್ರೊ.ಕೆ.ಎಸ್.ನಿಸಾರ್ ಅಹಮದ್ ಒಬ್ಬರು. ಅವರು ಆಗ ಉದಿತೋದಿತ ಭೂ ವಿಜ್ಞಾನಿ.

ಅವರ ಭೂ ವಿಜ್ಞಾನಿಗೆ ಸಹಜವೆನಿಸುವ ಚಿಂತನವನ್ನು ಈ ಕೆಳಗೆ ವೀಕ್ಷಿಸೋಣ:

"ನಿಮಿಷವೈದು ಕಳೆಯಲಿಲ್ಲ
ಬಂದು ನಾನು ಇಲ್ಲಿಗೆ;
ಕೊಡುತಲಿಹೆನೆ ಮಾರ್ದನಿಯನು
ನೈಸರ್ಗಿಕ ಸೊಲ್ಲಿಗೆ!
ಕಳೆದ ಕೋಟಿ ಕೋಟಿ ವರುಷ
ನನ್ನ ಚುರುಕು ಕಣ್ಣಿಗೆ
ತೋರುತಿಹವು ಒಂದು ದಿವಸ-
ವಾಗಿ ಬಹಳ ಸಣ್ಣಗೆ!
ನನ್ನ ಭಾವದೊಳಗೆ ಅವಿತು
ಕುಣಿಯುತಿಹುದು ನಂದನ;
ಎಲ್ಲೆ ಇರದ ಮಹಾ ವಿಶ್ವ-
ವೆಲ್ಲ ಇಲ್ಲಿ ಬಂಧನ"

ಕಲ್ಪ ಕಲ್ಪವಳಿವ ಮುನ್ನ ಲೋಹ, ನೀರು, ಕಲ್ಲು, ಚಿನ್ನ - ಆಗ ಬರಿಯ ಧೂಮ, ಧೂಮ! ಆದರೆ ಆ ಧೂಮದ ಮರೆಯಲ್ಲಿ ಅಡಗಿದ್ದ ಭೂಮ. "ಜಡದ ಮಣ್ಣುಕಲ್ಲು 'ಲಾವ', ಸ್ಪರ್ಶ ತಾಗಲೆಲ್ಲ ಜೀವ!" ಎಂಬುದನ್ನು ಕಂಡು ಬೆರಗು! ಆದರೆ ಇದು ಬರಿ ಬೆಡಗಲ್ಲೋ ಅಣ್ಣಾ! ಎಂಬ ಎಚ್ಚರ. ಹೊಸ ಹೊಸ ಭಾವಗಳನ್ನು ಸದಾ ಕಾಣುವ, ಕಟ್ಟುವ ಪ್ರಜ್ಞೆಯೂ ಇದ್ದಾಗ ಮಾತ್ರ ಪ್ರತಿಭೆ ಸಾರ್ಥಕವಾಗುತ್ತದೆ. ಅದು ಮೂಲ ದ್ರವ್ಯ ಶಕ್ತಿ. ಅದರ ಜೊತೆಗೆ ನಿಪುಣತೆಯನ್ನೂ ಸಂಪಾದಿಸಿಕೊಳ್ಳಬೇಕು. ಲೋಕದ ನಡವಳಿಕೆಯನ್ನು ಅರಿಯುವುದರ ಮೂಲಕ, ಗ್ರಂಥ ವ್ಯಾಸಂಗ ಮಾಡುವುದರ ಮೂಲಕ ಬರುವಂಥದ್ದು ವ್ಯುತ್ಪತ್ತಿ. ಇವೆರಡಕ್ಕೂ ಕೂಡಿದಂತೆ ಸತತ ಅಭ್ಯಾಸ. ಇವುಗಳಿಗೆ ನಿಸಾರ್ ಅಹಮದ್ ಅವರ ಸಾಹಿತ್ಯ ಒಂದು ನಿದರ್ಶನ. ಪ್ರತಿಭೆ, ವ್ಯುತ್ಪತ್ತಿ, ಅಭ್ಯಾಸಗಳ ಹಿನ್ನೆಲೆಯಲ್ಲಿ ಪ್ರಜ್ಞೆಯೂ ಕೆಲಸ ಮಾಡುತ್ತಿರುತ್ತದೆ. ಹಿಂದೆ ಆದದ್ದರ ನೆನಪು, ಈಗ ನಡೆಯುತ್ತಿರುವುದರ ಪರಿಶೀಲನೆ, ಮುಂದೆ ಆಗಬಹುದಾದದ್ದನ್ನು ಕುರಿತ ಊಹೆ - ಇವೆಲ್ಲವನ್ನೂ ಒಳಗೊಂಡಂತೆ ಕಾವ್ಯ ಸೃಷ್ಟಿಯ ಕಾರ್ಯದಲ್ಲಿ ತೊಡಗಿದ ಕವಿಯ ಕೃತಿ ಸಾರ್ಥಕವೆನಿಸುತ್ತದೆ. ಇವೆಲ್ಲ ಲಕ್ಷಣಗಳಿಂದ ಕೂಡಿದ್ದು ನಿಸಾರ್ ಅಹಮದ್ ಅವರ ಕಾವ್ಯಸೌಧ.

ಕಾವ್ಯ ರಚನೆಯ ಹಿಂದೆ ವಿಮರ್ಶನ ಪ್ರಜ್ಞೆಯೂ ಇದ್ದಾಗಲೇ ಕವನದ ಸಾರ್ಥಕತೆ. ಇದಿಲ್ಲದಿದ್ದರೆ ಕವಿತೆ ಕಾಲು ಮುರಿದುಕೊಳ್ಳುತ್ತದೆ, ಕೇವಲ ಭಾವಾವೇಶದ ಬುರುಗಾಗುತ್ತದೆ. ಸದಾ ಬೆಳೆಯುತ್ತಲೇ ಇರುವ, ಹಚ್ಚ ಹಸುರಿನ ಗುಣವನ್ನು ಉಳಿಸಿಕೊಂಡಿರುವ ಕವಿ ನಿಸಾರ್ ಅಹಮದ್ ಅವರು ಕೂಡ ವಿಫುಲವಾಗಿ ಕಾವ್ಯ ರಚಿಸುವುದರ ಜೊತೆಗೆ ಗದ್ಯವನ್ನೂ ಯಥೇಚ್ಛವಾಗಿ ಬರೆಯುತ್ತಾ ಬಂದಿದ್ದಾರೆಂಬುದು ಗಮನಿಸಬೇಕಾದ ಸಂಗತಿ.

"ಬಿತ್ತಿ ಬಿಸಿ ನೆತ್ತರನು ಕಾಗದದ ಭೂಮಿಯಲಿ ಸೃಷ್ಟಿಸಿದೆನಕ್ಷರಗಳೆಂಬ ನರರನ್ನು!
ನಿಲ್ಲಿಸಿದೆನಲ್ಲಲ್ಲಿ ಒಟ್ಟುಗೂಡಿಸಿ ಕೆಲರ, ಕರೆದೆ 'ಪದ'ವೆನ್ನುತಾ ಗುಂಪಿನವರನ್ನು! ಕೂಡಿಸೀ ಗುಂಪುಗಳ
ಕವಿತೆಯೆಂದಿದ ಕರೆದು ಹಲರನಿಳಿಸಿದೆನಣ್ಣ ರಸವುಳ್ಳ ಹಣ್ಣ! ಬೇರೆ ಜನರದು ಬೇರೆ ಗಟ್ಟಿ ಗುಂಪಿರಬಹುದು; ಅವರ
ಜೊತೆಗಿವರೂನೆ ಇರಲಿ, ಬಿಡಿರಣ್ಣ!"

ಎನ್ನುತ್ತಾ ಕಾವ್ಯ ಕ್ಷೇತ್ರವನ್ನು ಪ್ರವೇಶಿಸಿದ ನಿಸಾರ್ ಅಹಮದ್ ನಡೆದುಬಂದ ದಾರಿಯತ್ತ ಎಂದೂ ಕಣ್ಣು ಹೊರಳಿಸಿದವರಲ್ಲ. ಯಾವುದೇ ಪಂಥಕ್ಕೆ ಇವರು ಕಟ್ಟಿಕೊಂಡವರಲ್ಲ. ನವ್ಯವೋ, ನವೋದಯವೋ, ನವ್ಯೋತ್ತರವೋ, ಯಾರು ಏನೇ ಹೇಳಲಿ, ಅಂತೂ ಬರೆದದ್ದು ಅಪ್ಪಟ ಕಾವ್ಯವಾಗಿರಬೇಕು.

ನಿಸಾರ್ ಅಹಮದ್ ಅವರು ಕಾವ್ಯ ರಚನೆಯಲ್ಲಿ ತೊಡಗಿದಾಗ ಕನ್ನಡದಲ್ಲಿ ನವ್ಯಕಾವ್ಯ ಪ್ರಕಾರ ಆರಂಭವಾಗಿತ್ತು. ಇತರ ನವ್ಯ ಕವಿಗಳಲ್ಲಿ ಇರದಿದ್ದ ಒಂದು ಬಗೆಯ ಸರಳತೆ, "ಏಳುಸುತ್ತಿನ ಕೋಟೆ"ಯಲ್ಲಿ ಹುದುಗಿಕೊಳ್ಳದ ಪ್ರವೃತ್ತಿ, ಸ್ನೇಹಪ್ರಿಯತೆ, ವಯಸ್ಸಿಗೆ ಮೀರಿದ ಆತ್ಮವಿಶ್ವಾಸ, ಆದರೂ ಎಲ್ಲ ಅನುಭವಗಳಿಗೂ ತಮ್ಮನ್ನು ತೆರೆದುಕೊಳ್ಳುವ ಗುಣ - ಇವುಗಳಿಂದ ನಿಸಾರ್ ಅಹಮದ್ ಎಲ್ಲರಿಗೂ ಪ್ರಿಯ.

ನಿಸಾರ್ ಅಹಮದ್ ಅವರದ್ದು ಪಾರದರ್ಶಕ ಮಾತು, ಬದುಕು, ಅನಿಸಿದ್ದನ್ನು ನೇರವಾಗಿ ಅಂದುಬಿಡುವ ಗುಣ. ಅವರ ಕಾವ್ಯದಲ್ಲೂ ಒಂದು ರೀತಿಯಲ್ಲಿ ಬೆಚ್ಚಿಬೀಳಿಸುವ, ಆದರೆ ಹೊಚ್ಚ ಹೊಸದಾದ ಚಿತ್ರವೊಂದನ್ನು ಕಟ್ಟಿಕೊಡುವ ಸಾಮರ್ಥ್ಯ. ಉರ್ದು- ಮನೆ ಮಾತಾದ ನಿಸಾರ್ ಅಹಮದರಿಗೆ ಉರ್ದು, ಕನ್ನಡ ಎರಡೂ ನಡುಮನೆ-ಅಡಿಗೆಮನೆ ಇದ್ದ ಹಾಗೆ. ತಮ್ಮದಲ್ಲದ್ದು ಎನ್ನಬಹುದಾದ ಸಂಸ್ಕೃತಿಯನ್ನು ಅದ್ಭುತ ಎನಿಸುವಂತೆ ಇವರು ಅರಗಿಸಿಕೊಂಡಿದ್ದಾರೆ. ಅನ್ಯ ಸಂಸ್ಕೃತಿಯ, ಅನ್ಯ ಭಾಷೆಯ ಪದಗಳನ್ನು ಇನ್ನೊಂದು ಸಂಸ್ಕೃತಿಯ ಅನುಭವದ ಅಭಿವ್ಯಕ್ತಿಗೆ ಅವರು ದುಡಿಸಿಕೊಂಡಿದ್ದಾರೆ. "ಖಾಲಿ ಸೈಟುಗಳು" ಎಂಬ ಕವನದ ತುಂಬಾ ಈ ಲಕ್ಷಣವು ಮಿನಿಗುತ್ತದೆ. ಸಾಮಾನ್ಯವಾಗಿ ಬಳಸುವ ಮಾತುಗಳ ಬೆಂಗಡೆಯಲ್ಲಿ ಅವಿತು ಕುಳಿತ ಸತ್ಯ ಈ ಮಾತುಗಳ ಸಂದಿನಿಂದ ಹೊರಬಿದ್ದು ಓದುಗರ ಕಣ್ಣನ್ನು ಕೋರೈಸುತ್ತದೆ. ಈ ಸಾಲುಗಳನ್ನು ಗಮನಿಸಿ :

"ನಮ್ಮಂತರಾಳಗಳ ಲೇಔಟುಗಳಲ್ಲು ಇವೆ

ಖಾಲಿ ಸೈಟುಗಳು;
ಅಲ್ಲಿ ಅಕ್ರಮವಾಗಿ ತಳವೂರಿವೆ;
ಅಟ್ಟಲಾಗದ ಕಠೋರ ನೆನಹುಗಳು
ಗಿಜಿಗುಡುವ ಬಡ ಕುಟೀರಗಳು,
ಹಳೆ ಹತಾಶೆಗಳ ಗಟಾರದಂಚಿನ ನಾರುವ ಒಠಾರಗಳು
ವಿಷಾದದ ಆಗುಹೋಗುಗಳು;
ಮಾ ನಿಷಾದದ ವ್ಯರ್ಥ ಕೂಗುಗಳು"

ನಗರಗಳ ನಡುವಿನ ಖಾಲಿ ಸೈಟುಗಳ ವರ್ಣನೆಯಿಂದ ಆರಂಭವಾಗುವ ಈ ಕವನ ಕ್ರಮೇಣ ಅಸಾಧಾರಣವಾದ ಶಕ್ತಿ ತುಂಬಿಕೊಂಡು ಸಂಕೀರ್ಣವಾಗಿ ಬೆಳೆದು, ಪ್ರತಿಮೆಯಾಗಿ ಪರಿಣಮಿಸಿ, ಹಲವು ಮುಖಿಯಾಗಿ, ಅಕರಾಳವಿಕರಾಳವೂ ಆಗಿ ಘೂರ್ಣಿಸುತ್ತದೆ. ಹೊರಮನೆ-ಒಳಮನೆಗಳ ಭಾಷೆ, ಸಂಸ್ಕೃತಿಗಳ ಜೊತೆಗೆ ಇಂಗ್ಲೀಷಿನ ಪ್ರಜ್ಞೆಯನ್ನು ಕೂಡಿಸಿಕೊಂಡು ಸಾಗುವ ಈ ಕವಿತೆ ಇಂದಿನ ಜೀವನದ ಸಂಕೀರ್ಣತೆಯನ್ನು ಸರಳವಾದ ರೀತಿಯಲ್ಲೇ ಅತ್ಯಂತ ಯಶಸ್ವಿಯಾಗಿ ಅಭಿವ್ಯಕ್ತಿಸುತ್ತದೆ. ಎರಡು ಜಗತ್ತುಗಳನ್ನು ಜಂಟಿ ಮಾಡಿ ಕಸಿ ಮಾಡಿದಂತಿರುವ ಅವರ ವಿಶಿಷ್ಟ ಶೈಲಿಯ ಮೋಡಿ ಓದುಗರ ಮೈಮರೆಸುತ್ತದೆ, ಮನಸ್ಸನ್ನು ಬೇರಾವುದೋ ಲೋಕಕ್ಕೆ ಕರೆದೊಯ್ಯುತ್ತದೆ. ಈ ದೃಷ್ಟಿಯಿಂದ ನಿಸಾರರ ಕವಿತೆ ಅನನ್ಯ ಗುಣಲಕ್ಷಣವುಳ್ಳದ್ದು.

ಭಾರತದ್ದು ಸರ್ವಧರ್ಮಗಳನ್ನು, ಸಂಸ್ಕೃತಿಗಳನ್ನು ಸಮಾನವಾಗಿ ಕಾಣುವ, ಪೋಷಿಸುವ ಆದರ್ಶ; ಎಲ್ಲ ಒಳ್ಳೆಯ ಭಾವನೆಗಳ ತೊಟ್ಟಿಲು. ಇಲ್ಲೇ ಬಾಳುವೆ ಮಾಡುತ್ತೇನೆ. ಯಾರೂ ನಮ್ಮನ್ನು ಸವತಿ ಮಕ್ಕಳಂತೆ ಕಾಣಬಾರದು ಎಂಬುದನ್ನು ಅಭಿವ್ಯಕ್ತಿಸುವ "ಸವತಿ ಮಕ್ಕಳ ಹಾಗೆ" ಕವನ ಗಮನಾರ್ಹ :

"ಬೆಳಕು ಕಂಡೆವು ಇಲ್ಲೆ, ಬಾಡಿ ಬೀಳುವೆವಿಲ್ಲೆ,
ಏನಾಟ ನಡೆದರೂ ನಿನ್ನಡಿಯ ಗಡಿಯಲ್ಲೆ,
ಮರಳಂತೆ ಸಣ್ಣಾಗಿ ಬಾಳ್ಹೊಳೆಯ ತಡಿಯಲ್ಲೆ
ಸುಡು ಬಿಸಿಲನುಂಡರೂ, ಕೈನೀಡಿನೆಡೆಯಲ್ಲೆ
ಹರಿದ ನೀರನು ಕಂಡು, ನೀರಡಿಕೆ ಉಲ್ಬಣಿಸಿ,
ನಿನ್ನ ಹಳಿಯುವ ಖೋಡಿ ತಿಳಿಗೇಡಿಗಳ ಹರಸಿ-
ತೆಗೆದುಕೋ ಇವರನ್ನೂ ಲೆಕ್ಕಕ್ಕೆ ತಾಯೆ,
ಪರದೆಯೆಳಿ, ಇವರೆದೆಯ ದುಃಖಕ್ಕೆ ತಾಯೆ,
ಸವತಿ ಮಕ್ಕಳ ಹಾಗೆ ಕಾಣಬೇಡವ್ವ,
ಸವತಿ ಮಕ್ಕಳ ಹಾಗೆ ಕಾಡಬೇಡ."

ಈ ಕವನದ ಅರ್ತತೆ, ತಾಯಿನಾಡಲ್ಲದೆ ಅನ್ಯಥಾ ಶರಣಂ ನಾಸ್ತಿ ಎಂಬ ಭಾವ ಇಲ್ಲಿ ಕೋಡಿವರಿದಿದೆ. "ತಂದೆ ತಾಯಿ ನೀನು, ಬಂಧು ಬಳಗ ನೀನು. ನೀನಲ್ಲದೆ ಮತ್ತಾರು ಇಲ್ಲವಯ್ಯಾ, ಕೂಡಲಸಂಗಮದೇವಾ, ಹಾಲಲ್ಲಾದರೂ ಹಾಕು ನೀರಲ್ಲಾದರೂ ಹಾಕು" ಎಂಬ ಕೂಡಲಸಂಗಮದೇವ ಬಸವಣ್ಣನವರ ವಚನದ ನೆನಪಾಗುತ್ತದೆ. ಇಲ್ಲಿ ಕವಿಯು ಎಲ್ಲ ಕಳವಳಗಳನ್ನೂ ಕಳೆದುಕೊಂಡು, ಉಭಯ ಸಂಕಟದಿಂದ ಪಾರಾಗಿ ಸಮಾಧಾನಚಿತ್ತವನ್ನು ತಳೆಯುತ್ತಾನೆ. ಎಲ್ಲ ತರತಮಗಳಿಂದ, ಭಿನ್ನ ಭೇದಗಳಿಂದ ಮೇಲೆದ್ದು ನಿಲ್ಲುವನು.

"ಕುರಿಗಳು, ಸಾರ್ ಕುರಿಗಳು" ಎಂಬ ಸಮಾಜ ವಿಡಂಬನೆ, "ಅಮ್ಮ, ಆಚಾರ, ನಾನು" ಎಂಬ ಕಂದಾಚಾರದ ಲೇವಡಿ, ಇವೆಲ್ಲ ಮಜಲುಗಳನ್ನೂ ದಾಟಿ ನಡೆದ ಕವಿ, "ವಾಸ್ತವಿಕ" ದೃಷ್ಟಿಯನ್ನು ತಳೆಯುವ ಮಟ್ಟಿಗೆ ಬೆಳೆದುಬಿಟ್ಟಿದ್ದಾರೆ :

"ಕಳಚಿ ಒಂದೊಂದೇ; ಕನ್ನಡಕ, ಗಡಿಯಾರ,
ಚೈನು, ಕೆರ, ಪೋಷಾಕು-
ದಿಗಂಬರತೆ ವಾಸ್ತವಿಕ.
ಕಳಚಿ ದೇಶ, ಸಮಾಜ, ಧರ್ಮ, ಮತವರ್ಗಗಳ,
ನಿರ್ಮಮತೆ ವಾಸ್ತವಿಕ.
ನಿಲ್ಲಿ, ಹುಟ್ಟಿದ ಹಾಗೆ ಗೊಮ್ಮಟನನುಕರಿಸಿ,
ನೋಡಿ ಕನ್ನಡಿಯಲ್ಲಿ ನಿಮ್ಮ ಮುಖ;
ಚರ್ಮ ಚಕ್ಕಳ ಮಾಂಸದಾಚೆ ಕಾಣದ
ಪ್ರಾಣ
ಅದರರಿವೆ ವಾಸ್ತವಿಕ." **(ವಾಸ್ತವಿಕ)**

ಸಾಹಿತ್ಯದಿಂದ ಸುಸಂಸ್ಕೃತ ವಾಚಕನಿಗೆ ಆದ್ಯತಃ ಲಭ್ಯವಾಗಬೇಕಾದ್ದು ಏನೆಂದರೆ ಮನೋರಂಜನೆಯ ನಲಿವು, ಬುದ್ಧಿ ಪ್ರಚೋದನೆಯ ತಿಳಿವು. ಮಿಕ್ಕಿದ್ದೇನಿದ್ದರೂ ಆಮೇಲೆ ಎಂದು ನಂಬಿರುವ, ಅಂತೆಯೇ ನಲಿವು ತಿಳಿವುಗಳನ್ನು ಹಾಳತವಾಗಿ ಬೆರೆಸಿ ಸಾದರಪಡಿಸುತ್ತಿರುವ ಈ ಕವಿಯ ಕಾವ್ಯವೂ ಗದ್ಯವೂ ಹೃದ್ಯವೂ ಮಾನವೀಯವೂ ಆಗುವುದರಲ್ಲಿ ಆಶ್ಚರ್ಯವೇನಿಲ್ಲ. ವಯಸ್ಸಿನಿಂದಾಗಿ ಹಿಮ್ಮೆಟ್ಟದ ಉತ್ಸಾಹ, ಅನಾರೋಗ್ಯದಿಂದಾಗಿ ಕಂಗೆಡದ ವರ್ಚಸ್ಸು, ಜೀವನದಲ್ಲಿ ಅಪಾರವಾದ ಪ್ರೀತಿ, ಕಾವ್ಯಶಾಸ್ತ್ರ ವಿನೋದಗಳಲ್ಲೂ, ಸಮಾಜ ಪರಿಷ್ಕರಣ ಕಾರ್ಯದಲ್ಲೂ, ಸಂಸ್ಕೃತಿ ಸಹೃದಯತೆಗಳನ್ನು ಹಂಚುವ ಕಾರ್ಯದಲ್ಲೂ, ನಿರತವಾದ ಮನಸ್ಸು - ಈ ಗುಣಗಳಿಂದಾಗಿ ಪ್ರೊ.ಕೆ.ಎಸ್.ನಿಸಾರ್ ಅಹಮದ್ ಎಲ್ಲರಿಗೂ ತುಂಬಾ ಅಚ್ಚುಮೆಚ್ಚು.

ಸಂಪಾದನೆ : ಗುರುಪ್ರಸಾದ್ ಹಾಲ್ಕುರಿಕೆ

ಪುಸ್ತಕ ಪರಿಚಯ

ಹೆಸರು : ನಿಸಾರ್ ನಿಮಗಿದೋ ನಮನ
ಸಂಪಾದಕರು :
ಪ್ರೊ.ಜಿ.ವೆಂಕಟಸುಬ್ಬಯ್ಯ
ಡಾ.ದೇ.ಜವರೇಗೌಡ
ಪ್ರೊ.ಎಚ್ಚೆಸ್ಕೆ
ಶ್ರೀ ವ್ಯಾಸರಾಯ ಬಲ್ಲಾಳ
ಡಾ.ಪ್ರಭುಶಂಕರ

ಪ್ರಥಮ ಮುದ್ರಣ : ಸಪ್ಟೆಂಬರ್ 2006
ಪುಟಗಳು : xxvi + 1826 + 32 = 1884

ಪ್ರಕಾಶಕರು : ಸಪ್ನಾ ಬುಕ್ ಹೌಸ್ ಪರವಾಗಿ - ಶ್ರೀಮತಿ ಭಾನುಮತಿ ಎಸ್ ಶಾ
ಮುದ್ರಕರು : ರವಿ ಗ್ರಾಫಿಕ್ಸ್
ಹಂಚಿಕೆದಾರರು : ಕರ್ನಾಟಕ ಬುಕ್ ಏಜೆನ್ಸಿ, ಗಾಂಧಿನಗರ, ಬೆಂಗಳೂರು.

ನಾಡೋಜ ಪ್ರೊ.ಕೆ.ಎಸ್.ನಿಸಾರ್ ಅಹಮದ್ ತಮ್ಮ ಬದುಕಿನ 70 ಸಂವತ್ಸರಗಳು ಪೂರೈಸಿ, 71ರಲ್ಲಿ (2006) ಮುನ್ನಡೆದಿರುವ ಶುಭ ಸಂದರ್ಭದಲ್ಲಿ ಅವರ ಸ್ನೇಹಿತರು, ಹಿತೈಷಿಗಳು ಪ್ರೀತ್ಯರ್ಥವಾಗಿ ಅಭಿನಂದನ ಗ್ರಂಥವೊಂದನ್ನು ಅರ್ಪಿಸುವ ಸದುದ್ದೇಶದಿಂದ ಹೊರತಂದಿರುವ ಬೃಹತ್ಸಂಪುಟ "ನಿಸಾರ್ ನಿಮಗಿದೋ ನಮನ".

ನಮ್ಮೆಲ್ಲರ ಗೌರವಾದರದ ಉತ್ಕೃಷ್ಟ ಕವಿ-ವಿಮರ್ಶಕ, ವೈಚಾರಿಕ ಲೇಖಕ, ಸಮರ್ಥ ಅನುವಾದಕ ಮತ್ತು ಸುಸಂಸ್ಕೃತ ವ್ಯಕ್ತಿ ನಿಸಾರ್ ಅಹಮದ್‌ರಷ್ಟು ಕನ್ನಡದ ಜನಮನವನ್ನು ಗೆದ್ದಿರುವ ಬರಹಗಾರ ಪ್ರಸಕ್ತ ಕಾಲದಲ್ಲಿ ಮತ್ತೊಬ್ಬರು ದುರ್ಲಭವೆಂದರೆ ಅತಿಶಯೋಕ್ತಿಯಾಗಲಾರದು.

ಈ ಹೆಬ್ಬೊತ್ತಿಗೆಯಲ್ಲಿ ನಮ್ಮ ಭಾಷೆಯ ಅನೇಕ ಶ್ರೇಷ್ಠ ಬರಹಗಾರರು, ಕವಿ-ವಿಮರ್ಶಕರು, ವಿವಿಧ ಸಾಮಾಜಿಕ ಕ್ಷೇತ್ರಗಳ ಗಣ್ಯ ಮಹನೀಯರು ನಿಸಾರರ ಗದ್ಯ-ಪದ್ಯ ಪ್ರಕಾರಗಳ ಮೌಲಿಕವಾದ ಬೌದ್ಧಿಕ ವಿವೇಚನೆಯನ್ನು, ಅವರ ವೈವಿಧ್ಯಮಯ ಜೀವನದ ಕೆಲವೊಂದು ಅಪರೂಪದ ಇಣುಕು ನೋಟಗಳನ್ನು ಪ್ರಸ್ತಾಪಿಸಿದ್ದಾರೆ. ಅವುಗಳ ಪ್ರಸ್ತುತತೆ ಮತ್ತು ಸಾಮಾಜಿಕ ಬದ್ಧತೆಗಳನ್ನು ಮನಗಾಣಿಸಿದ್ದಾರೆ.

ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಹು ಕಾಲದ ಒಂದು ಕೊರತೆ ಎನಿಸಿದ್ದ ನಿಸಾರರ ಬದುಕು-ಬರಹಗಳ ಬಗೆಗಿನ ಮೌಲ್ಯಯುತ ಸಮಾಲೋಚನೆ, "ನಿಸಾರ್ ನಿಮಗಿದೋ ನಮನ" ಗೌರವ ಗ್ರಂಥದ ಮೂಲಕ ನೀಗಿದಂತಾಗಿರುವುದು ಅವರ ಅಪಾರ ಸಂಖ್ಯೆಯ ತುಂಬು ಅಭಿಮಾನದ ಮೆಚ್ಚುಗಾರರಿಗೆ ಹರ್ಷದಾಯಕ ವಿಚಾರವಾಗಿದೆ.

ನಿಸಾರರ ಸಾಹಿತ್ಯ ಸಾಧನೆಯ ಹೆಚ್ಚುಗಾರಿಕೆಯನ್ನು ಕುರಿತು, ಅದಕ್ಕೆ ಪೂರಕವಾದ ಬದುಕಿನ ಕೆಲವು ಅಪೂರ್ವ ಘಟನೆಗಳನ್ನು ಕುರಿತು ಅಧ್ಯಯನ ಮಾಡಬಯಸುವವರಿಗೆ, ಬರೆಯಲು ಇಚ್ಛಿಸುವವರಿಗೆ, ಉಪನ್ಯಸಿಸಲು ಅಪೇಕ್ಷಿಸುವವರಿಗೆ ಅತ್ಯುಪಯುಕ್ತವಾದ ಆಕರಪ್ರಾಯವೂ ಸಮಗ್ರ ಪರಾಮರ್ಶನ ಸ್ವರೂಪದ್ದೂ ಆದ ಉತ್ಕೃತಿಯಾಗಿ ಇದು ನೆರವಾಗುವುದರಲ್ಲಿ ಸಂದೇಹವಿಲ್ಲ.

ಕನ್ನಡ ವಿಮರ್ಶನ ಕ್ಷೇತ್ರಕ್ಕೆ ಬೆಲೆಯುಳ್ಳ ಬಳುವಳಿ, "ನಿಸಾರ್ ನಿಮಗಿದೋ ನಮನ".

ಪುಸ್ತಕದಲ್ಲಿನ ಹೂರಣ

ಭಾಗ - 1
ಕಾವ್ಯವನ್ನು ಕುರಿತ ಲೇಖನಗಳು - 56
ಭಾಗ - 2
ಗದ್ಯವನ್ನು ಕುರಿತ ಲೇಖನಗಳು - 19
ಭಾಗ - 3
ಬಿಡಿ ಕವಿತೆಗಳ ಪ್ರಾಯೋಗಿಕ
ವಿಮರ್ಶೆ - 30
ಭಾಗ - 4
(ಅ) ಬಿಡಿ ಕವನ ಸಂಕಲನಗಳ
ಸಮಾಲೋಕನ - 16
(ಆ) ಬಿಡಿ ಗದ್ಯ ಸಂಕಲನಗಳ
ಸಮಾಲೋಕನ - 12
ಭಾಗ - 5
(ಅ) ನನ್ನ ದೃಷ್ಟಿಯಲ್ಲಿ ನಿಸಾರ್ - 49
(ಆ) ಅಮೇರಿಕನ್ನಡಿಗರ ದೃಷ್ಟಿಯಲ್ಲಿ
ನಿಸಾರ್ - 14
ಭಾಗ - 6
ನಿಸಾರರನ್ನು ಕುರಿತ ಕವಿತೆಗಳು - 16
ಭಾಗ - 7
ಅನುಬಂಧ
ಪ್ರವರ-ವಿವರ
ಲೇಖಕರ ವಿಳಾಸಗಳು

ವಿ.ಸೂ: ಈ ಬೃಹತ್ಕೃತಿಯು ನಿಮಗೆ ದೊರಕಿದಲ್ಲಿ ನೀವು ಅದೃಷ್ಟವಂತರೆಂದೇ ಭಾವಿಸಬಹುದು. ಏಕೆಂದರೆ ಇದರ ದ್ವಿತೀಯ ಮುದ್ರಣವು ಇನ್ನೂ ಮಾಡಿಲ್ಲ ಹಾಗೂ ಪ್ರಥಮ ಮುದ್ರಣದ ಪ್ರತಿಗಳು ಬಹುಷಃ ಕೆಲವೇ ಕೆಲವು ದೊರಕಬಹುದೆಂದು ನನ್ನ ಅನಿಸಿಕೆ.

- ಗುರುಪ್ರಸಾದ್ ಹಾಲ್ಕುರಿಕೆ